


894·814 308 72
ANA N94
ಗ್ರಂಥ ಸ್ವಾಮ್ಯ ವಿಭಾಗ

# ಓಪನ್ ಚಾಲೆಂಜ್

9675
1994

ಬಿ. ವಿ. ಅನಂತರಾವ್

ಸಪ್ತಗಿರಿ ಪ್ರಕಾಶನ
2, ಮಹಾರಸಾದ್ ಗಲ್ಲಿ, ಬೆಂಗಳೂರು-53.

META ENTERED

First Edition : 1994
Title of the Novel : OPEN CHALLENGE
Author : B. V. Anantharam
Rights : B. V. Anantharam
Price : Rs. 16-00

64242

ಮುದ್ರಕರು
ಶ್ರೀ ಸತ್ಯನಾರಾಯಣ ಪ್ರೆಸ್
ಬೆಂಗಳೂರು-53

ಪ್ರಥಮ ಮುದ್ರಣ : 1994
ಕೃತಿಯ ಹೆಸರು : ಓಪನ್ ಚಾಲೆಂಜ್
ಕೃತಿಗಾರರು : ಬಿ. ವಿ. ಅನಂತರಾಮ್
ಹಕ್ಕುಗಳು : ಬಿ. ವಿ. ಅನಂತರಾಮ್
ಬೆಲೆ : ರೂ. 16-00

# ಮುನ್ನುಡಿ

ಆತ್ಮೀಯ ಓದುಗ ಗೆಳೆಯ, ಗೆಳತಿಯರೇ,

ಬಿಂಕೆಯ ಹೊಸದೊಂದು ಅಸೈನ್‌ಮೆಂಟ್ ನಿಮ್ಮ ಕೈಯಲ್ಲಿಡುತ್ತಿರುವೆ. ಓದಿ ಅಭಿಪ್ರಾಯ ತಿಳಿಸಿರಿ.

ಕೃತಿಯನ್ನು ಹೊರ ತರುತ್ತಿರುವ ಸಪ್ತಗಿರಿ ಪ್ರಕಾಶನ ದವರಿಗೆ ಕೃತಜ್ಞ.

ಮುಖಚಿತ್ರ ಕಲಾವಿದರಿಗೂ ಅಚ್ಚುಕೂಟದ ಗೆಳೆಯರಿಗೂ ವಂದನೆ.

ವಿಶ್ವಾಸವಿರಲಿ
ಬಿ.ವಿ. ಅನಂತರಾಮ್

1652, ಪ್ರಕಾಶನಗರ,
ಮೂರನೆ ಹಂತ,
ಬೆಂಗಳೂರು-560 021

ಶ್ರೀ ಬಿ. ವಿ. ಅನಂತರಾವ್‌ರವರ

ನಮ್ಮ ಮುಂಬರುವ ಕಾದಂಬರಿಗಳು

# ಗೋಲ್ಡನ್ ಗನ್

# ಫೈನಲ್ ಅಸಾಲ್ಟ್

# ಬ್ಲಡಿ ಎನ್‌ಕೌಂಟರ್

# ಟಚ್ ಮಿ ನಾಟ್

# 1

ಬೆಳಿಗ್ಗೆ ಎಂಟರ ವೇಳೆಗೆ ವಾಷಿಂಗ್‌ಟನ್‌ನ ಕೆನಡಿ ಇಂಟರ್‌ನ್ಯಾಷನಲ್ ಏರ್‌ಪೋರ್ಟ್ ಜನಸಂದಣಿಯೊಡನೆ ತುಂಬಿ ತುಳುಕುತ್ತಿತ್ತು.

ಲಾಬಿಯಲ್ಲಿ ಫ್ಲೈಟ್ ಕ್ಯಾಚ್ ಮಾಡಲು ಬಂದವರು, ಬರಲಿರುವ ಫ್ಲೈಟ್‌ಗಳಲ್ಲಿ ಬರುವ ತಮ್ಮ ಆಪ್ತೇಷ್ಟರನ್ನು ಸ್ವಾಗತಿಸಿ ಹಾರತುರಾಯಿ ಅರ್ಪಿಸಲು ಬಂದವರು ನೆಂಟರಿಷ್ಟರನ್ನು ವೆಲ್‌ಕಂ ಮಾಡಲು ಆಗಮಿಸಿರುವವರು ಫ್ಲೈಟ್ ಅನೌನ್ಸ್‌ಮೆಂಟ್ಸ್ ಶ್ರದ್ಧೆಯೊಡನೆ ಕೇಳಿಸಿಕೊಳ್ಳುತ್ತಾ ಸಹನೆಯೊಡನೆ ಕುಳಿತಿದ್ದರು.

ಏರ್‌ಪೋರ್ಟ್ ಕೆಫೇಟೇರಿಯಾದ ಒಂದು ಮೂಲೆಯಲ್ಲಿ ಕುಳಿತಿದ್ದ ಸಿಂಗರ್. ಅವನ ಕೈನಲ್ಲಿ ಹೊಗೆಯಾಡುತ್ತಿರುವ ಬ್ಲಾಕ್ ಕಾಫಿ ಕಪ್ ಇತ್ತು. ಅವನ ಕಣ್ಣುಗಳು ಲಾಬಿಯಲ್ಲಿರುವ ವ್ಯಕ್ತಿಗಳ ತೀವ್ರ ಪರಿಶೀಲನೆಯಲ್ಲೇ ತೊಡಗಿದ್ದವು.

ಅಮೇರಿಕನ್ ಪೌರ ಸಿಂಗರ್. ಆರಡಿ ಉದ್ದ ತೆಳ್ಳಗೆ ಬೊಂಬಿನಂತಿದ್ದ ಸಿಂಗರ್‌ನನ್ನು ನೋಡಿದವರು ಯೂಸುಯಲ್ ಆಗಿ ಅವನು ಹಾಲಿವುಡ್ ಡೈರೆಕ್ಟರ್ ಅಂದುಕೊಳ್ಳುವುದೇ ಹೆಚ್ಚು. ಮುವತ್ತೈದು ವರ್ಷಗಳ ಅವನು ಆಲ್‌ಮೋಸ್ಟ್ ನಲವತ್ತು ಪ್ಲಸ್ ವಯಸ್ಸಿನವನಂತೆ ಕಾಣಿಸುತ್ತಾನೆ. ಹಣೆಯ ಮೇಲಿನ ನೆರಿಗೆಗಳು ಆ ಮಾತಿಗೆ ಖಂಡಿತಾ ಒತ್ತುಕೊಡುತ್ತವೆ!

ತಾನು ಹೀಗೆ ಒಬ್ಬ ವ್ಯಕ್ತಿಗಾಗಿ ಕಾದು ಐದು ವರ್ಷಗಳೇ ಆಗಿರಬೇಕು ಎಂದು ಮನಸ್ಸಿನಲ್ಲೇ ಅಂದುಕೊಳ್ಳುತ್ತಿದ್ದ ಸಿಂಗರ್. ಬೇರ್‍ಯಾರೇ ಆಗಿದ್ದರೂ.... ಉಹೂಂ... ಹೀಗೆ ಬರುವವನೇ ಅಲ್ಲ ತಾನು.

ಆದರೀಗ.... ಬರುತ್ತಿರುವವ ತನ್ನ ಜೀವನದ ಹೀರೋ.... ಅವನಿಗಾಗಿ ಏನು ಮಾಡಲು ಸಿದ್ಧ! ಬರೀ ಕಾಯುವುದಿರಲಿ

ಇನ್ನರ್ಧ ಗಂಟೆಯಲ್ಲಿ ತಾನು ಕಾಯುತ್ತಿರುವ ಫ್ಲೈಟ್ ಬರಬೇಕು. ಐದು ವರ್ಷಗಳ ನಂತರ ತಾನವನ ನೋಡುತ್ತಿದ್ದೇನೆ!

ಆ ಲಾಬಿಯಲ್ಲಿರುವ ಯಾರಿಗೂ ಸಿಂಗರ್ ಬಗ್ಗೆ ಗೊತ್ತಿಲ್ಲವೆಂದೇ ಹೇಳಬೇಕು. ಐದು ವರ್ಷಗಳ ಹಿಂದೆ ಇಡೀ ಅಮೇರಿಕಾ ದೇಶವನ್ನೇ ಕಂಗಾಲಾಗಿಸಿದ್ದ ಮಹಾ ಛತ್ರ ಅವನು ಎಂದು ಯಾರಾದರೂ ಹೇಳಿದರೆ ದಿಗ್ಭ್ರಾಂತರಾಗುತ್ತಿದ್ದರಷ್ಟೇ!

ಎಸ್.... ಇಟ್ ವಾಸ್ ಎ ಫ್ಯಾಕ್ಟ್!

ಸಿಂಗರ್‌ನ ಹಿಂದಿನ ಜೀವನದಲ್ಲಿ ಅಪರಾಧ ಹಾಸು ಹೊಕ್ಕಾಗಿತ್ತು. ಆದರೆ.... ಅವನು ಅಪರಾಧಿಯೆಂದು ನಿರೂಪಿಸಲಾಗದ ಎಫ್ ಬಿ ಐ ಅವನ ವಿಷಯದಲ್ಲಿ ಹಲ್ಲು ಕಚ್ಚುತ್ತಾ ಕೈ ಕಟ್ಟಿ ಕೂರುವುದರ ವಿನಹ ಇನ್ನೇನೂ ಮಾಡಲಾಗಿರಲಿಲ್ಲ. ಅವನು ತನ್ನ ದಂಧೆಯಲ್ಲಿ ಎಂದಾದರೊಂದು ದಿನ ಸಣ್ಣ ಮಿಸ್ಟೇಕ್ ಮಾಡಲಾರನೆಂದು, ಆಗವನು ತಮ್ಮ ಕೈಗಳಿಂದ ತಪ್ಪಿಸಿಕೊಳ್ಳುವುದು ಅಸಂಭವವೆಂದು ಎಷ್ಟೋ ಆಸೆಯೊಡನೆ ನಿರೀಕ್ಷಿಸುತ್ತಿದ್ದ ಎಫ್ ಬಿ.ಐ ನವರು ಸಿಂಗರ್ ಒಳ್ಳೆಯವನಾಗಿ ಬದಲಾಗಿ ದಿಢೀರನೆ ಅಪರಾಧದಿಂದ ಗಾವುದ ದೂರ ತಲುಪಿ ಪ್ರಶಾಂತವಾಗಿ ಸತ್ಪ್ರಜೆಯಾಗಿ ಜೀವನ ಸಾಗಿಸತೊಡಗಿದ್ದು ಅರ್ಥವಾಗದ ಚೈನೀಸ್ ಪರ್ಷಿಯನ್‌ನಂತೆಯೋ ಭಾಸವಾಗಿತ್ತೆನ್ನಬಹುದು. ಅವನ ಹಳೆಯ ಅಪರಾಧಗಳಿಗೆ ಎಂದೋ ಒಮ್ಮೆ ಒಳಗೆ ಕೂರಿಸಬಹುದೆಂದುಕೊಂಡಿದ್ದ ಅವರೀಗ ನಿಸ್ಸಹಾಯಕರಾಗಿ ನಿಟ್ಟುಸಿರುಗರೆಯುತ್ತಾ ಕೂರುವುದರ ವಿನಹ ಇನ್ನೇನೂ ಮಾಡುವಂತಿರಲಿಲ್ಲ!

ಸಿಂಗರ್‌ನ ಈ ಹಠಾತ್ ಬದಲಾವಣೆಗೆ ಕಾರಣ ಪೋಲೀಸರಿಗಿರಲಿ.... ಅವನ ಆಪ್ತರು... ಕ್ರಿಮಿನಲ್ ಲೈಫ್‌ನಲ್ಲಿ ಅವನ ಸಹಚರರು... ಮಾಫಿಯಾ

ತಂಡದವರಿಗೂ ತಿಳಿಯದು....ಸಿಂಗರ್ ಒಬ್ಬನ ವಿನಹ !

ಸಿಂಗರ್ ಕ್ರೈಮ್ ವರ್ಲ್ಡ್‌ಗೆ ವಿದಾಯ ಹೇಳಿದ್ದಕ್ಕೆ ಪೋಲೀಸರು ಕ್ಷಮಿಸಿ ಬಿಟ್ಟರೇನೋ....ಆದರವನು ಅಲ್ಲಿಯವರೆಗೆ ಒಬ್ಬ ಗೌರವಾನ್ವಿತ ಸದಸ್ಯನಾಗಿ ಕೆಲಸ ಮಾಡಿದ್ದ ಸಂಸ್ಥೆ ಮಾತ್ರ ಸಹಿಸಿರಲಿಲ್ಲ ! ಅವನನ್ನು ಈ ಲೋಕದಿಂದಲೇ ಉಡೀಸ್ ಮಾಡಿಬಿಡಲು ತೀವ್ರ ಪ್ರಯತ್ನವೆಸಗಿತ್ತು.

ಆ ಸಂಸ್ಥೆಯ ಹೆಸರು ಎಷ್ಟೋ ದೇಶಗಳಲ್ಲಿ ನಡುಕ ಹುಟ್ಟಿಸಿದರೆ ಇನ್ನೂ ಕೆಲವರಿಗೆ ನುಂಗಲಾಗದ ಬಿಸಿ ತುಪ್ಪ.. ಎಕ್ಸ್‌ಪರ್ಟ್ ಕ್ರಿಮಿನಲ್‌ಗಳಿಗೆ ಮಾತ್ರ ಸಿಹಿಯಾದ ಜೇನು ತುಪ್ಪ !

ಅಪರಾಧ, ಅಪರಾಧಿಗಳಿಗೆ ತೌರು ಮನೆಯೆಂದೇ ಪ್ರಖ್ಯಾತಿಗೊಂಡಿರುವ ವರ್ಲ್ಡ್ ವೈಡ್ ಕ್ರಿಮಿನಲ್ ಸಿಂಡಿಕೇಟ್ ಗೋಲ್ಡನ್ ಗ್ಯಾಂಗ್ !

ಗ್ಯಾಂಗ್‌ನ ಮೆಂಬರ್ ಆಗಿ ತನ್ನೆಲ್ಲಾ ಟ್ಯಾಲೆಂಟ್ ಪ್ರದರ್ಶಿಸುತ್ತಿದ್ದ ಸಿಂಗರ್ ಏಕ್‌ದಂ ಗ್ಯಾಂಗ್‌ನ ಸಂಬಂಧವೇ ತನಗೆ ಬೇಡವೆಂಬ ನಿರ್ಧಾರಕ್ಕೆ ಬಂದನೆಂಬ ವಿಷಯ ತಿಳಿದು ಸಿಡಿದೆದ್ದಿತ್ತು ಗೋಲ್ಡನ್ ಗ್ಯಾಂಗ್ ಸುಪ್ರೀಂ ಕಮಾಂಡ್. ಆ ಗ್ಯಾಂಗ್‌ನ ಸದಸ್ಯತ್ವದ ನಿಯಮವೇ ಹೀಗೆ. ಒಳಗೆ ಬಂದ ಮೇಲೆ....ಹೊರಗೆ ಹೋಗುವುದು ಕಾಫಿನ್ ಬಾಕ್ಸ್‌ನಲ್ಲೇ ! ಮಧ್ಯದಲ್ಲಿ ಕನೆಕ್ಷನ್ ಕಳೆದುಕೊಳ್ಳುವಂತೆಯೇ ಇಲ್ಲ !

ಆದ್ದರಿಂದಲೇ ಗ್ಯಾಂಗ್‌ನ ಟಾಪ್ ಎಕ್ಸಿಕ್ಯೂಷನರ್‌ಗಳನ್ನು ಸಿಂಗರ್ ಮೇಲೆ ಛೂ ಬಿಟ್ಟಿತ್ತು ಸುಪ್ರೀಂ ಕಮಾಂಡ್.

ಸಿಂಗರ್‌ಗೆ ಪಾಠ ಕಲಿಸುವುದಲ್ಲದೆ ಮುಂದೆ ಆ ರೀತಿ ಮಾಡುವ ಆಸೆಯಿರುವವರಿಗೂ ಸಿಂಗರ್ ಒಂದು ಪಾಠವಾಗಬೇಕೆಂದು ಅವರ ಪ್ಲಾನ್ !

ಸಿಂಗರ್ ಅವರ ಕೈಗಳಲ್ಲಿ ಹೆಣವಾಗಬೇಕಾದವನೇ...ಪ್ರತಿದಿನ ವಿಶ್ವದ ಜಾಗದಲ್ಲಿ ರಕ್ತ ಕುಡಿಯುವ, ರಕ್ತದಲ್ಲೇ ಕೈ ತೊಳೆಯುವ ಆ ಗ್ಯಾಂಗ್ ಎಕ್ಸಿಕ್ಯೂಷನರ್ಸ್ ಹಿಟ್ ಲಿಸ್ಟ್‌ಗೆ ಬಿದ್ದ ಮೇಲೆ ಬದುಕಿದವರ್ಯಾರೂ ಇಲ್ಲ ಇಡೀ ಅಮೇರಿಕಾದಲ್ಲಿ

ಸಿಂಗರ್ ಸಹ ತನ್ನ ಕೊನೆಯುಗಳಿಗೆ ಸಮೀಪಿಸಿತೆಂದುಕೊಂಡಿದ್ದ !

ಆದರೆ... ಸಿಂಗರ್ ಬದುಕಿದ....ಅವನ ಕೊಲ್ಲಲೆಂದು ಬಂದ

ಗ್ಯಾಂಗ್ ಗೂನ್ಸ್ ಹೆಣಗಳಾಗಿ ಸುಪ್ರೀಂ ಕಮಾಂಡ್‌ಗೆ ಕಾಣಿಕೆಯಾಗಿ ಕಳಿಸಲ್ಪಟ್ಟರು !

ಹೆಣಗಳೊಡನೆಯೇ ಹಳದಿ ಕಾರ್ಡೊಂದು ಸುಪ್ರೀಂ ಕಮಾಂಡರ್ ಕೈ ಸೇರಿತ್ತು. ಅದರ ಮೇಲೆ ಟೈಪಾಗಿದ್ದದ್ದು ನಾಲ್ಕೇ ಲೈನ್‌ಗಳು.

'ಸಿಂಗರ್‌ಗೇನಾದರೂ ಆದರೆ....ದೇರ್ ವಿಲ್ ಬಿ ನೋ ಸುಪ್ರೀಂ ಕಮಾಂಡ್ ! ಪ್ಲೀಸ್ ಬೇರ್ ದಿಸ್ ಇನ್ ಯುವರ್ ಮೈಂಡ್ !'

ಮ್ಯಾಟರ್ ಕೆಳಗೆ ರೆಡ್‌ಪೆನ್‌ನಲ್ಲಿ ಮಾಡಿರುವ ಸಿಗ್ನೇಚರ್ ನೋಡಿದಾಗ ಹತ್ತು ಸುಪ್ರೀಂ ಕಮಾಂಡರ್ಸ್‌ನಲ್ಲಿ ನಾಲ್ವರು ಬಾತ್‌ರೂಂನತ್ತ ಓಡಿದರೆಂಬುದು ಸುಳ್ಳಲ್ಲ !

ಆ ಸಿಗ್ನೇಚರ್....

ಮಾಡಿರುವ ವ್ಯಕ್ತಿಯ ತಲೆಗೆ ಫಿಫ್ಟಿ ಮಿಲಿಯನ್ ಡಾಲರ್ಸ್ ಹಾರ್ಡ್ ಕ್ಯಾಷ್ ಕೊಡುವೆವೆಂದು ಪ್ರಕಟಿಸಿ ಆರು ತಿಂಗಳ ಮೇಲಾಗಿತ್ತು. ಆ ಬಹುಮಾನದಾಸೆಗೆ ಹೋದವರೆಲ್ಲಾ ಆಯಾ ಊರುಗಳ ಸ್ಮಶಾನಗಳಲ್ಲಿ ಪರ್ಮನೆಂಟ್ ಪ್ಲೇಸ್‌ಗಳನ್ನು ಪಡೆದಿದ್ದರು ! ಆ ವ್ಯಕ್ತಿಯ ಕೂದಲನ್ನು ಕೊಂಕಿಸಲಾಗಿರಲಿಲ್ಲ ! ಕಾಂಟ್ರಾಕ್ಟ್ ಬೋನಸ್ ದುಪ್ಪಟ್ಟು ಮಾಡಿದರೇನಾದರೂ ಉಪಯೋಗವಾದೀತೇ ಎಂದು ತೀವ್ರವಾಗಿ ಚಿಂತಿಸಿ ಸುಮ್ಮನಾಗಿದ್ದರು ಕಮಾಂಡರ್ಸ್....ಸಾಯುವವರ ಸಂಸಾರಗಳ ಭಾರ ಎಷ್ಟು ತಾನೇ ಹೊರಲು ಸಾಧ್ಯವೆಂದು !

'ಜಿಂಕೆ' ! !

ಅದೊಂದು ಸಂಕೇತಾಕ್ಷರ ಸಾಕು ಎಷ್ಟೋ ಟಾಪ್ ಗ್ಯಾಂಗ್ ಬಾಂಬರ್‌ಗಳ ಎದೆ ಬಡಿತ ನಿಲ್ಲಿಸಲು !

ಗ್ಯಾಂಗ್ ಎಕ್ಸಿಕ್ಯೂಟನರ್‌ಗಳಿಂದ ತನ್ನನ್ನವನು ರಕ್ಷಿಸಿ.... ಹಿಂದೆಂದೂ ಗ್ಯಾಂಗ್ ತನ್ನ ನೆರಳಿಗೂ ಬರದಂತೆ ಮಾಡಿದ್ದ ಆ ಗ್ರೇಟ್ ಮ್ಯಾನ್‌ನ ಚಿತ್ರ ಸದಾ ಸಿಂಗರ್‌ನ ಮನದಲ್ಲಿ ಹಸಿರು ! ತನ್ನ ಹೊಸ ಜೀವನಕ್ಕೆ ಫೌಂಡೇಷನ್ ಹಾಕಿದ ಮಹಾನುಭಾವ ಅವನು !

ಸಿಂಗರ್ ಅಷ್ಟೊಂದು ಚೇಂಜಾಗಲು ಕಾರಣವೇನೆಂಬ ರಹಸ್ಯ ಗೊತ್ತಿ

ರುವುದೂ ಮಹೇಶನೊಬ್ಬನಿಗೇನೇ !

ಜೇನಿ....ಪೂರ್ತಿ ಹೆಸರು ಜೆನ್ನಿ ಪೆರ್....ಅದಕ್ಕೆ ಕಾರಣ !

ಇಪ್ಪತ್ತು ವರ್ಷಗಳ ಸುಂದರ ಯುವತಿ ಜೇನಿ. ಅನಿರೀಕ್ಷಿತ ರೀತಿಯಲ್ಲಿ ಇಬ್ಬರೂ ಒಂದು ಪಾರ್ಟಿಯಲ್ಲಿ ಭೇಟಿಯಾಗಿದ್ದರು. ತನ್ನ ಲೈಫ್‌ನಲ್ಲಿ ಬಂದು ಹೋದ ಎಷ್ಟೋ ಹುಡುಗಿಯರಂತೆ ಅವಳನ್ನದೇಕೋ ಟ್ರೀಟ್ ಮಾಡಲಾಗಲಿಲ್ಲ ಸಿಂಗರ್‌ಗೆ.

ಅದಕ್ಕೆ ಕಾರಣ ಅವಳ ಸೌಂದರ್ಯವೊಂದೇ ಅಲ್ಲ....ಅವಳ ಅಪರೂಪವೆನಿಸುವ ಒಳ್ಳೆಯ ಮನಸ್ಸು !

ಅದ್ದರಿಂದಲೇ ಇದುವರೆಗೆ ಯಾರ ಬಳಿಯೂ ಬಿಚ್ಚದೆ ಹೃದಯದ ಕತ್ತಲ ಕೋಣೆಯಲ್ಲಿ ಬಂಧಿಸಿಟ್ಟಿದ್ದ ವಿಷಯಗಳನ್ನು ಅವಳ ಮುಂದೆ ಹರಡಿದ್ದ ಸಿಂಗರ್. ತಾನೊಬ್ಬ ಕ್ರಿಮಿನಲ್ ಎಂದವಳು ಅಸಹ್ಯಿಸಿಕೊಂಡಾಳೆಂಬ ಭೀತಿಯಿದ್ದರೂ ಅವಳ ಬಳಿ ಸತ್ಯ ಬಚ್ಚಿಡಲಾಗಿರಲಿಲ್ಲ ಅವನಿಗೆ !

ಜೇನಿ ಅವನ ಜೀವನಕ್ಕೆ ಅಸಹ್ಯಗೊಳ್ಳಲಿಲ್ಲ. ಇನ್‌ಫ್ಯಾಕ್ಟ್ ಅವನನ್ನೇ ಮದುವೆಯಾಗಬೇಕೆಂಬ ನಿರ್ಧಾರಕ್ಕೆ ಬಂದಳು !

ತನ್ನ ಜೀವನ ಯಾವ ಕ್ಷಣದಲ್ಲಿ ಎಂಡ್ ಆಗುತ್ತದೋ! ಹೇಳಲಾಗದೆಂದು....ತನ್ನೊಡನೆ ಬದುಕು ನೇಣು ಗಂಬದ ನೆರಳೇ ಎಂದವನು ಎಷ್ಟೆಷ್ಟೋ ಹೇಳಿದ್ದರೂ ಕೇಳಿರಲಿಲ್ಲ ಜೇನಿ. ಅವನ ಅಬ್ಜೆಕ್ಷನ್ಸ್ ಎಲ್ಲಾ ತಳ್ಳಿ ಹಾಕಿ ಕೊನೆಗೂ ಅವನ ಬಾಳ ಸಂಗಾತಿಯಾಗುವುದರಲ್ಲಿ ಯಶಸ್ವಿಯಾದಳು.

ತಾನೆಂತಹ ಅಪಾಯಕಾರೀ ಕೆಲಸಕ್ಕೆ ಕೈ ಹಾಕುತ್ತಿರುವೆನೆಂದು ಚೆನ್ನಾಗಿ ಗೊತ್ತಿತ್ತು ಸಿಂಗರ್‌ಗೆ. ಜೇನಿಯನ್ನು ಮದುವೆಯಾದೊಡನೆ ಕ್ರೈಂ ವರ್ಲ್ಡ್‌ಗೆ ಕೈ ಬೀಸಬೇಕೆಂದು ನಿರ್ಣಯಿಸಿಕೊಂಡೇ ಅವನು ಚರ್ಚ್‌ನೊಳಗೆ ಕಾಲಿಟ್ಟಿದ್ದದ್ದು. ಅದು ಅಂದುಕೊಂಡಷ್ಟು ಸುಲಭವಲ್ಲ ಎಂದು ಅವನಿಗೂ ಗೊತ್ತು. ಗ್ಯಾಂಗ್‌ನ ಕಬಂಧ ಬಾಹು ಚಾಚದ ಸ್ಥಳವಿಲ್ಲ ಪ್ರಪಂಚದಲ್ಲಿ ಇಂದೋ, ನಾಳೆಯೋ ಇರುತ್ತದೆ ಮೃತ್ಯು ಗ್ಯಾಂಗ್ ಎಕ್ಸಿಕ್ಯೂಷನರ್ಸ್ ರೂಪದಲ್ಲಿ !

ಧೈರ್ಯ ಮಾಡಿ ಬಹಳ ಕೇರ್‌ಫುಲ್ಲಾಗಿ ಪ್ಲಾನ್ ಮಾಡಿ ಯಾರಿಗೂ ಯಾವುದೇ ಸುಳಿವು ಸಿಗದಂತೆ ವಾಷಿಂಗ್‌ಟನ್ ಬಿಟ್ಟು ಕ್ಯಾಲಿಫೋರ್ನಿಯಾ ಸೇರಿಕೊಂಡ ಸಿಂಗರ್.

ಕೆಲ ದಿನಗಳಲ್ಲೇ ಅವನ ಸ್ವಯಂ ಘೋಷಿತ ನಿವೃತ್ತಿ ಸುಪ್ರೀಂ ಕಮಾಂಡರ್ಸ್ ಗಮನಕ್ಕೆ ಬಂತು ! ಅವರ ಮಲ್ಟಿಬಿಲಿಯನ್ ಪ್ರಾಜೆಕ್ಟೊಂದನ್ನು ಅಗಲೇ ಧೂಳೀಪಟಮಾಡಿದ್ದ 'ಜಿಂಕೆ' ! ಆ ಸಿಟ್ಟಿನಲ್ಲಿದ್ದ ಅವರಿಗೆ ಸಿಂಗರ್‌ನ ಟ್ರಿಕರಿ ತಿಳಿದಾಗ ಮೈಯೆಲ್ಲಾ ಉರಿದು ಹೋಗಿ ಸಿಂಗರ್ ತಲೆಗೆ ಕಾಂಟ್ರಾಕ್ಟ್ ಪ್ರಕಟಿಸಿ ಎಕ್ಸಿಕ್ಯೂಷನರ್‌ಗಳನ್ನು ಆಕ್ಟಿವೇಟ್ ಮಾಡಿದ್ದರು.

ಶುರುವಾಗಿತ್ತು ಸಿಂಗರ್‌ಗೆ ಬೇಟೆ !

ಒಂದೇ ದಿನದಲ್ಲಿ ತಮ್ಮೆಲ್ಲಾ ಟಾಲೆಂಟ್ ಉಪಯೋಗಿಸಿ ಸಿಂಗರ್‌ನ ಹೇರ್ ಎಬೌಟ್ಸ್ ಟ್ರೇಸ್ ಮಾಡಿದ್ದರು ನಾಲ್ವರು ಕಿಲ್ಲರ್ಸ್

ಡೈರೆಕ್ಟ್ ಕ್ಯಾಲಿ ಫೋರ್ನಿಯಾಗೆ ಫ್ಲೈಟ್ ಹತ್ತಿದರವರು !

ಸಿಂಗರ್ ಮನೆಗವರು ತಲುಪುವ ವೇಳೆಗೆ...

ಮೊದಲ ಮಗು ಹುಟ್ಟುವ ಸಿಹಿ ಸುದ್ದಿ ಆದಾಗ ತಾನೇ ತಿಳಿಸಿದ್ದ ಜೇನಿಯನ್ನು ಮುದ್ದಾಡುವ ಸಂಭ್ರಮದಲ್ಲಿದ್ದ ಸಿಂಗರ್.

ಎಕ್ಸಿಕ್ಯೂಷನರ್‌ಗಳನ್ನು ಅಷ್ಟು ಹಠಾತ್ತಾಗಿ ತನ್ನ ಮನೆಯಲ್ಲೇ ಕಂಡಾಗ ಆಘಾತಕ್ಕೊಳಗಾಗಿ ಐದು ಕ್ಷಣ ಸ್ತಬ್ಧನಾಗಿ ಬಿಟ್ಟಿದ್ದ ಸಿಂಗರ್. ಅವರ ಕೈಗಳಲ್ಲಿನ ಪಿಸ್ತೂಲುಗಳನ್ನು ಕಂಡಾಗಂತೂ ಸಂಪೂರ್ಣ ಭೂಮಿಗಿಳಿದು ಬಿಟ್ಟಿದ್ದ. ಅವರು ತನ್ನ ಗಂಡನ ಕೊನೆಗಾಣಿಸಲು ಬಂದವರೆಂದು ಅರ್ಥವಾದ ಜೇನಿ ಗಂಟಲ ಪಸೆ ಆರಿ ಹೋಗಿ ಕುಳಿತು ಬಿಟ್ಟಿದ್ದಳು.

ಅವರಿಗೆ ಕೈ ಜೋಡಿಸಿದ ...ಬೇಡಿಕೊಂಡ ಸಿಂಗರ್ ಗ್ಯಾಂಗ್‌ನಲ್ಲಿದ್ದಾಗ ತಾನು ಸಂಪಾದಿಸಿದ್ದ ಸಂಪತ್ತನ್ನೆಲ್ಲಾ ಆ ನಾಲ್ವರಿಗೂ ಹಂಚಿಕೊಡುವೆನೆಂದ

ಕ್ರೂರವಾಗಿ ನಕ್ಕರಷ್ಟೇ ಅವರು ಗನ್‌ಗಳನ್ನು ಮೇಲೆತ್ತಿ !

ಆಗ....ಅಲ್ಲಿ....

ಕೋಲ್ಮಿಂಚಿನಂತೆ ಕಾಣಿಸಿಕೊಂಡಿದ್ದ 'ಚಂಕ್' !

ಅವನು ಹೇಗೆ ಆ ಸ್ಪಾಟ್‌ನಲ್ಲಿ ಪ್ರತ್ಯಕ್ಷನಾದನೆಂದು ಸ್ಮಗ್ಲರ ಗ್ಯಾಂಗ್ ಎಕ್ಸಿಕ್ಯೂಷನರ್ಸ್ ಯೋಚಿಸುವ ಮಿಲಿ ಸೆಕೆಂಡ್‌ನಲ್ಲೇ ಹೆಣಗಳಾಗಿದ್ದರು ಅವನ 'ರಾಣಿ'ಯ ಬಲಿ ಪಶುಗಳಾಗಿ !

ಕಣ್ಣೀರಿನೊಡನೆ ಅವನಿಗೆ ಕೈ ಜೋಡಿಸಿದ್ದರು ಸಿಂಗರ್ ದಂಪತಿಗಳು.

ಯಾವುದೇ ಕಾನ್ಸರ್ಟ್ಸ್‌ಗೆಂದು ಕರ್ನಲ್‌ರಿಂದ ಬಲವಂತವಾಗಿ ಕ್ಯಾಲಿಫೋರ್ನಿಯಾಗೆ ಹಬ್ಬಿಸಿಕೊಂಡು ಬಂದಿದ್ದ ಮಹೇಶ, ಏರ್‌ಪೋರ್ಟ್‌ನಲ್ಲಿ ಗ್ಯಾಂಗ್‌ನ ಟಾಪ್ ರ್ಯಾಕೆಟ್ ಮ್ಯಾನ್‌ಗಳನ್ನು ಐಡೆಂಟಿಫೈ ಮಾಡಿದ್ದ. ನಾಲ್ವರೂ ಒಟ್ಟಿಗೆ ಬಂದಿದ್ದಾರೆಂದರೆ ಯಾರದೋ ಲಿಕ್ವಿಡೇಷನ್ ಪ್ರೋಗ್ರಾಂ ಇರಬೇಕೆಂದು ಲೆಕ್ಕ ಹಾಕಿ ಹಿಂಬಾಲಿಸಿಕೊಂಡು ಬಂದಿದ್ದ. ತನ್ಮೂಲಕ ಜೇನಿಯ ಸೌಭಾಗ್ಯ ಉಳಿಸಿ ಸಿಂಗರ್‌ನ ಪ್ರಾಣ ಕಾಪಾಡಿದ್ದ !

ಸಿಂಗರ್‌ನ ಪರಿಸ್ಥಿತಿಯನ್ನೆಲ್ಲಾ ಅರಿತ ಮೇಲೆ ಆ ನಾಲ್ಕು ಹೆಣಗಳನ್ನೂ ಸುಪ್ರೀಂ ಕಮಾಂಡರ್ಸ್‌ಗೆ ಅಲ್ಟಿಮೇಟಂ ಕಳಿಸಿದ್ದ.

ಲೀವ್ ಸಿಂಗರ್ ಅಲೋನ್. ಅದರ್ ವೈಸ್....

ಅರ್ಥ ಮಾಡಿಕೊಂಡಿದ್ದರು ಕಮಾಂಡರ್ಸ್ ಆ ಮೆಸ್ಸೇಜ್. ಚಂಡ ಮಾರುತ, ಕಾಡ್ಗಿಚ್ಚು ಎರಡೂ ಮೇಳೈಸಿ ಜನ್ಮವೆತ್ತಿರುವ ಸೈತಾನ 'ಚಂಕ್'! ಅವನ ಮಾತಿನಂತೆ ನಡೆಯದಿದ್ದರೆ ತಮ್ಮ ಸರ್ವನಾಶ ಮಾಡುವ. ಕೆ ನಿದ್ರೆ ಮಾಡಲಾರ !

ಅವನಿಗೆ ನಿದ್ರಿಸಲು ಬಿಟ್ಟರೆ ತಮ್ಮ ನಿದ್ರೆಗ್ಯಾವ ಭಂಗವೂ ಇರದು !

ಅವರು ಆ ಡಿಸಿಷನ್‌ಗೆ ಬಂದ ಕಾರಣ ಸಿಂಗರ್‌ನ ಭಾವೀ ಬದುಕು ಹಸನಾಯಿತು !

ಆ ದಿನ ಅವನ ಮನೆಯಲ್ಲೊಂದು ಪೆಗ್ ವಿಸ್ಕಿ ಕುಡಿಸಿ ಸಿಗರೇಟ್ ಸೇದಿ ಮಾಯವಾದ ಮಹೇಶನ ಆಕ್ಟಿವಿಟೀಸ ತಿಳಿಯಲು ಪ್ರಯತ್ನಿಸಿದರೂ ಸಾಧ್ಯವಾಗಿರಲಿಲ್ಲ ಸಿಂಗರ್‌ಗೆ.

ಐದು ವರ್ಷಗಳ ನಂತರ ಈಗ ಮಹೇಶನಿಂದ ಸಂದೇಶವೊಂದು ಬಂದಿತ್ತು. ಆ ದಿನ ತಾನು ಏರ್ ಇಂಡಿಯಾ ಬೋಯಿಂಗ್‌ನಲ್ಲಿ ವಾಷಿಂಗ್‌

ಟೌನ್‌ಗೆ ಬರುತ್ತಿರುವನೆಂದೂ....ಮರೆಯದೆ ಖಂಡಿತಾ ಬಂದು ಭೇಟಿಯಾಗಬೇಕೆಂದು ಕೇಬಲ್ ಕಳಿಸಿದ್ದ ಮಹೇಶ.

ತನ್ನೆಲ್ಲಾ ಕೆಲಸಗಳನ್ನೂ ಗಾಳಿಗೆ ತೂರಿ, ಆದ್ದರಿಂದಲೇ ಈಗ ಸಿಂಗರ್ ಏರ್‌ಪೋರ್ಟ್‌ನಲ್ಲಿ ಪ್ರೆಸೆಂಟ್ ಆಗಿರುವುದು ! ತನಗೆ ಹೊಸ ಜೀವನ ನೀಡಿದ 'ಜಿಂಕೆ'ಯ ದರ್ಶನ ಐದು ವರ್ಷಗಳ ನಂತರವಾದರೂ ಆಗುತ್ತಿದೆಯಲ್ಲ ಎಂಬ ಸಂತೋಷದಿಂದ ಹಾರಾಡುತ್ತಿತ್ತು ಅವನೆದೆ.

"ಎ.ಸ್ಸರ್....ವಾಂಟ್ ಅನದರ್ ಕಾಫಿ ?"

ಖಾಲಿ ಕಪ್ ಕೈನಲ್ಲಿಡಿದು ಪರಧ್ಯಾನದಲ್ಲಿ ಮುಳುಗಿದ್ದ ಸಿಂಗರ್ ಬೆಚ್ಚಿಬಿದ್ದ. ಕೆಫೆಟೇರಿಯಾ ವೈಟರ್ ಅವನನ್ನೇ ವಿಚಿತ್ರವಾಗಿ ನೋಡ ತೊಡಗಿದ್ದ !

"ನೋ ಪಾಲ್....ಥ್ಯಾಂಕ್ಸ್ !" ಟೇಬಲ್ ಮೇಲೊಂದು ಡಾಲರ್ ನೋಟಿಟ್ಟು ಸಿಗರೇಟ್ ಹತ್ತಿಸಿಕೊಂಡ ಸಿಂಗರ್

ಸರಿಯಾಗಿ ಆಗಲೇ ಪಬ್ಲಿಕ್ ಅಡ್ರೆಸ್ ಸಿಸ್ಟಂನಲ್ಲಿ ಅನೌನ್ಸರ್ ಧ್ವನಿ ಮೊಳಗಿತು

"ಫ್ಲೈಟ್ ಸೆವೆನ್ ತ್ರೀಸೆವೆನ್ ಫ್ರಂ ಇಂಡಿಯಾ ಈಸ್ ಗೋಯಿಂಗ್ ಟು ಲ್ಯಾಂಡ್...."

ಆ ಮೇಲಿನ ಮಾತುಗಳು ಕಿವಿಗೇ ಹೋಗದದೆ ಚುರುಕಾಗಿ ಎದ್ದುನಿಂತ ಸಿಂಗರ್. ಆ ಫ್ಲೈಟ್‌ನಲ್ಲೇ ಬರಬೇಕು ಮಹೇಶ !

ಚಲುವಾಗಿ ವಿಸಲ್ ಹಾಕುತ್ತಾ ಗ್ಯಾಂಗ್‌ವೇ ಕಡೆಯುವನು ಹೆಜ್ಜೆ ಹಾಕುತ್ತಿದ್ದಂತೆ ವಿಚಿತ್ರವಾಗಿ ಹೆಣೆದುಕೊಂಡವವ ಹುಬ್ಬುಗಳು.

ಏರ್‌ಪೋರ್ಟ್‌ನೊಳಕ್ಕೆ ಆದಾಗ ಕಾಲಿಡುತ್ತಿದ್ದರು ಗೋಲ್ಡನ್ ಗ್ಯಾಂಗ್‌ನ ನಾಲ್ವರು ಕಾಂಟ್ರ್ಯಾಕ್ಟ್ ಕಿಲ್ಲರ್ಸ್ ! ಅವರು ಸಿಂಗರ್‌ನನು ಗುರುತು ಹಿಡಿಯದಿದ್ದರೂ ಸಿಂಗರ್ ಅವರನ್ನು ಮರೆತಿರಲಿಲ್ಲ. ಆದರೆ ಅವರೀ ವೇಳೆಯಲ್ಲಿ ಏರ್‌ಪೋರ್ಟ್‌ಗೆ ಬರುತ್ತಿರುವುದು ಕಾಕತಾಳೀಯವೇ.... ಅಥವ....ಮಹೇಶನಿಗಾಗಿಯೋ ?

ಡವಡವಿಸ ತೊಡಗಿದ ಹೃದಯದೊಡನೆ ಕಣ್ಣಂಚಿನಿಂದ ಅವರನ್ನೇ

ಗಮನಿಸತೊಡಗಿದ ಸಿಂಗರ್

ನಾಲ್ವರೂ ಗ್ಯಾಂಗ್ ಪೆಸೆಂಜರ್ಸ್ ನಿಧಾನವಾಗಿ ನಡೆದು ಬಂದು ಲಾಬಿಯಲ್ಲಿದ್ದ ಚೇರ್‌ಗಳಲ್ಲಿ ಕುಳಿತು ಪೇಪರ್‌ಗಳಲ್ಲಿ ಮುಖ ಹುದುಗಿಸಿದರು. ಆದರವರ ಕಳ್ಳ ನೋಟ ಗ್ಯಾಂಗ್‌ವೇ ಕಡೆಗೇ ಇರುವುದನ್ನು ಗ್ರಹಿಸಿದಾಗ ಅಂಗೈಗಳಲ್ಲಿ ಬೆವರುವಯಸ ತೊಡಗಿತು ಸಿಂಗರ್‌ಗೆ.

ಅವರು ಖಂಡಿತಾ ಮುಖೇಶನಿಗಾಗಿಯೇ ಬಂದಿದ್ದಾರೆಂದು ಖಚ್ಚಿತ್ತಿತ್ತು ಅವನ ಅಂತರಾತ್ಮ. ಇವರ ಆಗಮನದ ವಿಷಯ ಮುಖೇಶನಿಗೆ ಹೇಗಾದರೂ ಮೊದಲೇ ತಿಳಿಸಬೇಕು !

ತಲೆ ತಿರುಗಿಸಿಕೊಂಡು ತನ್ನ ಮುಖ ಅವರಿಗೆ ಕಾಣದಂತೆ ಎಚ್ಚರಿಕೆ ವಹಿಸಿ ಗ್ಯಾಂಗ್ ವೇ ಕಡೆಗೆ ನಡೆದ ಸಿಂಗರ್ !

ಪ್ಲಾಟ್ ಫಾರಂ ಮೇಲೆ ನಿಂತು ಮುಂದಕ್ಕೆ ನೋಡಿದ.

ರನ್ ವೇ ನಾಲ್ಕೈದು ಜನರಲ್ ಫ್ಲೈಟ್ಸ್ ನಿಂತಿದ್ದವು. ಆಕಾಶದಲ್ಲಿ ರೌಂಡ್ಸ್ ಹೊಡೆಯುತ್ತಿತ್ತು ಲ್ಯಾಂಡಾಗಬೇಕಾದ ಏರ್ ಇಂಡಿಯಾ ಬೋಯಿಂಗ್.

ಆತುರವನ್ನು ಅಡಗಿಸಿಕೊಳ್ಳುವ ಪ್ರಯತ್ನದೊಡನೆ ಆ ವಿಮಾನವನ್ನೇ ನೋಡುತ್ತಿದ್ದ ಸಿಂಗರ್. ಐದು ನಿಮಿಷಗಳ ನಂತರ ಲ್ಯಾಂಡಿಂಗ್ ಸಿಗ್ನಲ್ ಸಿಕ್ಕ ಮೇಲೆ ರನ್ ವೇ ಮೇಲಿಳಿಯತೊಡಗಿತು ಬೋಯಿಂಗ್.

ಅದು ನಿಂತೊಡನೆ ಲ್ಯಾಡರ್ಸ್ ಟ್ರಾಕ್ಟರ್ ಮೂವ್ ಆಗಿ ಬಾಗಿಲಿಗೆ ಅಟ್ಯಾಚ್ ಆಯಿತು ಬಾಗಿಲು ತೆರೆದುಕೊಂಡಿತು.

ಮೊದಲಲ್ಲಿ ಕಾಣಿಸಿಕೊಂಡಳು ಏರ್ ಹೋಸ್ಟೆಸ್ ಪ್ರಯಾಣಿಕರಿಗೆ ವಿದಾಯ ಹೇಳಲು ಸನ್ನದ್ಧಳಾಗಿ.

ವಿಮಾನದಿಂದ ಮೊದಲ ಪ್ರಯಾಣಿಕ ಕಾಲಿಟ್ಟ ಲ್ಯಾಡರ್ ಮೇಲೆ

ಪಾಕೆಟ್‌ನಿಂದ ಮಿನಿಲೆನ್ಸ್ ಹೊರ ತೆಗೆದ ಸಿಂಗರ್ ಕಣ್ಣ ಮುಂದಿಡಿದು ವಿಮಾನಕ್ಕೆ ವ್ಯೂ ಹೊಂದಿಸಿಕೊಂಡ.

ಸಾಲಾಗಿ ಕೆಳಕ್ಕಿಳಿಯುತ್ತಿದ್ದರು ಪ್ರಯಾಣಿಕರು ಬಿಳಲಿದ ಮುಖ

ಗಳೊಡನೆ. ಅವರಲ್ಲಿರಲೇ ಇಲ್ಲ ಮಹೇಶ! ಕೊನೆಯ ಪ್ರಯಾಣಿಕನೂ ಇಳಿದ ಮೇಲೆ ನಿರುತ್ಸಾಹದೊಡನೆ ಲೆನ್ಸ್ ಪಕ್ಕಕ್ಕೆ ತೆಗೆದ ಸಿಂಗರ್. ಬರಲಿಲ್ಲ 'ಜಿ ಕೆ'!

ಒಂದು ಕ್ಷಣ ಅವನು ಬರದಿದ್ದುದಕ್ಕೆ ವೇದನೆಯಾದರೂ.... ಬರದಿರುವುದೇ ಹೆಚ್ಚು ಸಂತೋಷ ತಂದಿತ್ತು ಸಿಂಗರ್‌ಗೆ. ಅವನೇನಾದರೂ ಬಂದರೆ ಅವನಿಗೇನೋ ಮಾಡಲೆಂದೇ ಈ ಕಿಲ್ಲರ್ಸ್ ಬಂಚ್ ಕಾಯುತ್ತಿರುವುದು! ಅವರ ಅಗ್ರಮಾಣದ ಅರಿವೇ ಇಲ್ಲದೆ ಮಹೇಶ ಲಾಬಿಯಲ್ಲಿ ಕಾಲಿಟ್ಟೊಡನೆ.... ತಲೆ ಒದರಿದ ಸಿಂಗರ್. ಮುಂದೇನಾಗುತ್ತಿತ್ತೆಂಬುದು ಅವನಿಗೆ ಯೋಚಿಸಲೇ ಇಷ್ಟವಿರಲಿಲ್ಲ!

ಕೆಳಕ್ಕಿಳಿದು ಲಾಬಿಯಲ್ಲಿ ನಡೆಯ ತೊಡಗಿದಂತೆ ತಲೆಯಲ್ಲಿ ಹಲವಾರು ಯೋಚನೆಗಳು. ಮಹೇಶ ಭಾರತದಿಂದ ಬರುತ್ತಿರುವುದು ತನಗೆ ಗೊತ್ತು. ಬೈ ಚಾನ್ಸ್ ಈ ಫ್ಲೈಟ್ ಮಿಸ್ಸಾಗಿ ಇನ್ನೊಂದು ಫ್ಲೈಟ್‌ನಲ್ಲಿ ಅವನು ಬರಬಹುದು.... ಭಾರತದಿಂದ ಬೇರೊಂದು ಫ್ಲೈಟ್ ಅರೈವಲ್ ಇನ್ನು ಸಂಜೆಗೇನೇ. ಸೋ.... ಏರ್‌ಪೋರ್ಟ್‌ನಲ್ಲಿ ಕಾಯುತ್ತಾ ಕುಳಿತಿರುವುದಕ್ಕಿಂತಾ ಹೊರಗಡೆ ಯಾವುದೋ ಒಂದು ರೆಸ್ಟೋರೆಂಟ್‌ನಲ್ಲಿ ಕಾಲ ಕಳೆಯುವುದು ಒಳ್ಳೆಯದು.

ಲಾಬಿಯೊಳಕ್ಕೆ ಕಾಲಿರಿಸಿ ಗ್ಯಾಂಗ್ ಕಿಲ್ಲರ್ಸ್ ಕಡೆಗೆ ನೋಡಿದ ಸಿಂಗರ್. ಅಲ್ಲಾಡದೇ ಇದ್ದಲ್ಲೇ ಇದ್ದರವರು. ಫ್ಲೈಟ್‌ನಲ್ಲಿ ಬಂದ ಪ್ರಯಾಣಿಕರನ್ನೇ ಕೇರ್‌ಫುಲ್ ಆಗಿ ಅಬ್ಸರ್ವ್ ಮಾಡುತ್ತಿದ್ದರು. ಆದಷ್ಟು ಅವರ ನೇರ ದೃಷ್ಟಿಗೆ ಸಿಲುಕದಂತೆ ಹೊರ ನಡೆದ ಸಿಂಗರ್.

ಪ್ರಯಾಣಿಕರು ಟ್ಯಾಕ್ಸಿಗಳನ್ನಿಡಿಯುವುದರಲ್ಲಿ ಮಗ್ನರಾಗಿದ್ದರು. ಪಾರ್ಕಿಂಗ್ ಲಾಟ್‌ನಲ್ಲಿದ್ದ ತನ್ನ ಡಾಟ್ಸನ್ ಕಾರಿನ ಕಡೆಗೆ ಹೆಜ್ಜೆ ಹಾಕಿದ ಸಿಂಗರ್. ಹಳೆಯ ಮಾಡೆಲ್‌ನ ಗಟ್ಟಿ ಮುಟ್ಟಾದ ಕಾರದು. ಜೇನಿ ಎಷ್ಟೇ ಒತ್ತಾಯಿಸಿದರೂ ಮಾರಲೊಪ್ಪದೆ ಪ್ರೆಸ್ಟೀಜ್ ಮಾಡಿಕೊಂಡೇ ಬಂದಿದ್ದ. ಡೋರ್ ಲಾಕ್ ತೆಗೆದು ಡ್ರೈವಿಂಗ್ ಸೀಟ್‌ನಲ್ಲಿ ಕುಳಿತು

ಸ್ಟಾರ್ಟ್ ಮಾಡಿದ ಸಿಂಗರ್. ಸಣ್ಣ ಜರ್ಕ್‌ನೊಡನೆ ಮುಂದಕ್ಕೆ ಕದಲಿತು ಡಾಟ್ಸನ್.

ಸಂಜೆಯವರೆಗೆ ಎಲ್ಲಿ ಕಾಲ ಕಳೆಯುವುದೆಂದು ಯೋಚಿಸುತ್ತಿದ್ದ ಅವನು. ವಾಷಿಂಗ್ಟನ್ ಅಂದರೇನೇ ಅಲರ್ಜಿ ಅವನಿಗೆ. ಹಳೆಯ ಜೀವನ ಜ್ಞಾಪಿಸುವ ಆ ಪರಿಸರದಲ್ಲಿರುವ ಇಚ್ಛೆ ಇದ್ದಂತಿರಲಿಲ್ಲ.

“ಬಹಳವೇ ಬದಲಾಗಿರುವೆ ನೀನು ಸಿಂಗರ್ !”

ಅದುರಿಬಿದ್ದು ಹಿಂದೆ ತಿರುಗಿ ನೋಡಿದ ಸಿಂಗರ್ ಮುಖ ಒಕ್ಕೊಮ್ಮೆಲೇ ಪ್ರಕಾಶಮಾನವಾಯಿತು.

ಹಿಂದಿನ ಸೀಟಲ್ಲಿ ತಂಪಾಗಿ ಕುಳಿತಿದ್ದ ಮಹೇಶ. ಅವನ ತುಟಿಗಳ ನಡುವೆ ಹೊಗೆಯುಗುಳುತ್ತಿರುವ ಒಂದು ಸಿಗರೇಟ್ !

“ಡಾಮ್‌ಯು ಮ್ಯಾನ್....ಯಾವಾಗ ಬಂದೆ....ಕಾರಿನೊಳಕ್ಕೆ ಹೇಗೆ ಹತ್ತಿದೆ ?” ಸಂತೋಷ ಹತ್ತಿಕ್ಕಿಕೊಳ್ಳಲಾಗದೆ ತುಸು ಜೋರಾಗಿಯೇ ಕೂಗಿಕೊಂಡ.

“ಬಿ ಕೇರ ಫುಲ್ ಫ್ರೆಂಡ್....ವಾಷಿಂಗ್‌ಟನ್ ಟ್ರಾಫಿಕ್‌ನಲ್ಲಿ ನಮ್ಮ ಕಾರು ಮುಳುಗಿ ಹೋದಾಗ ನೀನು ಹೀಗೆಯೇ ನೋಡುತ್ತಾ ಕುಳಿತು ಬಿಟ್ಟರೆ !” ನಗುತ್ತಲೇ ಎಚ್ಚರಿಸಿದ ಮಹೇಶ.

“ಡೋಂಟ್ ವರಿ ಮೈಡಿಯರೆಸ್ಟ್ ಫ್ರೆಂಡ್ ! ನನ್ನ ಡ್ರೈವಿಂಗ್ ಎಬಿಲಿಟಿಯ ಬಗ್ಗೆ ನಿನಗೆ ಗೊತ್ತು. ಹಳೆಯ ಜೀವನದೆಲ್ಲಾ ಅಭ್ಯಾಸಗಳನ್ನೂ ಬಿಟ್ಟರೂ ಇದನ್ನು ಮಾತ್ರ ಮರೆಯಲಾಗಲಿಲ್ಲ. ಅದಿರಲಿ.... ನನ್ನ ಪ್ರಶ್ನೆಗೆ ಉತ್ತರಿಸಲ್ಲೇ ಇಲ್ಲ ನೀನು !” ಅಂದ ಸಿಂಗರ್ ತಲೆ ಮುಂದಕ್ಕೆ ತಿರುಗಿಸಿ.

“ನಾನು ಬರುವೆನೆಂದ ಫ್ಲೈಟ್‌ನಲ್ಲೇ ಬಂದೆ ನಿನ್ನ ಕಣ್ಣ ಮುಂದೆಯೇ ಹೊರಗಡೆಗೆ ಬಂದೆ....ಅಫ್‌ಕೋರ್ಸ್ ನಿನಗಿಂತಾ ಐದು ನಿಮಿಷ ಮೊದಲು ನಿನ್ನ ಕಾರಿನೊಳಕ್ಕೆ ಸೇರಿದೆ....ಲಾಕ್ ಹೇಗೆ ತೆಗೆದೆನೆಂದು ಸಿಲ್ಲಿ ಪ್ರಶ್ನೆ ಮಾತ್ರ ಕೇಳಬೇಡ !” ಅಂದ ಮಹೇಶ.

“ಅದರೆ....ನಾನು ಫ್ಲೈಟ್‌ನಿಂದ ಇಳಿದ ಪ್ರತಿಯೊಬ್ಬರನ್ನೂ

ಕ್ಲಿಯರ್ ಆಗಿ ನೋಡಿದೆ ಮಹೇಶ್....ನೀನೆಲ್ಲಿದ್ದೆ ?" ವಿಸ್ಮಯದೊಡನೆ ಕೇಳಿದ ಸಿಂಗರ್.

ಸೀಟಿನಡಿಯಿಂದ ಸಿಖ್ಖರು ಧರಿಸುವ ಪಗಡಿ, ನಕಲಿ ಗಡ್ಡ ಮೀಸೆ ತೆಗೆದು ಸಿಂಗರ್‌ಗೆ ತೋರಿಸಿದ ಮಹೇಶ.

ಉಸ್ಸೋ ಅಂದ ಸಿಂಗರ್ ಆಗ. ಎಸ್... ಫ್ಲೈಟಿನಿಂದ ಹೊರ ಬಂದ ಮೊದಲ ಪ್ರಯಾಣಿಕ ಒಬ್ಬ ಸಿಖ್ಖನೆಂಬುದೇನೋ ನಿಜವೇ. ಮಿಲಿಟರಿಯವನಿರಬೇಕು ಎಂಬ ಇಂಪ್ರೆಷನ್ ವಿನಹ ಅವನೇ ಮಹೇಶನೆಂದು ದೇವರಾಣೆ ಅಂದುಕೊಂಡಿರಲಿಲ್ಲ ಸಿಂಗರ್. ಅಂದುಕೊಂಡಿದ್ದರೆ ಅವನ ಮೂರು ವೇಷಕ್ಕನ್ನೂ ನಿಶ್ತ್ರ ಹಳೆ !

"ವಾಟೀಸ್ ಹ್ಯಾಪನಿಂಗ್ ಮಹೇಶ್ ? ನೀನು ಹೀಗೆ ಹಠಾತ್ತನೆ ವಾಷಿಂಗ್‌ಟನ್‌ಗೆ ಬಂದಿರುವುದು, ಗ್ಯಾಂಗ್ ಹಾಗ್ಸ್ ನಿನಗಾಗಿ ಕಾಯುತ್ತಿರುವುದು, ಅವರಿಗೆ ಗಸ್ತುಕೊಟ್ಟು ನೀನು ಕಳ್ಳತನದಲ್ಲಿ ಆಚೆ ಬಂದದ್ದು.... ಏನಂತಹ ಗಹನವಾದ ವಿಷಯ ?" ಕೇಳಿದ ಸಿಂಗರ್.

"ಮೊದಲು ಯಾವುದಾದರೂ ಒಂದು ಒಳ್ಳೆಯ ಹೋಟೆಲ್‌ಗೆ ನಡಿ ಸಿಂಗರ್....ನಿನ್ನ ಸಂದೇಹಗಳಿಗೆಲ್ಲಾ ಉತ್ತರ ಸಿಗುತ್ತದೆ...." ಸಿಗರೇಟ್ ಹೊರಕ್ಕೆ ಫ್ಲಿಕ್ ಮಾಡುತ್ತಾ ಗಂಭೀರ ಧ್ವನಿಯಲ್ಲೇಳಿದ ಮಹೇಶ

ತಲೆಯಾಡಿಸಿದ ಸಿಂಗರ್ ಡ್ರೈವ್ ಮಾಡುವುದರಲ್ಲಿ ಮಗ್ನನಾದ.

# 2

"ಸರ್....ಸಾಮರ್ಸನ್ ಒಬ್ಬ ಜರ್ಮನ್ ಸೈಂಟಿಸ್ಟ್. ಸೆಕೆಂಡ್ ವರ್ಲ್ಡ್‌ವಾರ್‌ನಲ್ಲಿ ನಾಜಿಗಳ ಕೈನಲ್ಲಿ ಚಿತ್ರಹಿಂಸೆ ಅನುಭವಿಸಿದ ಪ್ರಮುಖ ವಿಜ್ಞಾನಿಗಳಲ್ಲಿ ಒಬ್ಬನಾತ. ಯುದ್ಧದಲ್ಲಿ ಉಪಯೋಗಿಸಲು ಮಾರಕಾಸ್ತ್ರಗಳ ತಯಾರಿಗಾಗಿ ಅವನನ್ನು ಬಳಸಿಕೊಂಡರು ನಾಜಿಗಳು. ತನಗಿಷ್ಟವಿಲ್ಲದಿದ್ದರೂ ಗರ್ಭಿಣಿಯಾದ ನಿನ್ನ ಹೆಂಡತಿಯನ್ನು ನಿನ್ನ ಕಣ್ಣ ಮುಂದೆಯೇ ಕತ್ತರಿಸಿ ಹಾಕುವೆವೆಂದು ಅವರು ಬೆದರಿಸಿದ ಕಾರಣ....ಅವರಿಷ್ಟದಂತೆಯೇ ಅವನು ಆಟಾಮಿಕ್ ವೆಪನ್ಸ್ ಬಗ್ಗೆ ಸಂಶೋಧನೆಗಳನ್ನು ಶುರು ಮಾಡಿದ. ಅವನ ಎಕ್ಸ್‌ಪೆರಿಮೆಂಟ್ಸ್ ಮುಗಿಯುವ ಮೊದಲೇ ಯುದ್ಧ ಕೊನೆಗೊಂಡು ಅವರ ಪ್ರಿಸನ್ ಕ್ಯಾಂಪ್‌ನಿಂದ ಹೊರಬಿದ್ದ ಸಾಮರ್ಸನ್‌ಗೆ ಬರಸಿಡಿಲಿನಂತಹ ಟ್ರಾಜಿಕ್ ನ್ಯೂಸ್ ಕಾದಿತ್ತು.

"ಅವನ ಹೆಂಡತಿಯ ಮರಣ !

"ಅವನ ಹೆಂಡತಿ ಹೆಣ್ಣು ಮಗುವೊಂದರ ಜನನದ ನಂತರ ಸತ್ತಳೆಂದು ಅವಳನ್ನು ಅಲ್ಲಿಯವರೆಗೆ ಪೋಷಿಸಿದ್ದ ಸಾಮರ್ಸನ್ ಗೆಳೆಯ ಹೇಳಿದಾಗ ಹತಾಶನಾಗಿ ಬಿಟ್ಟಿದ್ದ ಸಾಮರ್ಸನ್. ಅವಳು ಮರಣ ಶಯ್ಯೆಯಲ್ಲಿದ್ದಾಗಲೂ ನೋಡಲಾಗದಂತೆ ಮಾಡಿದ ನಾಜಿಗಳ ಮೇಲೆ ಅಸಹ್ಯ ಹುಟ್ಟಿ ಅದೇ ಅವನು ಜರ್ಮನಿ ಬಿಡಲು ಕಾರಣವಾಯಿತು.

"ವೆಲ್....ಸಾಮರ್ಸನ್ ಅಮೆರಿಕಾದಲ್ಲಿ ಕಾಲಿಟ್ಟ. ಅವನನ್ನು

ಸಾದರದೊಡನೆ ಆಹ್ವಾನಿಸಿ ಬೇಕಾದ ಏರ್ಪಾಟುಗಳನ್ನೆಲ್ಲಾ ಮಾಡಿಕೊಟ್ಟಿತು ಅಮೇರಿಕನ್ ಸರ್ಕಾರ. ಸಾಮರ್ಸನ್ ಅಲ್ಲೇ ತನ್ನ ಪ್ರಯೋಗಗಳನ್ನು ಮುಂದುವರೆಸಿದ. ತನ್ನ ಹೆಂಡತಿ ಸಾಯಲು ಕ್ಯಾನ್ಸರ್ ಕಾರಣವೆಂದು ತಿಳಿದ ಕಾರಣ....ಚಿಕಿತ್ಸೆಯೇ ಇಲ್ಲದ ಆ ಕಾಯಿಲೆಯನ್ನು ಹೇಗಾದರೂ ನಿವಾರಿಸಬೇಕೆಂಬ ದೀಕ್ಷೆಯೊಡನೆ ಅವಿಶ್ರಾಂತವಾಗಿ ಸಂಶೋಧನೆಯಲ್ಲಿ ತೊಡಗಿದ. ಹತ್ತು ವರ್ಷ ಅದೇ ಕಾರ್ಯದಲ್ಲಿ ಮುಳುಗಿದ.

"ಅವನ ರಿಸರ್ಚ್‌ಗೆಂದೇ ಪ್ರತ್ಯೇಕವಾಗೊಂದು ಲ್ಯಾಬ್ ಕಟ್ಟಿಸಿ ಕೊಟ್ಟಿತ್ತು ಅಮೇರಿಕನ್ ಸರ್ಕಾರ. ಸಹ ಮಾನವರ ಒಳಿತಿಗಾಗಿ ತನ್ನ ಜೀವನವನ್ನೇ ಮುಡುಪಾಗಿಟ್ಟ ಆ ವಿಜ್ಞಾನಿಯ ಕಾರ್ಯವನ್ನು ಶ್ಲಾಘಿಸಿಸಿದವು ಹಲವಾರು ದೇಶಗಳು .." ತಮ್ಮ ಬ್ರೀಫಿಂಗ್ ನಿಲ್ಲಿಸಿ ಫ್ರೆಷ್ ಸಿಗಾರ್ ಹಚ್ಚಿಕೊಂಡರು 'ಸೆಂಟ್ರಲ್ ಸರ್ವೀಸಿಂಗ್' ಬಾಸ್ ಕರ್ನಲ್ ದಿನೇಶ್ ಕುಮಾರ್.

ತನ್ನ ಮಾಮೂಲಿ ಕುರ್ಚಿಯಲ್ಲಿ ಕುಳಿತು ಶ್ರದ್ಧೆಯಿಂದ ಆ ಮಾತುಗಳನ್ನಾಲಿಸುತ್ತಿದ್ದ ಮಹೇಶ.

"ವೆಲ್....ಇದು ಹಳೆಯ ಕಥೆ ಸರ್! ಆದರೆ ವಾರದ ಹಿಂದೆ ಸಾಮರ್ಸನ್ ಹಠಾತ್ತಾಗಿ ತನ್ನ ಲ್ಯಾಬ್‌ನಿಂದ ಮಾಯವಾಗಿ ಬಿಟ್ಟ. ಇಲ್ಲಿಯವರೆಗೂ ಅವನ ವೇರ್ ಎಬೌಟ್ಸ್ ಅರಿಯಲೇ ಸಾಧ್ಯವಾಗಲಿಲ್ಲ!

"ಅವನು ಹೀಗೆ ಮಾಯವಾದ ಎರಡನೇ ದಿನ ಅವನ ಹೆಸರಿಗೊಂದು ಕವರ್ ಬಂತು. ಅದನ್ನು ತೆರೆಯಲು ಪ್ರಯತ್ನಿಸಿದ ಅವನ ಅಸಿಸ್ಟೆಂಟ್ ಥಾಮಸ್ ಕೈನಲ್ಲೇ ಅದು ಸ್ಫೋಟಿಸಿ ಸ್ಪಾಟ್ ಡೆತ್ ಆದ ಥಾಮಸ್."

"ಗುಡ್ ಗಾಡ್....ಲೆಟರ್ ಬಾಂಬ್!" ಉದ್ಗರಿಸಿದ ಮಹೇಶ.

"ಎಸ್....ಸಾಮರ್ಸನ್‌ಗೆ ಯಾರೋ ಲೆಟರ್ ಬಾಂಬ್ ಪೋಸ್ಟ್ ಮಾಡಿದರು. ಸಾಮರ್ಸನ್ ಇನ್ನೂ ಹಿಂದಿರುಗಿರಲಿಲ್ಲವಾದ ಕಾರಣ ಅದನ್ನು ತೆರೆಯಲು ಪ್ರಯತ್ನಿಸಿದ ಥಾಮಸ್ ಸಾವಪ್ಪಿದ.

"ತಕ್ಷಣ ರಂಗಕ್ಕಿಳಿದ ಸಿ.ಐ.ಎ. ಲೆಟರ್ ಬಾಂಬ್‌ನ ವಿವರಗಳನ್ನು ಶೇಖರಿಸಿಕೊಂಡಾಗ ಹಲವಾರು ವಿಷಯಗಳು ಹೊರಬಂದವು.

"ಸಾರ್ಗನ್ ತನ್ನಷ್ಟಕ್ಕೆ ತಾನೇ ಎಲ್ಲಿಗೂ ಹೋಗಿಲ್ಲವೆಂದು... ಅವನನ್ನು ಒಂದು ಕ್ರಿಮಿನಲ್ ಗ್ಯಾಂಗ್ ಅಪಹರಿಸಿದೆಯೆಂದು ತಿಳಿಸುವ ಮೆಸ್ಸೇಜ್ ಒಂದನ್ನು ಸಾರ್ಗನ್ ತನ್ನ ಲ್ಯಾಬ್‌ನಲ್ಲಿ ಬಿಟ್ಟು ಹೋಗಿದ್ದ !"

"ಕ್ರಿಮಿನಲ್ ಗ್ಯಾಂಗ್ ?"

"ಹೌದು ಸರ್....ನಿನ್ನ ಹಳೆಯ ಮಿತ್ರರೇ....ಗೋಲ್ಡನ್ ಗ್ಯಾಂಗ್ !" ಗಂಭೀರವಾಗಂದರು ಕರ್ನಲ್.

ಸಣ್ಣ ಅನುಮಾನ ಬೆಳೆದು ದೊಡ್ಡದಾಯಿತು ಮಹೇಶನ ಅಂತರಂಗದಲ್ಲಿ. "ಅಂದರೆ... ಸಾರ್ಗನ್ ಮಾಡುತ್ತಿದ್ದ ರಿಸರ್ಚ್ ಕ್ಯಾನ್ಸರ್ ನಿರ್ಮೂಲನೆಗಲ್ಲದೆ....ಅಟಾಮಿಕ್ ವೆಪನ್‌ಗೆ ಸಂಬಂಧಿಸಿದೆಂದು ನಿಮ್ಮ ಮಾತಿನ ತಾತ್ಪರ್ಯವೇನು ?" ಕೇಳಿದ

"ಎಕ್ಸಾಕ್ಟ್ಲೀ ಅಲ್ಲ... ಸಾರ್ಗನ್ ರಿಸರ್ಚ್ ಕೇವಲ ಕ್ಯಾನ್ಸರ್ ನಿವಾರಣೆಗೇ ಆಗಿದ್ದಲ್ಲಿ ಗ್ಯಾಂಗ್ ಅವನನ್ನು ಕಿಡ್ನ್ಯಾಪ್ ಮಾಡುವ ಅವಶ್ಯಕತೆಯೇನಿದೆ ? ಅವನ ಪರಿಶೋಧನೆಯಿಂದ ಗ್ಯಾಂಗ್ ಏನೋ ಪ್ರಯೋಜನ ಅನಿಸುತ್ತಿದೆ. ಅಂದರೆ....ಅದು ಮಾನವರ ಏಳಿಗೆಗೆಂದು ಮಾಡುತ್ತಿರುವ ರಿಸರ್ಚ್ ಅಲ್ಲ ! ಹಿಂದೆ ಸಾರ್ಗನ್ ಅಟಾಮಿಕ್ ವೆಪನ್ಸ್ ಬಗ್ಗೆ ಪ್ರಯೋಗಗಳನ್ನು ಮಾಡುತ್ತಿದ್ದವನಾದ ಕಾರಣ ...ಅವನ್ನೀಗ ಮುಂದುವರೆಸಿ ಏನೋ ಹೊಸ ಹೊಸ ಆವಿಷ್ಕಾರವೆಸಗಿದ್ದಾನೆಂದು ಗ್ಯಾಂಗ್ ಆಕ್ಟಿವಿಟಿ ತಿಳಿಸಿಕೊಡುತ್ತದೆ" ಹೇಳಿದರು ಕರ್ನಲ್.

"ಯು ಮೀನ್... ಸಾರ್ಗನ್ ಮೇಲೆ ವಿದೇಶೀ ಗೂಢಚಾರರ ಕಣ್ಣು ಬೀಳದಿರಲೆಂದು ಅವನು ಮಾಡುತ್ತಿರುವುದು ಕ್ಯಾನ್ಸರ್ ನಿವಾರಣೆಗೆ ಸಂಬಂಧಿಸಿದ್ದೆಂದು ಅವನೀಗ ಅನೌನ್ಸ್ ಮಾಡಿತೆನ್ನುತೀರಾ ?" ಕೇಳಿದ ಮಹೇಶ.

"ರೈಟ್ ಎಗೇನ್....ಆದ್ದರಿಂದಲೇ ಸಾರ್ಗನ್ ಚಟುವಟಿಕೆಗಳ ಬಗ್ಗೆ ಯಾವುದೇ ಏಜೆಂಟ್ ಆಸಕ್ತಿ ತೋರಲಿಲ್ಲ. ಗೋಲ್ಡನ್ ಗ್ಯಾಂಗ್ ಮಾತ್ರ ಆ ವಿಷಯ ತಿಳಿದುಕೊಂಡು ಅವನನ್ನು ತನ್ನ ಕೈ ವಶ ಮಾಡಿಕೊಂಡಿತು" ಹೇಳಿದರು ಕರ್ನಲ್.

"ಸಾರ್ಗನ್ ಮಗಳೇನಾದಳು ?" ಕೇಳಿದ ಮಹೇಶ.

"ಸಿ.ಐ.ಎ. ರಕ್ಷಣೆಯಲ್ಲಿ ತನ್ನ ಸ್ವಂತ ಬಂಗಲೆಯಲ್ಲೇ ಇದ್ದಾಳವಳು. ನಾರ್ಮನ್‌ಗಾಗಿ ಸಿ.ಐ.ಎ. ತನ್ನೆಲ್ಲಾ ಫೆಸಿಲಿಟೀಸ್ ಉಪಯೋಗಿಸಿ ಹುಡುಕಾಡುತ್ತಿದೆ. ಎರಡು ದಿನಗಳಲ್ಲಿ ನಾರ್ಮನ್ ಮಗಳು ಹೆಲ್ಗಾಳನ್ನು ಅವಳ ತಂದೆಯ ಬಗ್ಗೆ ಪ್ರಶ್ನಿಸುವ ಕ್ರಮ ಹಾಕಿಕೊಂಡಿದೆ ಸಿ.ಐ.ಎ. ಅವಳಿಂದ ತಮಗೆ ಸಾಕಷ್ಟು ಮಾಹಿತಿ ಲಭಿಸುತ್ತದೆಂದು ಅವರ ಊಹೆ ಅದೂ ಅಲ್ಲದೆ ನಾರ್ಮನ್, ಗ್ಯಾಂಗ್ ಒತ್ತಡಕ್ಕೆ ಮಣಿಯಲಾರನೆಂದು... ಅವನನ್ನು ಬಗ್ಗಿಸಲು ಹೆಲ್ಗಾಳನ್ನು ಕೂಡ ಕಿಡ್ನಾಪ್ ಮಾಡಬಹುದು ಗ್ಯಾಂಗ್ ಎಂದು ಭಾವಿಸಿ ಅವಳ ಬಂಗಲೆಯನ್ನು ಕಟ್ಟೆಚ್ಚರದೊಡನೆ ಕಾಯುತ್ತಿದ್ದಾರೆ. ನಾರ್ಮನ್ ಅದೃಶ್ಯನಾದ ಬಗ್ಗೆ ಕನಿಷ್ಟ ವಿವರಗಳು ಗೊತ್ತಿರುವುದು ಅವಳೊಬ್ಬಳಿಗೇನೇ!" ಅಂದರು ಕರ್ನಲ್.

"ಇದರಲ್ಲಿ ನಮಗ್ಯಾವ ಸಂಬಂಧವಿದೆ?" ಮೈನ್ ಪಾಯಿಂಟ್‌ಗೆ ಬಂದ ಮಹೇಶ.

ಆರಿಹೋಗಿದ್ದ ಸಿಗಾರ್ ಆಷ್‌ಟ್ರೇಯಲ್ಲದುಮಿ ತೀಕ್ಷ್ಣವಾಗಿ ಮಹೇಶನ ಕಡೆ ನೋಡಿದರು ಕರ್ನಲ್. "ಸೀ....ನಾರ್ಮನ್ ಮಾಡುತ್ತಿದ್ದದ್ದು ಆಟಾಮಿಕ್ ರಿಸರ್ಚ್ ಅದರ ಆ ಪ್ರಯೋಗದ ಫಲ ಅಮೇರಿಕಾಗಾಗಲಿ, ಗ್ಯಾಂಗ್‌ಗಾಗಲಿ ಸಿಗದಂತೆ ಮಾಡುವುದೇ ನಮ್ಮ ಸಂಬಂಧ! ಸದ್ಯ ಇರುವ ಆಟಾಮಿಕ್ ವೆಪನ್ಸ್ ಸ್ಟಾಕ್ ಸಾಕು....ಇಡೀ ಪ್ರಪಂಚವನ್ನು ಹತ್ತು ಸಲ ಭಸ್ಮ ಮಾಡಲು! ಅಷ್ಟು ಸಾಲದೆ ಇನ್ನೂ ಹೊಸ ಹೊಸ ವೆಪನ್ಸ್ ತನ್ನ ಸಂಗ್ರಹಕ್ಕೆ ಸೇರಿಸುವ ಅಮೇರಿಕಾದ ಚಪಲ ಆ ದೇಶದ ಯುದ್ಧಾಕಾಂಕ್ಷೆಯನ್ನು ಪ್ರಕಟಿಸುತ್ತದೆ. ನೋ...ಹೊಸ ವೆಪನ್ ಅವರಿಬ್ಬರಿಗೂ ಸಿಗಬಾರದು! ಜೊತೆಗೆ....ನಾರ್ಮನ್‌ನನ್ನು ಅಮೇರಿಕಾದಿಂದ ಇಲ್ಲಿಗೆ ಕರೆ ತರುವುದು ನಿನ್ನ ಅಸೈನ್‌ಮೆಂಟ್‌ನ ಬಹು ಮುಖ್ಯ ಭಾಗ!" ಹೇಳಿದರು ಕರ್ನಲ್.

ಅವರನ್ನೇ ತದೇಕವಾಗಿ ನೋಡಿದ ಮಹೇಶ, "ಯು ಮೀನ್....?" ಕೇಳಿದ.

"ಐ ಮೀನ್ ವಾಟ್ ಐ ಸೆಡ್! ನಾರ್ಮನ್ ಸಹ ಭಾರತಕ್ಕೆ ಬರಲು

ಜಗಳ ಆಸಕ್ತಿಯೊಡನಿದ್ದಾನೆ. ಗ್ಯಾಂಗ್ ಅವನನ್ನು ಕಿಡ್ನಾಪ್ ಮಾಡುವ ಮೊದಲೇ ಇಲ್ಲಿಗೆ ಕರೆತರುವ ಪ್ರಕ್ರಿಯೆ ಆರಂಭಗೊಂಡಿತ್ತು. ಅಲ್ಲಿನ ನಮ್ಮ ಏಜೆಂಟ್ ಅನ್ನು ಆಕ್ಟಿವೇಟ್ ಮಾಡುವ ಮೊದಲೇ ಈ ಅಪಹರಣ ಜರುಗಿ ಬಿಟ್ಟಿತು. ಆದ್ದರಿಂದಲೇ ಈ ಗುರುತರ ಹೊಣೆ ನಿನ್ನ ಹೆಗಲೇರಿಸಲಾಗಿದೆ" ವಿವರಿಸಿದರು ಕರ್ನಲ್.

ನೈಜ ವಿಷಯವೇನೆಂದು ವಿದ್ಯುಳಿಗೆ ಫ್ಲಾಷ್ ಆಗುತ್ತಿದ್ದಂತೆ ಕಿರು ನಗೆ ಪ್ರತ್ಯಕ್ಷವಾಗಿತ್ತು ಮಹೇಶನ ತುಟಿಗಳ ಮೇಲೆ.

ನಾರ್ಮನ ....ಯಾವುದೋ ಕಾರಣಕ್ಕೆ ಅಮೇರಿಕಾದಿಂದ ರಹಸ್ಯವಾಗಿ ಬೇರೆ ಕಡೆ ಹೋಗುವ ನಿರ್ಧಾರಕ್ಕೆ ಬಂದಿರಬೇಕು ಭಾರತವನ್ನೇ ಆಯ್ಕೆ ಮಾಡಿಕೊಂಡು ರಾಲ್ ಅನ್ನು ಸೀಕ್ರೆಟ್ಟಾಗಿ ಸಂಪರ್ಕಿಸಿ ತನ್ನ ಆವಿಷ್ಕಾರದ ಅವಿಷ ಒಪ್ಪಿ ಅಮೇರಿಕಾದಿಂದ ತನ್ನನ್ನು ಲಿಫ್ಟ್ ಮಾಡುವಂತೆ ಬೇಡಿಕೊಂಡಿರಬೇಕು....ಅದು ತ್ರೂ ಪ್ರಾಪರ್ ಚಾನಲ್‌ನಲ್ಲಿ ಅಪ್ರೂವ್ ಆಗಿ ನಮ್ಮವರು ಆಕ್ಟಿವೇಟ್ ಆಗುವಷ್ಟರಲ್ಲಿ ಗೋಲ್ಡನ್‌ಗ್ಯಾಂಗ್ ತಲೆ ತೂರಿಸಿ ಬಿಟ್ಟಿದೆ ! ಅದಕ್ಕೇ ತನಗೀಗ ಪಿಲಿ ಸ ಆಹ್ವಾನ !

ಅವನನ್ನು ಐದು ನಿಮಿಷ ಮಸ್ತಕದಲ್ಲೇ ಮಂಥನ ಮಾಡಲು ಟು ತುಟಿ ತೆರೆದರು ಕರ್ನಲ್

"ಅಮೇರಿಕಾದೊಡನೆ ನಮಗೆ ಒಳ್ಳೆಯ ರಿಲೇಷನ್ ಷಿಪ್ ಇದೆ ಸನ್ ! ಆದರದು ಸ್ಟೇಟ್ ರೋಪ್ ವಾಕ್ ! ಯಾವ ಕ್ಷಣದಲ್ಲಾದರೂ ಆ ಹಗ್ಗ ತುಂಡರಿಸಬಹುದು. ಆದ್ದರಿಂದಲೇ ನಿನ್ನ ಸುಳಿವು ಸಿ ಐ ಎ ಗೆ ತಿಳಿಯುದಂತೆ ನಾರ್ಮನ್‌ನನ್ನು ಇಲ್ಲಿಗೆ ಸಾಗಿಸಬೇಕು. ಅವನ ಪ್ರಯೋಗಗಳು ಇವೀಗ ಹಾಲಿಸ್ಕಿ ಕಡೆಯಿಂದ ಒತ್ತಡದಲ್ಲಿ ಸಿಲುಕಿರುವ ನಮಗೆ ಅತ್ಯವಶ್ಯಕ. ಅಮೇರಿಕಾದಲ್ಲಿರುವ ನಮ್ಮ ದೂತಾವಾಸದಿಂದಾಗಲಿ....ನಮ್ಮ ಅಲ್ಲಿನ ಏಜೆಂಟಿಂದಾಗಲಿ ನಿನಗ್ಯಾವುದೇ ಹೆಲ್ಪ್ ಸಿಗದು. ಯು ವಿಲ್ ಬಿ ಆನ್ ಯುವರ್ ಓನ್ ! ನಾರ್ಮನ್‌ನನ್ನು ಟ್ರೇಸ್ ಮಾಡಿ ಕ್ಷೇಮವಾಗಿ ಕರೆತರಬೇಕು" ಹೇಳಿದರು ಕರ್ನಲ್.

ಸಡನ್ ಜರ್ಕ್‌ನೊಡನೆ ನಿಂತಿತು ಡಾಟ್ಸನ್ ಕಾರು !

"ಮಹೇಶ್....ಹೋಟೆಲ್ ಬಂತು !"

ತಲೆಯೊದರಿ ತನ್ನ ಲಹರಿಯಿಂದ ಹೊರಬಂದ ಮಹೇಶನ ಕಡೆ ನೋಡುತ್ತಾ ಹೇಳಿದ ಸಿಂಗರ್.

ಸಿಖ್ ಪಗಡಿ ತಲೆಯ ಮೇಲೇರಿಸಿ, ಗಡ್ಡ ಮೀಸೆ ಅಂಟಿಸಿಕೊಂಡು ಮುಖವ ವಿಂಡೋ ಗ್ಲಾಸ್‌ನಲ್ಲಿ ಪರಿಶೀಲಿಸಿ ತೃಪ್ತಿ ಹೊಂದಿ ಕಾರಿನಿಂದ ಕೆಳಕ್ಕಿಳಿದ ಮಹೇಶ.

ಕಾರು ಪಾರ್ಕ್ ಮಾಡಲು ಪಾರ್ಕಿಂಗ್ ಲಾಟ್ ಕಡೆಗೆ ಡಾಟ್ಸನ್ ಮೂವ್ ಮಾಡಿದ ಸಿಂಗರ್.

ಎರಡು ಕ್ಷಣ ಸುತ್ತಮುತ್ತ ಪರಿಶೀಲಿಸಿ ರಿಸೆಪ್ಷನ್ ಹಾಲ್ ಕಡೆಗೆ ನಡೆದ ಮಹೇಶ

# 3

ಮಹೇಶ ಹೇಳಿದ ವಿಷಯಗಳನ್ನು ಕೇಳಿದ ಮೇಲೆ ಹತ್ತು ನಿಮಿಷ ಮಾತಾಡದೆ ಸುಮ್ಮನಿದ್ದು ಬಿಟ್ಟ ಸಿಂಗರ್. ಸಿಗರೇಟ್ ಹಚ್ಚಿ ಕಿಟಕಿಯಿಂದ ಹೊರಗೆ ನೋಡುತ್ತಾ ನಿಂತ. ಮಹೇಶ ಅವನ ಪ್ರತಿಕ್ರಿಯೆಗೆ ಕಾಯುತ್ತಾ.

ಸರಿಯಾಗಿ ಹತ್ತು ನಿಮಿಷಗಳ ನಂತರ ತುಟಿ ತೆರೆದ ಸಿಂಗರ್.

"ಓ.ಕೆ. ಮಹೇಶ್....ನಾನು ನಿನಗೆ ಸಹಾಯ ಮಾಡುತ್ತೇನೆ. ನಾನು ಫೀಲ್ಡ್‌ನಿಂದ ದೂರವಾಗಿ ಬಹಳ ಕಾಲವಾಗಿದೆ. ರಿಫ್ಲೆಕ್ಸಸ್ ಮೊದಲಿನಂತಿಲ್ಲ. ನನ್ನಿಂದ ಉಪಯೋಗವಾದೀತೇ ಎಂಬುದೇ ಸಂಶಯ !" ಅಂದ.

"ಯು ಡೋಂಟ್ ವರಿ ಮ್ಯಾನ್....ನನಗೆ ಬೇಕಾದದ್ದು ನಿನ್ನ ಬಲ ಪ್ರದರ್ಶನವಲ್ಲ....ಬುದ್ಧಿ....ಅದನ್ನು ಪ್ರಯೋಗಿಸಿ ಕೆಲಸ ಮಾಡಿದರಷ್ಟೇ ಸಾಕು !" ಅಂದ ಮಹೇಶ.

ನಕ್ಕ ಸಿಂಗರ್. "ಹಾಗಿದ್ದಲ್ಲಿ ಸಮಸ್ಯೆಯಿಲ್ಲ ಫ್ರೆಂಡ್... ಈ ಕ್ಷಣದಿಂದ ನನ್ನ ತಲೆ ನಿನ್ನ ಕೈನಲ್ಲಿ. ನಿನಗಿಷ್ಟಬಂದಂತೆ ಉಪಯೋಗಿಸಿಕೋ...." ಹೇಳುತ್ತಾ ಸೋಫಾದಿಂದೆದ್ದು ಕಬೋರ್ಡ್‌ನಿಂದ ಸ್ಕಾಚ್ ಒಂದು ಗ್ಲಾಸಿಗೆ ಬಗ್ಗಿಸಿಕೊಂಡು ತುಟಿಗಂದಿಸಿಕೊಂಡ.

"ಥ್ಯಾಂಕ್ಯೂ ಸಿಂಗರ್...ಮೊದಲು ನಾರ್ದರ್ನ್ ಅಪಾರ್ಟ್‌ಮೆಂಟ್ ಎದುರಿನ ಸಾಲಿನಲ್ಲಿ ಒಂದು ಅಪಾರ್ಟ್‌ಮೆಂಟ್ ತಾತ್ಕಾಲಿಕವಾಗಿಯಾದರೂ

ನಾವು ಪಡೆಯಬೇಕು. ನಾರ್ಮನ್ ಅಪಾರ್ಟ್‌ಮೆಂಟ್ ಕ್ಲಿಯರ್ ಆಗಿ ಕಾಣುವ ರೇಂಜ್‌ನಲ್ಲಿರುವ ಬಂಗಲೆ ಪಡೆಯಲು ಚುರುಕಾಗಿ ಮುಂದಿನ ಪ್ರಯೋಗ ನಡೆಸಬೇಕಾಗುತ್ತದೆ ನೀನು !" ಅಂದ ಮಹೇಶ.

ಸ್ಕಾಚ್ ಸಿಪ್ ಮಾಡುತ್ತಿದ್ದ ಸಿಂಗರ್ ಮುಖ ಕಿವುಚಿದ, "ನಾರ್ಮನ್ ಸ್ಟ್ರೀಟ್‌ನಲ್ಲಿರುವುದೆಲ್ಲಾ ಫ್ಯಾಮಿಲಿ ಅಪಾರ್ಟ್‌ಮೆಂಟ್ಸ್....ಅದರಲ್ಲಿ ನಾರ್ಮನ್ ಮನೆ ಕ್ಲಿಯರ್ ಆಗಿ ಕಾಣಬೇಕೆಂದರೆ...." ಸ್ವಲ್ಪ ಹೊತ್ತು ತೀವ್ರವಾಗಿ ಯೋಚಿಸಿದ. "ಆಲ್‌ರೈಟ್ ! ನನಗೊಂದು ಗಂಟೆ ಕಾಲಾವಕಾಶ ಕೊಡು. ನಿನಗೆ ಬೇಕಾದ ಅಪಾರ್ಟ್‌ಮೆಂಟ್ ಅಡ್ಜಸ್ಟ್ ಮಾಡಿ ಬರುತ್ತೇನೆ" ಎಂದು ಹೇಳಿ ಗ್ಲಾಸ್ ಕೆಳಗಿಟ್ಟು ರೂಮ್‌ನಿಂದ ಹೊರ ನಡೆದ

ಕಿಟಕಿಯ ಬಳಿಯಿಂದ ಕದಲಿ ಕಬೋರ್ಡ್‌ನಲ್ಲಿದ್ದ ಸ್ಕಾಚ್ ಬಾಟಲ್ ಎತ್ತಿಕೊಂಡ ಮಹೇಶ. ಈ ಸಂಜೆಯ ಡೆಲ್ಟಾಳನ್ನು ಸಿ ಐ ಎ. ಕೃಷ್ಣ ಸಿಂಗ್‌ಗೆ ಕರೆದೊಯ್ಯುತ್ತದೆ. ಅವನ ಕ್ಲಚಸ್‌ನಿಂದವಳ ಬಿಡಿಸಿ ಪ್ರಶಾಂತವಾದ ಸ್ಥಳಕ್ಕೆ ಕರೆತರಬೇಕು. ತನ್ನ ತಂದೆಯ ಬಗ್ಗೆ ವಿವರಗಳನ್ನು ನೀಡಲವಳು ರೆಡಿಯಾಗಿರುತ್ತಾಳೋ....ಇಲ್ಲವೋ !

ಸ್ಕಾಚ್ ಗ್ಲಾಸ್‌ಗೆ ಐಸ್‌ಕ್ಯೂಬ್ಸ್ ಮಿಕ್ಸ್ ಮಾಡಿ ಸಿಪ್ ಮಾಡ ತೊಡಗಿದ.

ಸಂಜೆಯೊಳಗೆ ತಾನು ಮಾಡಬೇಕಾದ ಇನ್ನೊಂದು ಮುಖ್ಯವಾದ ಕೆಲಸವಿದೆ. ಅದು ನಾರ್ಮನ್‌ನ ಪರ್ಸನಲ್ ಲ್ಯಾಬೊರೇಟರಿ ಚೆಕ್ ಮಾಡುವ ಸಂಗತಿ ! ಅದಕ್ಕೆ ಸಿ.ಐ.ಎ. ಸಾಲಿಡ್ ಸೆಕ್ಯುರಿಟಿ ಮಾಡಿರುತ್ತದೆಂಬುದು ಗ್ಯಾರಂಟಿ. ಆ ಕಾವಲು ದಾಟಿ ಯಾವುದೇ ಗಲಭೆಯಾಗದಂತೆ ಲ್ಯಾಬ್ ಚೆಕ್ ಮಾಡಿಕೊಂಡು ಬರಬೇಕು. ತಾನು ಅದೃಶ್ಯನಾಗುವ ಮೊದಲು ನಾರ್ಮನ್ ಇನ್ಯಾವುದಾದರೂ ಕ್ಲೂ ಲ್ಯಾಬ್‌ನಲ್ಲಿ ಬಿಟ್ಟೇನಾದರೂ ಹೋಗಿದ್ದಾನೇನೋ ? ಸಿ ಐ ಎ. ಚೆಕಪ್‌ನಲ್ಲಿ ಅದು ಮಿಸ್ ಆಗಿದ್ದರೆ ತನಗೆ ಜಾಕ್‌ಪಾಟ್ !

ಆಲೋಚನೆಗಳಲ್ಲಿ ಮುಳುಗಿದ ಮಹೇಶ

ಹೇಳಿದಂತೆಯೇ ಗಂಟೆಯ ನಂತರ ರೂಮ್‌ನೊಳಕ್ಕೆ ಕಾಲಿಟ್ಟ

ಸಿಂಗರ್ "ಏ ಆರ್ ಲಕ್ಕಿ ಮ್ಯಾನ್ ! ರೆಂಟಲ್ ಡಿಪಾರ್ಟ್‌ಮೆಂಟ್‌ಗೆ ಒಂದು ಜರ್ಕ್ ಕೊಟ್ಟೆ ಸರಿಯಾಗಿ ಸಾಮರ್ ಅಪಾರ್ಟ್‌ಮೆಂಟ್ ಮುಂದಿನ ಸಾಲಿನಲ್ಲೇ ಒಂದು ಅಪಾರ್ಟ್‌ಮೆಂಟ್ ಖಾಲಿ ಇದೆಯಂತೆ. ಅದನ್ನು ನಮಗೆ ಅಲಾಟ್ ಮಾಡಿಸಿಬಿಟ್ಟೆ....ಇಗೋ ಆ ಅಪಾರ್ಟ್‌ಮೆಂಟ್ ಕೀ !" ಮಹೇಶನ ಕೈಗೊಂದು ಬೀಗದ ಕೈ ಕೊಟ್ಟ.

"ದಟೀಸ್ ರಿಯಲಿ ಗುಡ್ ಸಿಂಗರ್....ಕಮಾನ್....ನಾವು ಮೊದಲು ಆ ಅಪಾರ್ಟ್‌ಮೆಂಟ್ ಸೇರಿಕೊಳ್ಳಬೇಕು" ತನ್ನೊಡನೆ ತಂದಿದ್ದ ಸೂಟ್ ಕೇಸ್ ಎತ್ತಿಕೊಳ್ಳುತ್ತಾ ಹೇಳಿದ ಮಹೇಶ.

ಕಾಲು ಗಂಟೆಯಲ್ಲಿ ಹೋಟೆಲ್‌ನಿಂದ ಹೊರಟಿದ್ದ ಸಾಮರ್ ನಿವಾಸ ವಿದ್ದ ಅವೆನ್ಯೂ ಕಡೆಗೆ ಪ್ರಯಾಣಿಸಿದ್ದರು ಅವರು.

ಅವೆನ್ಯೂ ಎಂಟರ್ ಆಗಿ ಸಾಮರ್ ಅಪಾರ್ಟ್‌ಮೆಂಟ್ ಇದ್ದ ಸ್ಟ್ರೀಟ್‌ಗೆ ಡಾಟ್ಸನ್ ತಿರುಗಿದೊಡನೆ ಮಹೇಶನ ನೋಟ ಮೊದಲು ಸಾಮರ್ ಅಪಾರ್ಟ್‌ಮೆಂಟ್ ಕಡೆಗೆ ಹರಿಯಿತು.

ಬೇರೆಲ್ಲಾ ಅಪಾರ್ಟ್‌ಮೆಂಟ್‌ಗಳಂತೆಯೇ ಇತ್ತದು. ಪ್ರತೇಕತೆ ಮಾತ್ರ ಮುಖಕ್ಕೆ ಗುದ್ದಿದಂತೆ ಕಾಣ ಬರುತ್ತಿತ್ತು.

ಅಪಾರ್ಟ್‌ಮೆಂಟ್ ಗೇಟ್ ಬಳಿ ನಿಂತು ಕಾವಲು ಕಾಯುತ್ತಿರುವ ಇಬ್ಬರು ಸಿ.ಐ.ಎ. ಗಾರ್ಡ್‌ಗಳು !

ಆ ಅಪಾರ್ಟ್‌ಮೆಂಟ್‌ನಲ್ಲೇ ಸಾಮರ್ ಮಗಳು ಹೆಲ್ಗಾ ಇದ್ದಳು. ಅವಳಿಗ್ಯಾವುದೇ ಅಪಾಯವೊದಗದಂತೆ ಸಿ ಐ ಎ. ಕಾವಲೇರ್ಪಡಿಸಿತ್ತು. ಹೊರಗಷ್ಟೇ ಅಲ್ಲ....ಒಳಗೂಸಿ.ಐ.ಎ ಗಾರ್ಡ್‌ಗಳಿದ್ದಾರೆಂದು ಯಾವಾಗಲೋ ಲೆಕ್ಕ ಹಾಕಿದ್ದ ಮಹೇಶ.

ಅವರಿಗೆ ಏಮಾರಿಸಿ ಹೆಲ್ಗಾಳನ್ನು ಹೊರಗೆ ಕರೆತರುವುದಕ್ಕಿಂತಾ ಸಂಜೆ ಅವಳನ್ನು ಸಿ.ಐ.ಎ ಹೆಡ್‌ಕ್ವಾರ್ಟರ್ಸ್‌ಗೆ ಕರೆದೊಯ್ಯುವಾಗ ಎಗರಿ ಸುವುದೇ ಕಡಿಮೆ ರಿಸ್ಕ್ ಅನ್ನಿಸತೊಡಗಿತ್ತು ಅವನಿಗೆ.

ಸಾಮರ್ ಅಪಾರ್ಟ್‌ಮೆಂಟ್‌ನಿಂದ ತುಸು ಮುಂದೆ ಹೋಗಿ ಅಪೋ ಸಿಟ್ ಸಾಲಿನ ಒಂದು ಸಣ್ಣ ಅಪಾರ್ಟ್‌ಮೆಂಟ್ ಮುಂದೆ ನಿಂತಿತು ಡಾಟ್ಸನ್

ಕಾರು. ಸಿ ಐ ಎ. ಗಾರ್ಡ್ಸ್ ಆ ಕಾರನ್ನೇ ಅಬ್ಸರ್ವ್ ಮಾಡುತ್ತಿರುವುದನ್ನು ಕಣ್ಣಂಚಿನಿಂದಲೇ ಗಮನಿಸಿದ್ದ ಮಹೇಶ.

ತಾನು ಊಹಿಸುತ್ತಿರುವಂತೆಯೇ ಗೋಲ್ಡನ್ ಗ್ಯಾಂಗ್ ಹೆಲ್ಗಾಳನ್ನು ಕಿಡ್ನ್ಯಾಪ್ ಮಾಡಲು ಅಟೆಂಪ್ಟ್ ಮಾಡಬಹುದು ಎಂದು ಸಿ ಐ.ಎ. ಸಹ ಯೋಚಿಸಿದಂತಿದೆ. ವೆಲ್... ಗ್ಯಾಂಗ್ ಕಿಡ್ನ್ಯಾಪ್ ಅಟೆಂಪ್ಟ್ ಮಾಡಿದರೆ ಬಹಳ ಒಳ್ಳೆಯದು ! ಸಂದಿಯಲ್ಲಿ ಸಮಾರಾಧನೆ ಎಂದು ತನ್ನ ಕೆಲಸ ತಾನು ಮಾಡಿಕೊಳ್ಳಬಹುದು !

ಕಾರು ನಿಲ್ಲಿಸಿ ಅಪಾರ್ಟ್‌ಮೆಂಟ್ ಡೋರ್ ತೆಗೆದ ಸಿಂಗರ್. ಸೂಟ್ ಕೇಸ್‌ನೊಡನೆ ಒಳಕ್ಕೆ ಎಂಟರಾಗುವಾಗ ಸಹಜವಾಗಿ ತಲೆ ಹಿಂದಕ್ಕೆ ತಿರುಗಿಸಿ ನೋಡಿದ ಮಹೇಶ. ತಾನೊಬ್ಬ ಸಾಮಾನ್ಯ ಪೌರನಂತೆ ಸಿ.ಐ ಎ. ಗಾರ್ಡ್‌ಗಳನ್ನು ಆಶ್ಚರ್ಯದೊಡನೆ ನಿರುಕಿಸಿ ಒಳಕ್ಕೆ ನಡೆದ. ಆಷ್ಟೊತ್ತಿಗೆ ಅವರ ಮೇಲಿನ ಆಸಕ್ತಿ ಮಾಯವಾಗಿ ಬೇರೆಲ್ಲೋ ನೋಡುತ್ತಿದ್ದರು ಗಾರ್ಡ್ಸ್ !

ತಮ್ಮ ಅಪಾರ್ಟ್‌ಮೆಂಟ್ ಡೋರ್ ಮುಚ್ಚಿ ಹಾಲ್‌ನಿಂದ ಅದಕ್ಕೇ ಅಂಟಿಕೊಂಡಂತಿದ್ದ ಬೆಡ್‌ರೂಂನೊಳಕ್ಕೆ ನಡೆದ ಮಹೇಶ.

ಆಗಲೇ ಬೆಡ್‌ರೂಂ ಕಿಟಕಿಗಳನ್ನು ತೆಗೆದ ಸಿಂಗರ್. ಆ ಕಿಟಕಿಯಿಂದ ಸರಿಯಾಗಿ ಮೂವತ್ತು ಡಿಗ್ರಿ ಆಂಗಲ್‌ನಲ್ಲಿ ಸಾಮರ್ಸ್ ಅಪಾರ್ಟ್‌ಮೆಂಟ್ ಮುಂಭಾಗ ಕ್ಲಿಯರ್ ಆಗಿ ಕಾಣಿಸುತ್ತಿತ್ತು.

"ಇಲ್ಲೊಂದು ಚೇರ್ ಹಾಕಿಕೊಂಡು ಕುಳಿತರೆ ಸಾಕು ಮಹೇಶ್.... ಅಲ್ಲೇನು ನಡೆಯುತ್ತದೆಂಬುದನ್ನು ಸ್ಪಷ್ಟವಾಗಿ ಕಾಣಬಹುದು" ತುಸುವೇ ಕಿಟಕಿಯ ಬಾಗಿಲು ತೆರೆದು ಹೇಳಿದ ಸಿಂಗರ್.

ತಲೆಯಾಡಿಸಿ ಸೂಟ್‌ಕೇಸ್ ಮಂಚದ ಮೇಲಿಟ್ಟು ಲ್ಯಾಚಸ್ ಓಪನ್ ಮಾಡಿ ತೆರೆದ ಮಹೇಶ.

ಅದರೊಳಕ್ಕೆ ಬಗ್ಗಿ ನೋಡಿ, "ಏನದು ?" ಆಶ್ಚರ್ಯದೊಡನೆ ಕೇಳಿದ ಸಿಂಗರ್.

'ಸೆಲ್ಫ ಪ್ರಿಂಟ್ ಆಟೋಮಿಡಿಯೋ ಕ್ಯಾಮರಾ !' ಅವನಿಗೆ ಉತ್ತ

ರಿಸಿ ನಾಲ್ಕು ಗ್ಲಾಸ್ ಪೀಸ್‌ಗಳ ಸ್ಕ್ವೇಯರ್‌ನಂತಿದ್ದ ಆ ಪರಿಕರವನ್ನು ಹೊರಕ್ಕೆ ತೆಗೆದ ಮಹೇಶ

"ಇದೇಕೆ ಮಹೇಶ್ ?" ಸೂಟ್‌ಕೇಸ್‌ನಲ್ಲೇ ಮಡಚಿಟ್ಟಿದ್ದ ಅವರ ಸ್ಟ್ಯಾಂಡ್ ತೆಗೆದು ನೆಲದ ಮೇಲಿಟ್ಟು ಎತ್ತರ ನೋಡಿಕೊಂಡು ಅದನ್ನು ಅಡ್ಜಸ್ಟ್ ಮಾಡುತ್ತಿದ್ದ ಮಹೇಶನ ಕೆಲಸ ನೋಡುತ್ತಾ ಅರ್ಥವಾಗದೆ ಕೇಳಿದ ಸಿಂಗರ್.

ಸ್ಟ್ಯಾಂಡ್ ನಿಲ್ಲಿಸಿ ವಿಡಿಯೋ ಕ್ಯಾಮೆರಾ ಅದಕ್ಕೆ ಫಿಕ್ಸ್ ಮಾಡಿ ಕಿರು ನಗೆ ಬೀರಿದ ಮಹೇಶ. "ಸಂಜೆಯವರೆಗೂ ಅಪಾರ್ಟ್‌ಮೆಂಟ್ ನೋಡುತ್ತಾ ಕೂರುವಷ್ಟು ವೇಳೆ ನಮಗಿಲ್ಲ ಸಿಂಗರ್. ಇನ್ನಿರುವುದು ನಾಲ್ಕೇ ಗಂಟೆಗಳ ಅವಧಿ ಹಲ್ಲಾಳನ್ನು ಸಿ ಐ ಎ ನವರು ಕರೆದೊಯ್ಯಲು....ವೆಲ್....ಈ ನಾಲ್ಕು ಗಂಟೆಗಳೊಳಗೆ ನಾವು ಮಾಡಬೇಕಾದ ಮುಖ್ಯ ಕೆಲಸವೊಂದಿದೆ. ಆದ್ದರಿಂದಲೇ ಈ ವಿಡಿಯೋ ಕ್ಯಾಮೆರಾದ ಸಹಾಯ ಪಡೆಯಬೇಕಾಯಿತು. ಇದು ಆಟೋಮ್ಯಾಟಿಕ್ಕಾಗಿ ನಾರ್ಮನ್ ಅಪಾರ್ಟ್‌ಮೆಂಟ್ ಮುಂಭಾಗದ ಪಿಕ್ಚರ್ ತೆಗೆಯುತ್ತದೆ. ಅದರ ಹೆಲ್ಪಿನಿಂದ ನಾವಿಲ್ಲದಿದ್ದಾಗಲೂ ಇಲ್ಲೇನು ನಡೆಯಿತೆಂದು ನಾವು ತಿಳಿದುಕೊಳ್ಳಬಹುದು !" ವ್ಯೂ ಫೈಂಡರ್‌ನಲ್ಲಿ ನೋಡುತ್ತಾ ಫ್ರೇಮ್ ಅಡ್ಜಸ್ಟ್ ಮಾಡುತ್ತಿದ್ದ ಮಹೇಶ ಉತ್ತರಿಸಿದ.

"ಐ.ಸೀ !" ತಲೆ ಕುಣಿಸಿ ಅವನ ಚಟುವಟಿಕೆ ಗಮನಿಸತೊಡಗಿದ ಸಿಂಗರ್.

ನಾರ್ಮನ್ ಅಪಾರ್ಟ್‌ಮೆಂಟ್ ಅಲ್ಲದೆ ಅತ್ತ ಇತ್ತ ಸ್ವಲ್ಪ ದೂರ ರಸ್ತೆಯನ್ನು ಸಹ ಫ್ರೇಮ್‌ನೊಳಕ್ಕೆ ತಂದ ಮಹೇಶ ಪೊಸಿಷನ್ ಕನ್‌ಫರ್ಮ್ ಮಾಡಿ ಸಿಕ್ಸ್ ಎಮ್. ಎಮ್ ರೀಲ್ ಕಾಯಿಲ್ ಎತ್ತಿಕೊಂಡು ಅಡ್ಜಸ್ಟ್ ಮಾಡಿದ. ಅದು ಸರಿಯಾಗಿ ನಾಲ್ಕು ಗಂಟೆಯವರೆಗೆ ಕ್ಯಾಮೆರಾಗೆ ರೀಲ್ ಫೀಡ್ ಮಾಡುತ್ತಿತ್ತು. ಆಟೋಮ್ಯಾಟಿಕ್ ಡಿವೈಸ್‌ಗಳನ್ನೆಲ್ಲಾ ಚೆಕ್ ಮಾಡಿ ಅದರ ಪವರ್ ವೈರ್ ಬ್ಯಾಟರಿ ಬಾಕ್ಸ್‌ಗೆ ಅಟಾಚ್ ಮಾಡಿ ಆನ್ ಬಟನ್ ಪ್ರೆಸ್ ಮಾಡಿದ ಮಹೇಶ.

ಸಣ್ಣ ಹಮ್ಮಿಂಗ್‌ನೊಡನೆ ರೀಲ್ ಕಾಯಿಲ್ ರೋಟೇಟ್ ಆಗಲು ಶುರುವಾಗಿತು. ಆಟೋಮ್ಯಾಟಿಕ್ಕಾಗಿ ಸಾವರ್ಗ ಅಪಾರ್ಟ್‌ಮೆಂಟ್ ಅನ್ನು ಎಕ್ಸರ್‌ಸೈಸ್ ಮಾಡಲು ಶುರುಮಾಡಿತು ವಿಡಿಯೋ ಕ್ಯಾಮರಾ.

"ಓ.ಕೆ.... ಇನ್ನು ಹೊರಡೋಣವೇ ?" ಕೇಳಿದ ಸಿಂಗರ್.

"ಜಸ್ಟ್ ಎ ಮಿನಿಟ್...." ಸೂಟ್‌ಕೇಸ್‌ನಲ್ಲಿದ್ದ ಮಿಕ್ಕ ವಸ್ತುಗಳನ್ನೆತ್ತಿಕೊಳ್ಳುತ್ತಾ ಹೇಳಿದ ಮಹೇಶ

ತಾನು ಹಾಕಿಕೊಂಡಿದ್ದ ಸಿಖ್ ಔಟ್ ಫಿಟ್ ತೆಗೆದು ಬ್ಲ್ಯಾಕ್ ಕಲರ್ ಸೂಟ್ ಹಾಕಿಕೊಂಡ ಮಹೇಶ. ಗಡ್ಡ ಮೀಸೆ ತೆಗೆದು ಬಿಟ್ಟು ಸರಸರನೆ ಕನ್ನಡಿಯ ಮುಂದೆ ಕುಳಿತು ಮೇಕಪ್ ಮಾಡಿಕೊಳ್ಳಲು ಶುರು ಮಾಡಿದ.

ಐದೇ ನಿಮಿಷಗಳಲ್ಲಿ ಅವನ ಅವತಾರವೇ ತಾರುಮಾರಾಯಿತು !

ಐವತ್ತು ವರ್ಷಗಳ ಸಿಖ್ಖನ ಜಾಗದಲ್ಲೀಗ ಸುಮಾರು ಮೂವತ್ತೈದರ ಹರೆಯದ ಅಮೇರಿಕನ್ ಸಿ.ಐ.ಎ ಆಫೀಸರ್ ಪ್ರತ್ಯಕ್ಷನಾಗಿದ್ದ. ಕೋಟಿನ ಲೇಪಲ್‌ಗೆ ಪಿನ್ಸ್ ಆಗಿದ್ದ ಬ್ಯಾಡ್ಜ್ ಸರಿಪಡಿಸಿಕೊಂಡು ಫೈನಲ್ಲಾಗೊಮ್ಮೆ ತನ್ನ ಪೂರಾ ವೇಷ ಚೆಕ್ ಮಾಡಿಕೊಂಡ ಮಹೇಶ.

ಮೂಕ ವಿಸ್ಮಿತನಾಗಿ ಮಹೇಶನನ್ನು ನೋಡುತ್ತಿದ್ದ ಸಿಂಗರ್. ಅವನ ಬಗ್ಗೆ ಗ್ಯಾಂಗ್ ಮೆಂಬರ್ ಆಗಿದ್ದಾಗ ಅರಗಿಸಿಕೊಂಡಿದ್ದ ಮಾಹಿತಿಗಳೆ ಅಲ್ಲ ಅವನಿಗೆ ಓದಿ, ಕೇಳಿತ್ತಷ್ಟೇ. ಈಗ ಮಹೇಶನ ಅಸಾಧಾರಣ ಚಾಕಚಕ್ಯತೆಯನ್ನು ಕಣ್ಣಾರೆ ನೋಡಿ ಭ್ರಮಿತಗೊಳ್ಳುವ ಅವಕಾಶ ದೊರಕಿತ್ತು. ಆದ್ದರಿಂದಲೇ ಗೋಲ್ಡನ್ ಗ್ಯಾಂಗ್ ಇನ್ನೂ ಇವನ ಕೂದಲನ್ನು ಕೊಂಕಿಸಲಾಗಲಿಲ್ಲ !

ಸೂಟ್‌ಕೇಸ್‌ನ ಕಳ್ಳ ತಳದಿಂದ ತನ್ನ ಜೀವನದ ಅವಿಭಾಜ್ಯ ಅಂಗಗಳನ್ನು ಹೊರ ತೆಗೆದ ಮಹೇಶ

ಲ್ಯೂಗರ್ ಪಿಸ್ತೂಲು 'ರಾಣಿ' ಬಿಲ್ಟ್ ಇನ್' ಹೋಲ್‌ಸ್ಟರ್‌ನಲ್ಲಿತ್ತು, ಸ್ಕೈಲೆಟ್ ಕಿಲ್ಲರ್ ಚೂರಿ 'ರಾಜ' ಪ್ರಳಯವನ್ನೇ ಸೃಷ್ಟಿಸುವ ಮೆಟಲ್ ಬಾಲ್ಸ್...ಇವು ಅವನ ಕಸುಬಿಗೆ ಪೂರಕ ವಸ್ತುಗಳು ಹಲವಷ್ಟು ಸಲ ಅವನ

ಪ್ರಾಣ ಉಳಿಸಿರುವ ಅಸ್ತ್ರಗಳಿಯರು !

"ಕಮಾನ್ ಸಿಂಗರ್....ಲೆಟಸ್ ಮೂವ್ !" ಆಯುಧಗಳನ್ನು ಅವುಗಳ ಮೂಲಮೂಲೆ ಜಾಗಗಳಲ್ಲಿಳಿಸಿಕೊಂಡು ಹೊರಕ್ಕೆ ನಡೆದ ಮುಕೇಶ.

ಬಾಗಿಲು ಪೂರ್ತಿ ತೆರೆಯದೆ ತುಸುವಷ್ಟೇ ತೆರೆದು ದೂರದಲ್ಲಿ ತಮಗೆ ಅಪೋಸಿಟ್ಟಾಗಿದ್ದ ಸಾವರ್ಕರ್ ಅಪಾರ್ಟ್‌ಮೆಂಟ್ ಮುಂದಿದ್ದ ಗಾರ್ಡ್‌ಗಳು ಇತ್ತ ನೋಡುತ್ತಿಲ್ಲವೆಂದು ನಿರ್ಧರಿಸಿಕೊಂಡು ಒಂದೇ ಜಿಗ್ಗಯಲ್ಲಿ ಡಾಟ್ಸನ್ ಹಿಂಬದಿಯ ಸೀಟಿಗೆ ಸೇರಿ ತಲೆ ತಗ್ಗಿಸಿಕೊಂಡು ಕುಳಿತ. ಇಲ್ಲವಿದ್ದರೆ ಹೋದ ಸಿಖ್, ಬಂದ ಅಮೇರಿಕನ್ ಎಂಬವರಿಗೆ ಸಂಶಯ ಬರುವುದಿಲ್ಲವೇ ?

ನಿಧಾನವಾಗಿ ಹೊರ ಬಂದ ಸಿಂಗರ್ ಅಪಾರ್ಟ್‌ಮೆಂಟ್ ಡೋರ್ ಲಾಕ್ ಮಾಡಿ ಕಾರನ್ನೇರಿ ಅದನ್ನು ರಿವರ್ಸ್ ತೆಗೆದುಕೊಂಡ. ಅದು ಸಾವರ್ಕರ್ ಅಪಾರ್ಟ್‌ಮೆಂಟ್ ದಾಟುವಾಗ ಗಾರ್ಡ್‌ಗಳಿಗೆ ತನ್ನ ಮುಖ ಕಾಣದಂತೆ ನ್ಯೂಸ್ ಪೇಪರ್ ಅಡ್ಡ ಹಿಡಿದುಕೊಂಡ ಮುಕೇಶ.

ಸ್ಟ್ರೀಟ್ ದಾಟಿ ಮೈನ್ ರೋಡ್ ತಲುಪಿದಾಗ ಕೇಳಿದ ಸಿಂಗರ್, "ಈಗ ನಮ್ಮ ಪ್ರಯಾಣ ಎಲ್ಲಿಗೆ ಮುಕೇಶ ?"

ಸಿಗರೇಟ್ ಹತ್ತಿಸಿಕೊಂಡ ಮುಕೇಶ, "ಪಾರ್ಕ್ ಅವೆನ್ಯೂ....ಸಾವರ್ಕರ್ ಪರ್ಸನಲ್ ರಿಸರ್ಚ್ ಲ್ಯಾಬೊರೇಟರಿ" ಗಂಭೀರವಾಗಿ ಹೇಳಿದ.

ಪಾರ್ಕ್ ಅವೆನ್ಯೂ ಕಡೆಗೆ ಸಾಗಿತು ಡಾಟ್ಸನ್.

# 4

"ಸಿಂಗರ್....ನನ್ನನ್ನು ಲ್ಯಾಬ್ ಮುಂದೆ ಸರಿಯಾಗಿ ಇಳಿಸಿ ಮುಂದಕ್ಕೆ ಹೊರಟು ಹೋಗು. ಸ್ಟ್ರೀಟ್ ಕಾರ್ನರ್‌ನಲ್ಲಿ ನನಗಾಗಿ ವೈಟ್ ಮಾಡು...." ಗಾಗಲ್ಸ್ ಹಾಕಿಕೊಳ್ಳುತ್ತಾ ಅವನಿಗೆ ಸೂಚನೆ ಕೊಟ್ಟ ಮಹೇಶ

ತಲೆಯಾಡಿಸಿದ ಸಿಂಗರ್.

ಅರ್ಧ ಗಂಟೆಯಲ್ಲಿ ಪಾರ್ಕ್ ಅವೆನ್ಯೂದಲ್ಲಿನ ವಿಶಾಲವಾದ ಕಟ್ಟಡವೊಂದರ ಮುಂದೆ ಡಾಟ್ಸನ್ ನಿಲ್ಲಿಸಿದ.

ಕಟ್ಟಡದ ಗೋಡೆಗೆ ದೊಡ್ಡದೊಂದು ಬೋರ್ಡ್ ಫಿಕ್ಸ್ ಆಗಿತ್ತು

'ಶಾಮರ್ಸ್ ಪ್ರೈವೇಟ್ ರಿಸರ್ಚ್ ಲ್ಯಾಬೊರೇಟರಿ' ಇಂಗ್ಲೀಷ್ ಅಕ್ಷರಗಳು.

ಅಮೇರಿಕನ್ ಸರ್ಕಾರ ಶಾಮರ್ಸ್ ಪರಿಶೋಧನೆಗೆಂದೇ ವಿಶೇಷವಾಗಿ ನಿರ್ಮಿಸಿ ಟೋಟಲ್ ಆಗಿ ಅವನಿಗೆ ಹ್ಯಾಂಡೋವರ್ ಮಾಡಿದ್ದ ಲ್ಯಾಬ್ ಅದು.

ಡಾಟ್ಸನ್‌ನಿಂದ ಕೆಳಕ್ಕಿಳಿದ ಮಹೇಶ ಅವನು ಇಳಿದೊಡನೆ ಕಾರನ್ನು ಮುಂದಕ್ಕೆ ಮೂವ್ ಮಾಡಿದ ಸಿಂಗರ್.

ಗಾಗಲ್ಸ್ ಸ್ಟೈಲಾಗಿ ಮೇಲೆತ್ತಿ ಗೇಟ್ ಕಡೆಗೆ ನಡೆದ ಮಹೇಶ. ಗೇಟ್ ತೆರೆದುಕೊಂಡು ಬಂಗಲೆಯ ಪೋರ್ಟಿಕೋಗೆ ಬಂದಾಗ ಅಡ್ಡ ಹಾಕಿದ್ದರೂ ಇಬ್ಬರು ಸಿ ಐ ಎ ಗಾರ್ಡ್‌ಗಳು ತನ್ನ ಮೇಕಪ್ ಪರ್ಫೆಕ್ಟಾಗಿರುವುದು, ಅದರಲ್ಲಿ ತನ್ನ ಸೂಟ್‌ಗೆ ಫಿಕ್ಸ್ ಆಗಿರುವ ಸಿ.ಐ.ಎ. ಬ್ಯಾಡ್ಜ್

ಅವರು ಪಿಸ್ತೂಲು ಕೈಗೆತ್ತಿಕೊಳ್ಳದಂತೆ ಮಾಡಿದೆ ಎಂದು ಚೆನ್ನಾಗಿ ಗೊತ್ತು ಮಹೇಶನಿಗೆ.

"ಎಕ್ಸ್‌ಕ್ಯೂಸ್ ಮಿ .. ಐಯಾಮ್ ನೆಲ್ಸನ್....ಸ್ಪೆಷಲ್ ಏಜೆಂಟ್ ಫ್ರಂ ದಿ ಏಜೆನ್ಸಿ !" ಕೈ ಕುಲುಕಲು ಮುಂದೆ ಚಾಚಿ ಗಂಭೀರವಾಗಿ ಕೇಳಿದ ಮಹೇಶ.

ಸಮುದ್ರದ ನೀರಲ್ಲಿ ಚೆನ್ನಾಗಿನೆಂದ ಕಲ್ಲಿನಂತಿದ್ದ ಗಾರ್ಡ್ ಕಣ್ಣುಗಳಲ್ಲಿ ಯಾವುದೇ ಭಾವ ಪ್ರಕಟಗೊಳ್ಳಲಿಲ್ಲ ಆಟೋಮ್ಯಾಟಿಕ್ಕಾಗಿ ಅವನ ಕೈ ಕುಲುಕಿತ್ತು.

"ದಯವಿಟ್ಟು ನಿಮ್ಮ ಐಡೆಂಟಿಟಿ ಕಾರ್ಡ್ ತೋರಿಸುವಿರಾ ಮಿಸ್ಟರ್ ನೆಲ್ಸನ್ !" ಕೇಳಿದ.

"ಅಫ್‌ಕೋರ್ಸ್ !" ಭುಜ ಎಗರಿಸಿ ಕೋಟ್ ಪಾಕೆಟ್‌ನೊಳಗಿಂದ ಪ್ಲಾಸ್ಟಿಕ್ ಐಡಿಕಾರ್ಡ್ ಹೊರತೆಗೆದ ಮಹೇಶ

ಸಿ ಐ ಎ. ಒಂದು ದೊಡ್ಡ ಸಮುದ್ರ. ಅದರಲ್ಲಿ ಎಷ್ಟು ಏಜೆಂಟುದ್ದಾರೆ, ಅವರ್ಯಾರು ಎನ್ನುವುದೇ ದೊಡ್ಡ ಸೀಕ್ರೆಟ್. ಅದ್ದರಿಂದಲೇ ಅಷ್ಟು ಧೈರ್ಯವಾಗಿ ಸಿ.ಐ.ಎ. ಏಜೆಂಟ್ ವೇಷ ಧಾರಿಯಾದದ್ದು ಮಹೇಶ.

ಅವನು ಗಾರ್ಡ್ ಕೈಗೆ ಕೊಟ್ಟ ಐಡಿಕಾರ್ಡ್ ಸೆಲ್‌ನ ಸ್ಪೆಷಲ್ ಎಫೆಕ್ಸ್‌ವಿಂಗ್ ಎಕ್ಸ್‌ಪರ್ಟ್‌ಗಳ ಕೈ ಚಳಕದಿಂದ ತಯಾರಾದದ್ದು. ಅದರ ಮೇಲಿನ ಚಿಹ್ನೆಗಳು, ಸಿ.ಐ ಎ. ಡೈರೆಕ್ಟರ್ ಸೀಲ್ ಮತ್ತು ಸಿಗ್ನೇಚರ್ ಪರ್ಫೆಕ್ಟ್ ಫೋರ್ಜರಿಗಳು, ಇನ್‌ಫ್ಯಾಕ್ಟ್ ಅದು ನಕಲಿ ಎಂದು ಸಿ.ಐ ಎ. ಡೈರೆಕ್ಟರ್‌ಗೂ ಅನುಮಾನ ಬರದು !

ಸುದೀರ್ಘವಾಗಿ ಕಾರ್ಡನ್ನು ಸ್ಟಡಿ ಮಾಡಿದ ಮೇಲೆ ಗಾರ್ಡ್ ಮುಖದಲ್ಲಿ ತುಸು ಸಂತೃಪ್ತಿ ಕಾಣಿಸಿತು. ಆದರೂ ಶಂಕೆ ದೂರಾಗಿರಲಿಲ್ಲ. "ಆಫೀಸರ್ ! ಈ ಲ್ಯಾಬ್ ಅನ್ನು ಲಾಕ್ ಮಾಡಿ ಯಾರನ್ನೂ ಒಳಕ್ಕೆ ಬಿಡದಂತೆ ಡೈರೆಕ್ಟರ್ಸ್ ಆರ್ಡರ್ ! ಹಾಗಿರುವಾಗ ನೀವು...." ಮಿಸುಕಾಡಿದ.

"ದಟೀಸ್ ಕರೆಕ್ಟ್ ! ಆದರೆ ಈ ದಿನದಿಂದ ಸಾವರ್ ಅಸೈನ್‌ಮೆಂಟ್ ನನ್ನ ಹೊಣೆ....ಈ ಅಸೈನ್‌ಮೆಂಟ್‌ಗೆ ಸಂಬಂಧಿಸಿದನ್ನೆಲ್ಲಾ ಚೆಕ್

ಮಾಡಲೆಂದು ಬಂದೆ, ಅಫ್‌ಕೋರ್ಸ್... ನಿಮಗಷ್ಟು ನಂಬಿಕೆಯಿಲ್ಲದಿದ್ದರೆ ಯು ಕೇನ ಫೋನ್ ದ ಡೈರೆಕ್ಟರ್. ಅವರೀಗ ಆಫೀಸಿನಲ್ಲೇ ಇದ್ದಾರೆ...." ಕಾರ್ಡ್ ತೆಗೆದು ಜೇಬಿಗೆ ಸೇರಿಸುತ್ತಾ, ಧ್ವನಿಯಲ್ಲಿ ಕೊಂಚ ಅಸಹನೆ ತುಂಬಿ ನುಡಿದ ಮಹೇಶ.

ಸ್ವಲ್ಪ ಹಿಮ್ಮೆಟ್ಟಿದಂತೆ ಕಂಡ ಗಾರ್ಡ್ ಆಗ, ಬಾಹ್ಯವಾದರೂ ಆತಂಕ ಪ್ರದರ್ಶಿಸದೆ ನಿಂತಿರುವ ಮಹೇಶ ಸಿ ಐ ಎ. ಏಜೆಂಟ್ ಅಲ್ಲ ಎನ್ನಲು ಯಾವುದೇ ಆಧಾರಗಳಿಲ್ಲ ಅವನಿಗೆ. ಅವರೂ ಡೈರೆಕ್ಟರ್‌ಗೆ ಕಾಲ್ ಮಾಡುವಷ್ಟು ಧೈರ್ಯವಿಲ್ಲ. ಸಿ ಐ ಎ ಏಜೆಂಟ್ಸ್ ತಮಗಿಂತಾ ಹೈ ರ್‍ಯಾಂಕ್ ಆಫೀಸರ್ಸ್.... ಐಡಿ ನೋಡಿದ ಮೇಲೂ ಇವನು ತನ್ನ ನಂಬಲಿಲ್ಲ ಎಂದು ಕೋಪಗೊಂಡರೆ ತಾನು ಸಿ ಐ ಎ.ಗೆ ವಿದಾಯ ಹೇಳಿದಂತೆಯೇ ! ಇನ್ನೂ ಡೈಲಮಾದಲ್ಲೇ ಇದ್ದ ಗಾರ್ಡ್.

"ಕಮಾನ್ ಮಿಸ್ಟರ್....ನೀನು ಅನವಶ್ಯಕವಾಗಿ ನನ್ನ ಕಾಲಹರಣ ಮಾಡುತ್ತಿರುವೆ....ಲೆಟಸ್ ಕಾಲ್‌ದ ಡೈರೆಕ್ಟರ್ !" ಮೊಳಗಿತು ಮಹೇಶನ ಧ್ವನಿ.

ಒಂದು ನಿರ್ಧಾರಕ್ಕೆ ಬಂದು ಬಿಟ್ಟ ಗಾರ್ಡ್ ಆಗ "ನಾಟ್ ನೆಸೆಸರಿ ಸಾರ್....ಯು ಕೆನ್ ಗೋ ಇನ್‌ಸೈಡ್!" ಅಟೆನ್ಷನ್‌ನಲ್ಲಿ ನಿಂತು ಸೆಲ್ಯೂಟ್ ಮಾಡುತ್ತಾ ಹೇಳಿದ.

"ಥ್ಯಾಂಕ್ಯು !" ಮುಂದಕ್ಕೆ ನಡೆದ ಮಹೇಶ

ಎರಡನೇ ಗಾರ್ಡ್ ಮೊದಲ ಗಾರ್ಡ್ ಸನ್ನೆ ಮಾಡಿದೊಡನೆ ಅರ್ಜೆಂಟ್ ಜರ್ಂಟಾಗಿ ಹೋಗಿ ಲ್ಯಾಬ್ ಡೋರ್‌ಗೆ ಹಾಕಿದ್ದ ಲಾಕ್ ಓಪನ್ ಮಾಡಿದ. ಬಾಗಿಲು ತಳ್ಳಿಕೊಂಡು ಒಳಕ್ಕೆ ಹೋದ ಮಹೇಶ, ತನ್ನನ್ನು ಫಾಲೋ ಮಾಡತೊಡಗಿದ ಗಾರ್ಡ್ ಅಲ್ಲೇ ನಿಲ್ಲುವಂತೆ ಸೂಚಿಸಿದ. ಅಲ್ಲೇ ನಿಂತ ಗಾರ್ಡ್ !

ಮುಂದಿನ ಹಾಲನ್ನು ದಾಟಿದ ಮೇಲೆ ಅದು ಎರಡು ಬದಿಗೆ ಕವಲೊಡೆದು ಕಾರಿಡಾರ್‌ಗಳಾಗಿರುವುದನ್ನು ಗಮನಿಸಿದ ಮಹೇಶ.

ಗೋಡೆಯಲ್ಲಿ ಫಿಕ್ಸ್ ಆಗಿದ್ದ ಕಪ್ಪು ಬೋರ್ಡ್ ಮೇಲೆ ಬಿಳಿಯ

ಅಕ್ಷರಗಳು ಒಂದು ದಾರಿ ಲ್ಯಾಬ್‌ನೊಳಕ್ಕೆ ಇನ್ನೊಂದು ಬೆಡ್‌ರೂಂಗೆ ದಾರಿ ಎಂದು ಸೂಚಿಸುತ್ತಿದ್ದವು

ಲ್ಯಾಬೊರೇಟರಿ ಕಡೆಗೆ ನಡೆದ ಮಹೇಶ. ಹಗಲಲ್ಲೂ ಲೈಟ್‌ಗಳು ಉರಿಯುತ್ತಿದ್ದವು. ಕಾರಿಡಾರ್ ದಾಟಿ ಲ್ಯಾಬ್ ಹಾಲ್‌ನೊಳಕ್ಕೆ ಕಾಲಿಟ್ಟೊಡನೆ ಘಾಟಾಗಿ ಕೆಮಿಕಲ್ಸ್ ವಾಸನೆಗಳು ಮೂಗಿಗೆ ಸೋಕಿದವು.

ಮುಖ ಕಿವುಚುತ್ತಾ ಲ್ಯಾಬ್‌ನಲ್ಲಿ ಒಂದು ಬದಿಗೆ ಕುಸಿದು ಬಿದ್ದಂತೆ ಕಾಣಿಸುತ್ತಿದ್ದ ಗೋಡೆಯ ಕಡೆಗೆ ನಡೆದ ಮಹೇಶ. ಆ ಪ್ರದೇಶವೆಲ್ಲಾ ಯಾವುದೋ ಸ್ಫೋಟಕ್ಕೆ ಸಿಕ್ಕಿ ಛಿದ್ರಗೊಂಡಿತ್ತು. ಬೀಕರ್‌ಗಳು, ಕೆಮಿಕಲ್ಸ್ ಇದ್ದ ಬಾಟಲ್ಸ್ ಒಡೆದು ಗಾಜಿನ ಚೂರುಗಳು ಚೆಲ್ಲಾಪಿಲ್ಲಿಯಾಗಿ ಬಿದ್ದಿದ್ದವು ನೆಲದ ಮೇಲಿನ ಒಸರುವ ಕೆಮಿಕಲ್ಸ್‌ಗಳ ಘಾಟು ವಾಸನೆ ತಡೆಯಲಸಾಧ್ಯ !

ನಾರ್ಮರ್ ಹೆಸರಿಗೆ ಬಂದ ಲೆಟರ್ ಬಾಂಬ್ ಆಗನ ಅಸಿಸ್ಟೆಂಟ್ ಥಾಮಸ್ ಕೈನಲ್ಲಿ ಸ್ಫೋಟಿಸಿದ ಸ್ಪಾಟ್ ಅದು ಎಂದು ಅರ್ಥ ಮಾಡಿಕೊಂಡ ಮಹೇಶ. ಲ್ಯಾಬ್‌ನಲ್ಲಿನ ಯಾವುದೇ ವಸ್ತುವನ್ನೂ ಸಿ.ಐ.ಎ, ಸ್ಪೆಷಲಿಸ್ಟ್ ಕದಲಿಸಿಲ್ಲ.

ಲ್ಯಾಬ್ ಅನ್ನು ಏಕಾಗ್ರತೆಯೊಡನೆ ಸರ್ಚ್ ಮಾಡಲು ಶುರು ಮಾಡಿದ ಮಹೇಶ.

ಎಲ್ಲಾದರೊಂದು ಸಣ್ಣ ಕ್ಲೂ....ನಾರ್ಮರ್ ರಿಸರ್ಚ್ ಯಾವುದರ ಬಗ್ಗೆ ಎಂದು ತಿಳಿಸುವ ಕ್ಲೂ....ಸಿಗುವುದೇನೋ ಎಂಬ ಆಸೆಯೊಡನೆ ಸರ್ಚ್ ಮಾಡುತ್ತಿದ್ದ ಅವನಿಗೆ ಸಂಪೂರ್ಣ ನಿರಾಸೆಯೇ ಕಾದಿತ್ತು. ಪೊರಕೆ ತೆಗೆದು ಗುಡಿಸಿದಂತೆ ಇಡೀ ಜಾಗವನ್ನೆಲ್ಲಾ ತಡಕಿ ನೋಡಿದರೂ ರಿಸರ್ಚ್‌ನ ಇಂಟೆನ್ಷನ್ ಏನೆಂದು ಅರ್ಥವಾಗಲಿಲ್ಲ.

ಹಣೆಯಿಂದ ಜಿನುಗುತ್ತಿದ್ದ ಬೆವರನ್ನು ಒರೆಸಿಕೊಳ್ಳುತ್ತಿರುವಾಗ ಸಣ್ಣ ಶಬ್ದ !

ಇದ್ದಂತೆಯೇ ಫ್ರೀಜಾದ ಮಹೇಶ ತನ್ನನ್ನು ಸಂಪೂರ್ಣವಾಗಿ ನಂಬದ ಸಿ ಐ ಎ ಗಾರ್ಡ್ ತನ್ನ ಹುಡುಕುತ್ತಾ ಬಂದನೇನೋ ಎಂದು

ಛಾಪಿಸಿ ಕೋಟಿನ ಪೋಲಿನ ಬಟನ್ ಹಿಚ್ಚಿದ ಮಹೇಶ...ಸಲೀಸಾಗಿ 'ರಾಣಿ'ಯು ಕೈ ಚಾಚಲು !

ಲ್ಯಾಬೊರೇಟರಿ ಬಾಗಿಲು ತೆರೆದುಕೊಂಡಿತು. ಒಳಕ್ಕೆ ಬಂದ ವ್ಯಕ್ತಿಯನ್ನು ನೋಡಿ ದಿಗ್ಭ್ರಾಂತನಾದ ಮಹೇಶ.

• • • •

ಮಹೇಶನನ್ನು ಲ್ಯಾಬೊರೇಟರಿಯ ಮುಂದಿಳಿಸಿ ಕಾರ್ ಅಗಿ ಮುಂದಕ್ಕೆ ಹೋದ ಸಿಂಗರ್ ಸ್ಟ್ರೀಟ್ ಎಂಡ್‌ನ ಕಾರ್ನರ್‌ನಲ್ಲಿ ತುಸು ಓರೆಯಾಗಿ ಡಾಟ್ಸನ್ ನಿಲ್ಲಿಸಿ ಸಿಗರೇಟ್ ಹಚ್ಚಿಕೊಂಡ. ಅಲ್ಲಿಂದ ಅಸ್ಪಷ್ಟವಾಗಿ ಲ್ಯಾಬ್ ಕಾಣುತ್ತಿತ್ತು, ಕಾರ್ನರ್‌ನಲ್ಲಿರುವ ಕಾರಣ ತನ್ನ ಕಾರು ಅವರ ಕಣ್ಣಿಗೆ ಬೀಳದು !

ಸಿಂಗರ್‌ಗೆ ಹೆಂಡತಿ ಜೇನಿ ನೆನಪಾದಳು. ಮಹೇಶನನ್ನು ತಪ್ಪದೆ ಕ್ಯಾಲಿಫೋರ್ನಿಯಾ ಕರೆತರಬೇಕೆಂದು ಒತ್ತಾಯಿಸಿ ಕಳಿಸಿದ್ದಳು ಅವಳು.

ಅವಳಿಗೆ ತಂದೆ ತಾಯಿ ಬಂಧು ಬಳಗ ಇಲ್ಲವೇ ಇಲ್ಲ ಅನ್ನಬೇಕು. ಸಣ್ಣ ವಯಸ್ಸಿನಲ್ಲೇ ಆಕ್ಸಿಡೆಂಟ್‌ನಲ್ಲಿ ಅವರನ್ನು ಕಳೆದುಕೊಂಡ ನತದೃಷ್ಟ. ಅಣ್ಣ ತಂಗಿಯರೂ ಇಲ್ಲ. ತನಗವಳು ಅವಳಿಗೆ ತಾನಷ್ಟೇ ಈ ಪ್ರಪಂಚದಲ್ಲಿ !

ಅದ್ದರಿಂದಲೇ ಮಹೇಶನೆಂದರೆ ಅಪರಿಮಿತ ಅಭಿಮಾನ ಅವಳಿಗೆ. ಅವನು ತನ್ನ ಸಹೋದರನೇ ಎಂದವಳ ಭಾವನೆ. ಆದರೆ... ಮಹೇಶ ಅಮೇರಿಕಾಗೆ ಸೈಟ್ ಸೀಯಿಂಗ್‌ಗೆಂದು ಬಂದವನಲ್ಲ ! ಅವನಿಗೆ ಕ್ಯಾಲಿಫೋರ್ನಿಯಾಗೆ ಬಾ ಎಂದು ಈ ಪರಿಸ್ಥಿತಿಯಲ್ಲಿ ಹೇಗೆ ಒತ್ತಾಯ ಮಾಡುವುದು ?

ಸಿಂಗರ್ ಮನಸ್ಸಿನಲ್ಲಿ ತಿರುಗುತ್ತಿದ್ದುದು ಇದೇ ಯೋಚನೆ !

ಸಿಗರೇಟ್ ಸಂಪೂರ್ಣ ಉರಿದು ಅದನ್ನು ಡ್ಯಾಷ್ ಬೋರ್ಡ್ ಪಕ್ಕದ ಆಷ್‌ಟ್ರೇಯಲ್ಲಿ ಹೊಸಕುತ್ತಾ ಯಥಾಲಾಪವಾಗಿ ಲ್ಯಾಬೊರೇಟರಿಯ ಕಡೆಗೆ

ನೋಡಿದ ಸಿಂಗರ್ ಮೈ ಮೇಲೆ ಕಂಬಳಿಹುಳ ಓಡಾಡಿದಂತೆ ಫೀಲಾದ !

ಸರಿಯಾಗಿ ಲ್ಯಾಬ್ ಗೇಟ್ ಮುಂದೆ ಆಗ ತಾನೇ ನಿಂತ ಬ್ಲಾಕ್ ಜ್ಯಾಕ್ ಕಾರಿನಿಂದ ಕೆಳಕ್ಕಿಳಿದರು ಇಬ್ಬರು ವ್ಯಕ್ತಿಗಳು, ತಾನು ಗೋಲ್ಡನ್ ಗ್ಯಾಂಗ್‌ನಲ್ಲಿರುವಾಗ ಆ ಇಬ್ಬರಿಗೆ ಸಾಕಷ್ಟು ನೀರು ಕುಡಿಸಿದ್ದ ಸಿಂಗರ್.... ಆದ್ದರಿಂದಲೇ ಅವರ ನೆನಪು ಸದಾ ಹಸಿರು ಅವನ ಮನಸದಲ್ಲಿ. ಸಿ.ಐ.ಎ. ಫೀಲ್ಡ್ ಏಜೆಂಟ್ಸ್ !

ಮುಕೇಶ ಲ್ಯಾಬ್‌ನೊಳಕ್ಕೆ ಹೇಗೆ ಹೋಗುತ್ತಾನೆಂದು ಊಹಿಸಬಲ್ಲ ಸಿಂಗರ್. ತಾನೂ ಒಬ್ಬ ಸಿ.ಐ.ಎ. ಏಜೆಂಟ್‌ನಂತೆ ಗಾರ್ಡ್‌ಗಳಿಗೆ ಏಮಾರಿಸಿ ಪ್ರವೇಶ ಪಡೆದಿರುವ ಮುಕೇಶನ ಬಗ್ಗೆ ಆ ಇಬ್ಬರೂ ಫೀಲ್ಡ್ ಏಜೆಂಟರು ಅನುಮಾನಗೊಳ್ಳುವುದು ಗ್ಯಾರಂಟಿ !

ಗಾರ್ಡ್‌ಗಳ ಕಡೆಗೆ ಠೀವಿಯೊಡನೆ ನಡೆದ ಆ ಏಜೆಂಟರನ್ನು ನೋಡಿ ಗಾರ್ಡ್ಸ್ ಸೆಲ್ಯೂಟ್ ಮಾಡಿದ್ದೂ....ಅವರು ಆ ಏಜೆಂಟರಿಗೆ ಏನೋ ಹೇಳಿದ್ದು...ಅವರು ಕೆನ್ನೆಗಳನ್ನುಜ್ಜುತ್ತಾ ಗಾರ್ಡ್‌ಗೆ ಪ್ರಶ್ನಾವಳಿಸುರಿಸಿದ್ದು ಎಲ್ಲವನ್ನೂ ನೋಡಿದೊಡನೆ ತೀವ್ರಾಲೋಚನೆಯಲ್ಲಿ ಬಿದ್ದ ಸಿಂಗರ್.

ಲ್ಯಾಬ್‌ನಲ್ಲಿರುವ ಮುಕೇಶನಿಗೆ ಸಹಾಯ ಮಾಡುವುದು ಹೇಗೆ.... ಈ ಅನುಭವಸ್ಥ ಏಜೆಂಟರಿಗೆ ಮತ್ತು ಗಾರ್ಡ್‌ಗಳಿಗೆ ಟೋಕ್ರಾ ಕೊಟ್ಟಂತೆ ಕೊಟ್ಟು ತಪ್ಪಿಸಿಕೊಂಡು ಬರಲು ಸಾಧ್ಯವೇ ಮುಕೇಶನಿಗೆ ?

ಅನುಮಾನಗಳನ್ನು ಬಲವಂತವಾಗಿ ಅಡಗಿಸಿಕೊಳ್ಳುತ್ತಾ ಕಾರ್ ಸ್ಟಾರ್ಟ್ ಮಾಡಿ ಪಕ್ಕದ ರೋಡ್‌ಗೆ ತಿರುಗಿಸಿದ ಸಿಂಗರ್. ಅವನಿಗೆ ಚೆನ್ನಾಗಿ ನೆನಪು....ಲ್ಯಾಬ್ ಬ್ಯಾಕ್‌ಸೈಡ್‌ನಿಂದ ಸಣ್ಣ ಸಂದಿಯೊಂದು ಈ ರೋಡ್‌ಗೆ ಕನೆಕ್ಟ್ ಆಗಿರುವ ಸಂಗತಿ

ಅತ್ತ ಕಡೆಗೀಗ ಕಾರು ನಡೆಸಿದ ಸಿಂಗರ್.

* * * *

"ಹೂ ಆರ್ ಯು ಮ್ಯಾನ್ ?"

ಐವತ್ತು ವರ್ಷಗಳನ್ನು ಮೀರಿದ್ದ ಆ ವ್ಯಕ್ತಿಯನ್ನು ಗತ್ತಿನೊಡನೆ ಪ್ರಶ್ನಿಸಿದ ಮಹೇಶ.

"ಸರ್—ನಾನೀ ಲ್ಯಾಬ್‌ನಲ್ಲಿ ಸರ್ವೆಂಟ್ ! ಎರಡು ದಿನಗಳಿಂದ ನಾನು ಈ ಲ್ಯಾಬ್ ಬಿಟ್ಟು ಹೋಗುವಂತಿಲ್ಲವೆಂದು ತಡೆದು ಬಿಟ್ಟಿದ್ದಾರೆ....ನಿಮ್ಮಂತಹ ಆಫೀಸರ್‌ಗಳು ಈಗಾಗಲೇ ಎಷ್ಟೋ ಜನ ಬಂದು ಹೋಗಿದ್ದಾರೆ ಅವರ ಬಳಿ ಗೋಗರೆದರೂ ಹೊರಗೆ ಹೋಗುವ ಅನುಮತಿ ಮಾತ್ರ ಸಿಕ್ಕಲಿಲ್ಲ.... ನನ್ನ ಹೆಂಡತಿಯ ಆರೋಗ್ಯ ಸರಿ ಇಲ್ಲ ಸಾರ್....ನೀವಾದರೂ ನನಗೆ ಪರ್ಮಿಷನ್ ಕೊಡಿಸಿದರೆ...." ಕೈಗಳನ್ನು ಹೊಸೆಯುತ್ತಾ ವಿನಯವಾಗಿ ಹೇಳಿದ ಲ್ಯಾಬ್ ಸರ್ವೆಂಟ್.

ವಿಷಯ ಅರ್ಥವಾಯಿತು ಮಹೇಶನಿಗೆ. ನಾರ್ಮನ್ ಮಾಯವಾದ್ದರಿಂದ ಆ ಲ್ಯಾಬ್ ಸೀಲ್ ಮಾಡಿದಂತೆ ಒಳಗಿದ್ದ ಸರ್ವೆಂಟ್ ಅನ್ನೂ ಸೀಲ್ ಮಾಡಿದ್ದಾರೆ ಸಿ ಐ ಎ ಯಜಮಾನಪ್ಪರು !

"ವೆಲ್....ಪ್ರೊಫೆಸರ್ ಬಗ್ಗೆ ನಿನಗೆ ತಿಳಿದಿರುವುದನ್ನೆಲ್ಲಾ ಪರ್ಫೆಕ್ಟಾಗಿ ಹೇಳಿದರೆ... ನಿನಗೆ ಹೊರಗೆ ಹೋಗಲು ಪರ್ಮಿಷನ್ ಕೊಡುತ್ತೇನೆ" ಗಂಭೀರ ಧ್ವನಿಯಲ್ಲಿ ಆಶ್ವಾಸನೆಯಿತ್ತ ಮಹೇಶ.

ತಲೆ ಕೆರೆದುಕೊಂಡ ಲ್ಯಾಬ್‌ನ ಸರ್ವೆಂಟ್. "ಎಲ್ಲಾ ವಿಷಯಗಳನ್ನು ಈಗಾಗಲೇ ಹೇಳಿದ್ದೇನೆ ಸರ್....ಹೊಸದಾಗಿ ಹೇಳುವುದೇನೂ ಇಲ್ಲ" ಅಂದ.

"ಆಫ್ ಕೋರ್ಸ್....ಹೇಳಿದ್ದನ್ನೇ ಮತ್ತೆ ರಿಪೀಟ್ ಮಾಡು !" ಅಂದ ಮಹೇಶ

ನಸು ಕೆಮ್ಮಿದ ಸರ್ವೆಂಟ್. "ಮಿಸ್ಟರ್ ನಾರ್ಮನ್ ವಾಸ್ ಎ ವೆರಿ ನೈಸ್ ಪರ್ಸನ್ ಸರ್....ಅವರ್ಯಾವಾಗಲೂ ಲ್ಯಾಬ್ ಕೆಲಸದ ವಿನಹ ಬೇರೆಯದರತ್ತ ಗಮನವೇ ಕೊಡುವವರಲ್ಲ....ಥಾಮಸ್ ಇಲ್ಲಿಗೆ ಬರುವವರೆಗೆ ಅವರೇ ಇಲ್ಲಿ ಎಲ್ಲಾ ಕೆಲಸಗಳನ್ನು ಮಾಡಿಕೊಳ್ಳುತ್ತಿದ್ದರು ಥಾಮಸ್ ಬಂದ ಮೇಲೆ ಅವನಿಗೆ ಏನೂ ಮಾಡಬೇಕೆಂದೂ ತಿಳಿಸಿ ರೆಸ್ಟ್ ತೆಗೆದು

ಕೊಳ್ಳುತ್ತಿದ್ದರು. ಆಗಲೂ ಏನೋ ಆಲೋಚನೆ ! ಯಾವಾಗಾದರೂ ನನಗೆ ಬ್ಲಾಕ್ ಕಾಫ್ ಕೇಳುತ್ತಿದ್ದರು. ಡಬ್ಬಾಲ್ !" ಉತ್ಸಾಹದಿಂದ ನಂತೆ ಹೇಳಿ ಮುಗಿಸಿದ ಸರ್ವೆಂಟ್.

"ಥಾಮಸ್....ಹೇಗೆ ? ಒಳ್ಳೆಯವನೇ ?" ಕೇರ್‌ಫುಲ್ ಆಗಿ ಅವನ ಮುಖವನ್ನೇ ನೋಡುತ್ತಾ ಕೇಳಿದ ಮಹೇಶ.

ಸಂದೇಹದೊಡನೆ ನಿಂತ ಸರ್ವೆಂಟ್.

"ಡೋಂಟ್ ವರ್ರಿ....ಆನ್ಸರ್ ಮಿ !"

"ಒಳ್ಳೆಯವನೆಂತೇನೋ ಕಾಣಿಸಿದ ಸರ್....ಆದರೆ ಸಾಮ್ಸನ್‌ರವರು ಇಲ್ಲದಿದ್ದಾಗ ಯಾರ್ಯಾರಿಗೋ ಫೋನ್ ಮಾಡಿ ರಹಸ್ಯ ಮಾತಾಡುತ್ತಿರುವಂತೆ ಸಣ್ಣ ದನಿಯಲ್ಲಿ ಮಾತಾಡುತ್ತಿದ್ದ........ಆಗ ನಾನೇನಾದರೂ ಕಾಣಿಸಿದರೆನೋ ಜನ್ಮ ಜಾಲಾಡಿ ಬಿಡುತ್ತಿದ್ದ...." ಅಂದ ಸರ್ವೆಂಟ್.

"ಐಸೀ ! ಅವನ ಭೇಟಿಗಾಗಲು........ಸಾಮ್ಸನ್ ಇಲ್ಲದಿದ್ದಾಗ... ಎಂದಾದರೂ, ಯಾರಾದರೂ ಬಂದಿದ್ದರೇ ?"

ಯೋಚಿಸಿ ನಂತರ ಹೇಳಿದ ಸರ್ವೆಂಟ್. "ಯಾರೋ ಇಪ್ಪತ್ತು ವರ್ಷದ ಯುವತಿಯೊಬ್ಬಳು ಬರುತ್ತಿದ್ದಳು ಸಾರ್.......ಇಬ್ಬರು ಲ್ಯಾಟ್ ನೊಳಗೆ ಸೇರಿ ಬಾಗಿಲು ಹಾಕಿಕೊಳ್ಳುತ್ತಿದ್ದರು...."

"ಹೇಗಿದ್ದಳವಳು ?"

ತನಗೆ ತಿಳಿದಷ್ಟು ವರ್ಣಿಸಿದ ಸರ್ವೆಂಟ್.

"ಥಾಮಸ್ ಸತ್ತ ಮೇಲೆ ಆ ಯುವತಿ ಇಲ್ಲಿಗೆ ಬರಲಿಲ್ಲವೇ ?"

"ಇಲ್ಲ....ಬರಲಿಲ್ಲ...."

ಆಲೋಚನೆಗೆ ಬಿದ್ದ ಮಹೇಶ.

"ಸಾರ್... ....ನಾನು ಹೊರಗೆ ಹೋಗಬಹುದೇ ?" ಆಸೆಯೊಡನೆ ಕೇಳಿದ ಸರ್ವೆಂಟ್.

ಸಾಲೋಚನೆಯೊಡನೆ ಅವನನ್ನು ನೋಡಿದ ಮಹೇಶ.

"ಪ್ಚ್......ನಿನ್ನ ಹೇಳಿಕೆ ನಾರ್ಮನ್‌ನನ್ನು ಅಪಹರಿಸಿದವರ್‍ಯಾರು, ಅವರಿಂದ ಪಾರು ಮಾಡುವುದು ಹೇಗೆ ಎಂಬುದರ ಬಗ್ಗೆ ತುಸುವಾದರೂ ಸಹಾಯ ಮಾಡುವುದಿಲ್ಲ. ಹೇಗೆ ಬಿಡುವುದು ನಿನ್ನ ?" ಕೇಳಿದ.

ನಿರಾಶೆ ದಟ್ಟವಾಗಿ ಮುಖದ ಮೇಲೆ ಕವಿಯುತ್ತಿದ್ದಂತೆ ನಿಟ್ಟುಸಿರು ಗರೆದ ಸರ್ವೆಂಟ್. ಅಷ್ಟರಲ್ಲೇ ಏನೋ ನೆನಪಾದಂತೆ ಕಣ್ಣುಗಳು ಮಿನುಗಿದವು.

"ಸಾರ್.. ಮರೆತು ಬಿಟ್ಟಿದ್ದೆ... ಬಹಳ ಮುಖ್ಯ ಕಾಗದವೊಂದು ನನಗೆ ಸಿಕ್ಕಿದೆ. ಅದೃಶ್ಯರಾಗುವ ಮೊದಲು ಮಿಸ್ಟರ್ ನಾರ್ಮನ್ ರಾತ್ರಿಯಲ್ಲಿ ಆತುರಾತುರವಾಗಿ ಬಂದು ಯಾವುದೋ ಸಣ್ಣ ಬಾಕ್ಸ್ ತೆಗೆದುಕೊಂಡು ಹೋದರು. ಆಗ ನಾನೊಬ್ಬನೇ ಇದ್ದೆ ಅಲ್ಲಿ. ಬೆವರೊರೆಸಿಕೊಳ್ಳಲು ಅವರು ಕರ್ಚೀಫ್ ತೆಗೆದಾಗ ಜೇಬಿನಿಂದ ಜಾರಿತ್ತೊಂದು ಕಾಗದ. ಅವರು ಹೋದ ಮೇಲೆಯೇ ಅದು ತನ್ನ ಕಣ್ಣಿಗೆ ಬಿದ್ದದ್ದು...." ಅಂದ.

"ಎಲ್ಲಿ....ಎಲ್ಲಿ....ಆ ಕಾಗದ ?" ಉದ್ರೇಕ ತಡೆದುಕೊಳ್ಳುತ್ತ ಕೇಳಿದ ಮಹೇಶ.

"ಒನ್ ಮಿನಿಟ್ ಸಾರ್...." ಲ್ಯಾಬ್‌ನೊಂದು ಮೂಲೆಯಲ್ಲಿದ್ದ ಕಬ್ಬೋರ್ಡರ್ ಬಳಿಗೆ ನಡೆದು ಬಾಗಿಲು ತೆರೆದು ಒಳಗಿನ ಕಂಪಾರ್ಟ್‌ಮೆಂಟ್ ನೊಳಗಿನ ಬಾಕ್ಸ್ ತೆರೆದು ಹುಡುಕಿ ಮುದುರಿ ಹೋಗಿರುವ ಕಾಗದದೊಡನೆ ಹಿಂತಿರುಗಿದ ಸರ್ವೆಂಟ್. "ಮೊನ್ನೆ ನನಗೆ ಈ ವಿಷಯ ನೆನಪಿಗೆ ಬರದೆ ಹೇಳಲಿಲ್ಲ ಸಾರ್....!" ಅಪಾಲಜಿಟಿಕ್ ಆಗಿ ಹೇಳಿ ಮಹೇಶನಿಗೆ ಕೊಟ್ಟ.

ಮಡಚಿದ್ದ ಕಾಗದ ಬಿಚ್ಚಿದ ಮಹೇಶ.

"ನಾರ್ಮನ್,

ನಿನ್ನ ರಿಸರ್ಚ್ ಬಗ್ಗೆ ನೀನು ಬರೆದ ವಿಷಯಗಳು ನನಗೆ ಬಹಳ ಆಶ್ಚರ್ಯವನ್ನೇ ತಂದಿದೆ. ನಿನ್ನ ಮೇಲೆ ಗೋಲ್ಡ್ ಗ್ಯಾಂಗ್ ಕಣ್ಣು ಹಾಕಿದೆಯೆಂದು ಭೀತಿ ಪ್ರಕಟಿಸಿರುವೆ. ಅದ

ಕ್ಕಾಗಿ ನಿನ್ನ ರಿಸರ್ಚ್ ರಿಸಲ್ಟ್‌ನೊಂದಿಗೆ ನನ್ನ ಬಳಿಗೆ ಬಂದು ಬಿಡು. ನಾನು ನಿನಗೆ ರಕ್ಷಣೆ ನೀಡುತ್ತೇನೆ.

—ಕ್ಲಿಪ್"

ಮಹೇಶನ ತಲೆ ಕೆಣಕಿದ ಜೇನಿನ ಗೂಡಿನಂತಾಯಿತು ಒಂದು ನಿಮಿಷ! ತನ್ನೆಲ್ಲಾ ಯೋಚನೆಗಳನ್ನು ಚೆಲ್ಲಾಪಿಲ್ಲಿಯಾಗಿ ಬಿಟ್ಟಿತು ಈ ಲೆಟರ್. ಗೋಲ್ಡ್ ಗ್ಯಾಂಗ್ ನಾರ್ಮನ್‌ನನ್ನು ಕಿಡ್ನಾಪ್ ಮಾಡಿಲ್ಲ! ನಾರ್ಮನ್ ತಾನೇ ಗ್ಯಾಂಗ್ ಕೈನಿಂದ ಪಾರಾಗಲು ಈ ಕ್ಲಿಪ್ ಎನ್ನುವ ವ್ಯಕ್ತಿಯ ಸಹಾಯ ಯಾಚಿಸಿ ಅವನ ಬಳಿಗೆ ಹೋಗಿದ್ದಾನೆ.

ಸೋ.... ಈ ಕ್ಲಿಪ್ ಯಾರೆಂದು ತಿಳಿದುಕೊಂಡರೆ ನಾರ್ಮನ್ ಸುಳಿವು ಸಿಕ್ಕಿದಂತೆಯೇ!

"ಥ್ಯಾಂಕ್ಯೂ ಓಲ್ಡ್ ಮ್ಯಾನ್!" ಇನ್ನೂ ಏನೋ ಹೇಳುವುದರಲ್ಲಿದ್ದ ಮಹೇಶ.

ಆಗಲೇ ಕೇಳಿಸಿದ್ದವು ಬೂಟುಗಾಲುಗಳ ಶಬ್ದಗಳು. ನಾಲ್ವರು ಕಂಗಾಲಾಗಿ ನಡೆದು ಬರುತ್ತಿರುವ ಸೌಂಡ್!

ಸಿಕ್ಸ್ತ್ ಸೆನ್ಸ್ ಡೇಂಜರ್ ಅಲಾರಂ ಮೊಳಗಿಸಿ ಬಿಟ್ಟಿತು ಮರು ಕ್ಷಣ. ಸರ್ರನೆ ಜೇಬಿನಿಂದ ಪರ್ಸ್ ಹೊರ ತೆಗೆದು ಕೈಗೆ ಸಿಕ್ಕಷ್ಟು ಡಾಲರ್ಸ್ ಸರ್ವೆಂಟ್ ಕೈನಲ್ಲಿಟ್ಟು, "ಓಲ್ಡ್ ಮ್ಯಾನ್... ನನಗೆ ಈಗ ಕೊಟ್ಟ ವಿಷಯ ಯಾರ ಬಳಿಯಾದರೂ ಬಾಯಿ ಬಿಟ್ಟೀಯೆ ಜೋಕೆ! ಹೇಳಿದರೆ ಪ್ರಾಣ ಉಳಿಯದು! ಗೆಟ್ ಲಾಸ್ಟ್ ನೌ! ಈ ಲ್ಯಾಬ್‌ನ ಬೇರೊಂದು ಮೂಲೆ ಸೇರಿಕೋ ಅರ್ಜೆಂಟಾಗಿ!" ಅಂದ ಆತುರದೊಡನೆ.

ಅವನ ಮಾತು ಅರ್ಥವಾಗದೆ ವಿಭ್ರಾಂತನಾಗಿ ಕ್ಷಣ ಇದ್ದ ಜಾಗದಲ್ಲೇ ಇದ್ದು ಬಿಟ್ಟ ಸರ್ವೆಂಟ್!

"ಗೆಟ್ ದ ಹೆಲ್ ಔಟಾಫ್ ಹಿಯರ್!" ಅವನನ್ನು ಹಿಂದಿನ ಬಾಗಿಲ ಕಡೆಗೆ ತಳ್ಳಿದ ಮಹೇಶ.

ವಿಷಯವೇನೆಂದು ತಿಳಿಯದಿದ್ದರೂ ಆ ಬಾಗಿಲ ಮೂಲಕ ಅವನು ತಡಬಡಿಸುತ್ತ ಹೊರಕ್ಕೋಡಿದ ಐದೇ ಕ್ಷಣಗಳ ನಂತರ ಧಡಾರನೆ ತೆರೆದ ಕೊಂಡಿತು ಲ್ಯಾಬ್ ಮುಂದಿನ ಬಾಗಿಲು.

ಇಬ್ಬರು ಸಿಐಎ ಏಜೆಂಟ್ಸ್....ಇನ್ನಿಬ್ಬರು ಗಾರ್ಡ್ಸ್ ಲ್ಯಾಬ್‌ನೊಳಕ್ಕೆ ಕಾಲಿಟ್ಟರು. ಏಜೆಂಟ್ಸ್ ಕೈಗಳಲ್ಲಿನ ಕೋಲ್ಟ್ ಸ್ಪೆಷಲ್‌ಗಳು ಮಹೇಶನೆದೆಯಲ್ಲೇ ಆಸಕ್ತಿಯೊಡನೆ ನೋಡುತ್ತಿದ್ದವು.

"ಹೂ ಆರ್ ಯು ಮಿಸ್ಟರ್ ?" ಮಹೇಶನನ್ನು ಮೇಲಿಂದ ಕೆಳಗಿನವರೆಗೆ ಪರಾಮರ್ಶಿಸಿ ಕಟುವಾಗಿ ಕೇಳಿದ ಒಬ್ಬ ಏಜೆಂಟ್.

ಯಾವುದೇ ವಾರ್ನಿಂಗ್ ಕೊಡದೆ ಅಸಾಧಾರಣ ವೇಗದೊಡನೆ ಮೂವ್ ಆದ ಮಹೇಶ.

ಫಟ್ ಫಟಾರ್....

ಅವನ ಚಲನೆ ಅನುಮಾನಿಸುವುದರೊಳಗೆ ಯಾರೋ ಕಿತ್ತಿಸೆದಂತೆ ತಮ್ಮ ಕೈಗಳಲ್ಲಿನ ಸ್ಪೆಷಲ್‌ಗಳು ಎಗರಿ ದೂರ ಬಿದ್ದುದನ್ನು ಕಂಡು ದಿಗ್ಭ್ರಾಂತರಾದರು ಏಜೆಂಟ್ಸ್.

ಆ ಕ್ಷಣವನ್ನು ನೀಟಾಗಿ ಉಪಯೋಗಿಸಿಕೊಂಡ ಮಹೇಶ.

ಫಟ್....ಫಟ್....

ಆಂಗ್ಯುಲರ್ ಆಗಿ ಮೇಲೆದ್ದ ಅವನ ಕಾಲು ತನ್ನೆಲ್ಲಾ ಶಕ್ತಿಯೊಡನೆ ಒಬ್ಬ ಏಜೆಂಟ್ ಕುತ್ತಿಗೆಯ ಮೇಲೆ ಸಾಲಿಡ್ ಕಿಕ್ಕೊಂದನ್ನು ಕನೆಕ್ಟ್ ಮಾಡುತ್ತಿದ್ದಂತೆ ಅದೇ ಸ್ಪೀಡ್‌ನಲ್ಲೇ ಬಲ ಮುಷ್ಟಿ ಎರಡನೇ ಏಜೆಂಟ್ ಹಣೆಗೆ ಏಮ್ ಮಾಡಿದ ಮಹೇಶ.

ಚಿಟ್ಟನೆ ಚೀರಿ ಎಗರಿ ಗಾರ್ಡ್‌ಗಳ ಮೇಲೆ ಬಿದ್ದರು ಆ ಏಜೆಂಟರಿಬ್ಬರೂ.

ಗಿರ್ರನೆ ತಿರುಗಿದ ಮಹೇಶ. ಲ್ಯಾಬ್ ಮುಂಬಾಗಿಲಿಗೆ ಸರಿಯಾಗಿ ಅವರಡ್ಡವಿದ್ದ ಕಾರಣ ಆ ಬಾಗಿಲಿಂದ ಪರಾರಿಯಾಗುವುದು ಅಸಾಧ್ಯ. ಆದ್ದರಿಂದಲೇ ಹಿಂದಿನ ದಾರಿಯತ್ತ ಸುಂಟರ ಗಾಳಿಯಂತೆ ನುಗ್ಗಿದ ಮಹೇಶ.

"ಫೂಲ್ಸ್....ಗೊಂಬೆಗಳಂತೆ ನೋಡುತ್ತ ನಿಂತಿರುವಿರಾ ? ಕ್ಯಾಚ್ ಹಿಮ್ !" ಏಟು ತಿಂದೆವೆಂಬ ಯೋಚನೆಗೇ ರೊಚ್ಚಿಗೆದ್ದು ಹುಚ್ಚು ನಾಯಿಗಳಂತೆ ಅರಚಿಕೊಂಡರು ಏಜೆಂಟ್ಸ್.

ಹಿಂದಕ್ಕೆ ವಾಲಿ ಬ್ಯಾಲೆನ್ಸ್ ಕಾಯ್ದುಕೊಂಡ ಗಾರ್ಡ್‌ಗಳಿಗೆ ಆಗ ತಮ್ಮ ಕರ್ತವ್ಯದ ನೆನಪು ಬಂದಂತಿತ್ತು. ಧಡಧಡ ಮಹೇಶ ಓಡಿದ ಕಡೆಗೆ ಓಡಿದರು.

ಲ್ಯಾಬ್ ಹಿಂಬದಿಯ ಬಾಗಿಲು ಮಹೇಶನನ್ನು ಕಿಚನ್ ಕಡೆಗೆ ಕರೆದೊಯ್ದಿತ್ತು. ಕಿಚನ್‌ನಲ್ಲಿದ್ದದ್ದೆ ಒಂದೇ ಒಂದು ದೊಡ್ಡ ಗ್ಲಾಸ್ ವಿಂಡೋ. ಅದರೊಳಗಿಂದ ಗಾರ್ಡನ್, ಬಂಗಲೆಗೆ ಕವರ್ ಮಾಡಿರುವ ಎತ್ತರದ ಕಾಂಪೌಂಡ್ ಕಾಣಿಸುತ್ತಿದ್ದವು.

ಟಕ್ಕನೆ ನಿಂತು ಬಿಟ್ಟ ಮಹೇಶ. ವಿಂಡೋ ಗ್ಲಾಸ್ ಹೊಡೆಯಲು ಪಕ್ಕದಲ್ಯಾವುದೇ ಪರಿಕರ ಕಾಣಿಸಲಿಲ್ಲ !

ಅಷ್ಟೊತ್ತಿಗೆ ಮಹೇಶನನ್ನು ಅಟ್ಟಿಸಿಕೊಂಡು ಬಂದ ಗಾರ್ಡ್‌ಗಳು ಕಿಚನ್‌ನೊಳಕ್ಕೆ ಬಂದರು. ಅವರ ಹೆಜ್ಜೆಯ ಶಬ್ದ ಕೇಳಿದೊಡನೆ ಸರ್ರನೆ ನೆಲದ ಮೇಲೆ ಡಕ್ ಆದ ಮಹೇಶ.

ಧರ್... ಧರ್....

ಅವನ ತಲೆಯ ಮೇಲಿಂದ ಹಾದು ಹೋಗಿ ಮೂಲೆಯಲ್ಲಿದ್ದ ವಾಟರ್ ಫಿಲ್ಟರ್‌ಗೆ ತಾಕಿದವು ಎರಡು ಬುಲೆಟ್ಸ್. ರಂಧ್ರವೇರ್ಪಟ್ಟು ಫೌಂಟೇನಂತೆ ಚಿಮ್ಮಿತು ನೀರು.

ಸ್ಪ್ರಿಂಗ್‌ನಂತೆ ಜಿಗಿದೆದ್ದ ಕಿಚನ್ ಅನ್ನು ಹೊಗುವಾಕೆ ಕಾಂಗ್ರೂ ಷಾಟ್ ಮಾಡಿದ ಮಹೇಶ.

ಎರಡನೇ ರೌಂಡ್‌ಗೆ ರೆಡಿ ಆಗುತ್ತಿದ್ದರು ಗಾರ್ಡ್ಸ್ !

ಸುಂಟರಗಾಳಿಯಂತೆ ಅವರ ಮೇಲೆರಗಿ ಬಿದ್ದ ಮಹೇಶ.

ಪಿಸ್ತೂಲಿಡಿದಿರುವ ತಮ್ಮ ಮೇಲೆ ಹೀಗವನು ಡೈರೆಕ್ಟ್ ಅಟ್ಯಾಕ್ ಮಾಡುವ ಧೈರ್ಯ ಪ್ರದರ್ಶಿಸಿಯಾನೆಂದುಕೊಂಡಿರಲಿಲ್ಲ ಗಾರ್ಡ್ಸ್.

ಫಟ್.... ಫಟ್....

ಕಬ್ಬಿಣದ ತೊಲೆಗಳಿಂದಗಟ್ಟಿಸಿದಂತೆ ಫೂಲಾಗುತ್ತ ನೋವಿಗೆ ಕಿರುಚಿ ಗೋಡೆಗೋಗಿ ಡೀ ಹೊಡೆದರು ಗಾರ್ಡ್ಸ್. ಪಿಸ್ತೂಲುಗಳು ಕೈನಿಂದ ಜಾರಿ ಹೋದವು .

ತಟಕ್ಕನೆ ಮುನ್ನುಗ್ಗಿ ಒಬ್ಬ ಗಾರ್ಡ್ ಷರ್ಟ್ ಕಾಲರ್ ಮತ್ತು ಪ್ಯಾಂಟ್‌ಗೆ ಹಾಕಿರುವ ಬೆಲ್ಟ್ ಎರಡೂ ಕೈಗಳಲ್ಲಿ ಹಿಡಿದು ಉಸಿರು ಬಿಗಿಹಿಡಿದು ಅಲಕ್ಕಾಗಿ ಮೇಲೆತ್ತಿದ ಮಹೇಶ.

ಭೀಕರವಾಗಿ ಕಿರುಚಿದ ಹಠಾತ್ತನೆ ಮೇಲೆದ್ದ ಗಾರ್ಡ್. ಶತ್ರು ತನ್ನನ್ನೇನು ಮಾಡಲಿದ್ದಾನೆ ಎಂಬುದು ಅರ್ಥವಾಗುವುದರೊಳಗೆ ಬಿರುಸಾಗಿ ಗ್ಲಾಸ್ ವಿಂಡೋ ಕಡೆಗೆ ಅವನನ್ನೆಸೆದು ಬಿಟ್ಟ ಮಹೇಶ !

ವಿಕಾರವಾಗಿ ಚೀರುತ್ತ ಪಲ್ಟಿಗಳನ್ನೊಡೆಯುತ್ತ ಹೋಗಿ ಗ್ಲಾಸ್‌ಗೆ ಧಡ್ಡನೆ ಡಿಕ್ಕಿ ಹೊಡೆದ ಗಾರ್ಡ್.

ಛಳ್ಳನೆ ಪೀಸ್ ಪೀಸಾಯಿತು ಗ್ಲಾಸ್. ಅದರೊಡನೆಯೇ ಆರ್ತನಾದ ಬೆರೆಯುತ್ತಿದ್ದಂತೆ ಗಾಜಿನ ಚೂರುಗಳೊಡನೆ ಗಿರ್ಕಿ ಹೊಡೆಯುತ್ತ ಹೋಗಿ ಗಾರ್ಡನ್‌ನ ಹಸಿರು ಹುಲ್ಲಿನ ಮೇಲೆ ಬಿದ್ದ ಗಾರ್ಡ್.

ತನ್ನ ಎಸ್ಕೇಪ್ ರೂಟ್ ಕಡೆಗೆ ಕದಲಿದ ಮಹೇಶ !

"ಸ್ಟಾಪ್....!" ಹುಚ್ಚು ಆವೇಶದೊಡನೆ ಕೂಗುತ್ತ ಹಿಂದೆ ಮುಂದೆ ಯೋಚಿಸದೆ ಮಹೇಶನ ಮೇಲೆ ನೆಗೆದ ಎರಡನೇ ಗಾರ್ಡ್.

ಸರ್ರನೆ ಕದಲಿತ್ತು ಕೈ. ಕಿಚನ್ ಸ್ಟೌವ್ ಪಕ್ಕದಲ್ಲೇ ಇದ್ದ ಗ್ಯಾಸ್ ಸಿಲಿಂಡರ್ ಪೈಪ್ ಎಳೆದು ವಾಲ್ವ್ ಓಪನ್ ಮಾಡಿದ ಕ್ಷಣದಲ್ಲಿ ಮಹೇಶ.

ಬುಸ್ ಎಂಬ ಶಬ್ದದೊಡನೆ ಕುಕಿಂಗ್ ಗ್ಯಾಸ್ ಗಾರ್ಡ್ ಮುಖವನ್ನೇ ಸ್ಪರ್ಶಿಸಿತು ! ಘಾಟಾದ ಅದರ ವಾಸನೆಗೆ ಕಕ್ಕಾಬಿಕ್ಕಿಯಾಗಿ ಹಿಂದಕ್ಕೆ ತೆಗೆದ ಆ ಗಾರ್ಡ್.

ವಿಂಡೋ ಸಮೀಪಿಸಿದ ಮಹೇಶ ಹೊರಕ್ಕೆ ಡೈವ್ ಮಾಡಿ ಹಸಿರು ಹುಲ್ಲಿನ ಮೇಲೆ ಬಿದ್ದ.

ಆಗಲೇ ಕಿಚನ್ನೊಳಕ್ಕೆ ಪ್ರವೇಶಿಸಿದ್ದ ಸಿಐಎ ಏಜೆಂಟರು ಒಟ್ಟಿಗೆ ಪಿಸ್ತೂಲುಗಳನ್ನು ಏಮ್ ಮಾಡಿ ಫೈರ್ ಮಾಡಿದರು.

ಬುಲೆಟ್ಸ್ ಹೊರಹೊಮ್ಮಿದೊಡನೆ ಕಿಚನ್ನಲ್ಲಿ ಓತಪ್ರೋತವಾಗಿ ಚಿಮ್ಮುತ್ತಿದ್ದ ಗ್ಯಾಸ್ ಧಗ್ಗನೆ ಹತ್ತಿಕೊಂಡಿತು !

ಮಹೇಶನ ಪಕ್ಕದಿಂದ ಹಾದು ಹೋಗಿ ಗಿಡಗಳ ನಡುವೆ ನುಗ್ಗಿದವು ಬುಲೆಟ್ಸ್.

ಆದರೆ ಅವನನ್ನು ಫೈರ್ ಮಾಡಿದ ಕಾರಣ ಹತ್ತಿಕೊಂಡಿದ್ದ ಗ್ಯಾಸ್ ಘಂಸ್ಸನೆ ಸಿಲಿಂಡರ್ ಅನ್ನು ತಲುಪಿದೊಡನೆ ವಿಕೃತ ಶಬ್ದದೊಡನೆ ಸ್ಫೋಟಿಸಿತು.

ಸಾವಿನಾಕ್ರಂದನಗಳು ಕಾಂಪೌಂಡ್ ಕಡೆಗೆ ಓಡುತ್ತಿದ್ದ ಮಹೇಶನ ಕಿವಿಗೆ ತಲುಪಿದವು. ಸಂಪೂರ್ಣ ಕಿರ್ಚ ಬೆಂಕಿಯಾವರಿಸಿ ಕಿಟಕಿಯಿಂದ ಹೊರಕ್ಕೆ ತನ್ನ ಕೆನ್ನಾಲಿಗೆ ಚಾಚಿದ ಅಗ್ನಿದೇವ.

ಮಹೇಶ ಕಾಂಪೌಂಡನ್ನು ಪ್ರವೇಶಿಸುತ್ತಿರುವಂತೆಯೇ ಪ್ರತ್ಯಕ್ಷನಾದ ಸಿಂಗರ್,

"ಮಹೇಶ್....ಕಮ್ ದಿಸ್ ಸೈಡ್ !" ಕಂಗಾಲಿನೊಡನೆ ಕರೆದ.

ಸಿಂಗರ್‌ನ ದರ್ಶನ ಮಾತ್ರದಿಂದಲೇ ಉತ್ಸಾಹ ಉಕ್ಕಿತು ಮಹೇಶನಲ್ಲಿ. ಛಂಗನೆ ಎಗರಿ ಕಾಂಪೌಂಡ್ ಅಂಚನ್ನಿಡಿದು ಅತ್ತ ಕಡೆಗೆ ಜಂಪ್ ಮಾಡಿದ. ಅದಿಯಲ್ಲೇ ನಿಲ್ಲಿಸಿದ್ದ ಕಾರಿನ ಕಡೆಗೆ ಓಡಿದ ಸಿಂಗರ್‌ನನ್ನು ಫಾಸ್ಟಾಗಿ ಫಾಲೋ ಮಾಡಿದ.

ಆ ಸ್ಫೋಟದ ಗಲಭೆ ನಾಲ್ವರನ್ನು ಆಕರ್ಷಿಸುವ ವೇಳೆಗೆ ಹಿಂದಿನ ರಸ್ತೆಯ ಮೂಲಕ ಮೈನ್ ಸ್ಟ್ರೀಟ್ ತಲುಪಿ ವೇಗವಾಗಿ ಮುಂದಕ್ಕೆ ಡ್ರೈವ್ ಮಾಡತೊಡಗಿದ ಡಾರ್ಟ್ಸ್ ಅನ್ನು ಸಿಂಗರ್.

# 5

ಮತ್ತೆ ತಾತ್ಕಾಲಿಕವಾಗಿ ತಾವು ತೆಗೆದುಕೊಂಡಿರುವ ಅಪಾರ್ಟ್‌ಮೆಂಟ್ ತಲುಪುವವರೆಗೆ ಮಹೇಶ, ಸಿಂಗರ್ ಮೌನವಾಗಿಯೇ ಇದ್ದುಬಿಟ್ಟಿದ್ದರು.

ಶಾರ್ಮ್ಸ್ ಅಪಾರ್ಟ್‌ಮೆಂಟ್ ದಾಟಿ ಹೋಗುವಾಗ ಮಹೇಶನ ನೋಟ ಒಮ್ಮೆ ಪರಿಸರವನ್ನೆಲ್ಲಾ ಸರ್ವೆ ಮಾಡಿದವು.

ಸಣ್ಣದೊಂದು ಬದಲಾವಣೆಯ ವಿನಹ ಮಿಕ್ಕವೆಲ್ಲಾ ಯಥಾಸ್ಥಿತಿಯೇ. ಬದಲಾವಣೆಯೆಂದರೆ ಒಂದು ಮೆಟಾಡರ್ ವ್ಯಾನ್.

ಅದಕ್ಕೆ ಮೊದಲದು ಶಾರ್ಮ್ಸ್ ಅಪಾರ್ಟ್‌ಮೆಂಟ್ ಪಕ್ಕದಲ್ಲಿರಲಿಲ್ಲ. ಈಗ ಅದನ್ಯಾರೋ ನಿಲ್ಲಿಸಿ ಎಲ್ಲೋ ಹೋದಂತಿದ್ದರು. ಶಾರ್ಮ್ಸ್ ಅಪಾರ್ಟ್‌ಮೆಂಟ್ ಕಾವಲು ಕಾಯುತ್ತಿದ್ದ ಗಾರ್ಡ್‌ಗಳು ಕಟ್ಟೆಕದಲಿರಲಿಲ್ಲ.

ತಮ್ಮ ಅಪಾರ್ಟ್‌ಮೆಂಟ್ ಮುಂದೆ ಕಾರು ನಿಂತೊಡನೆ ಕಾರಿಳಿದು ನೇರ ಒಳಕ್ಕೆ ನಡೆದ ಮಹೇಶ.

ಬೆಡ್‌ರೂಂ ಕಿಟಕಿಯ ಬಳಿ ಅವನು ಅಡ್ಜಸ್ಟ್ ಮಾಡಿದ್ದ ವಿಡಿಯೋ ಕ್ಯಾಮರಾ ಇನ್ನೂ ಪಿಕ್ಚರೈಸ್ ಮಾಡುತ್ತಲೇ ಇತ್ತು ಮುಂದಿನ ದೃಶ್ಯವನ !

ಅದನ್ನು ನಿಲ್ಲಿಸಿದ ಮಹೇಶ. ರೀಲ್ ರಿವೈಂಡ ಮಾಡಿ ಹೊರಕ್ಕೆ ತೆಗೆದ. ಪ್ರೊಜೆಕ್ಟ್ ಬಾಕ್ಸ್‌ನಲ್ಲಿ ಫಿಕ್ಸ್ ಮಾಡಿ ಪ್ರೊಜೆಕ್ಟ್ ಮಾಡಿದ.

ವಿಡಿಯೋ ಸ್ಕ್ರೀನ್ ಮೇಲೆ ಸಣ್ಣ ಪಿಕ್ಚರ್‌ನಂತೆ ಕಾಣಿಸಿತು ವಿಡಿಯೋ ತೆಗೆದಿದ್ದ ದೃಶ್ಯ. ಶಾರ್ಮ್ಸ್ ಅಪಾರ್ಟ್‌ಮೆಂಟ್, ಗಾರ್ಡ್ಸ್‌, ರಸ್ತೆಯ ಎರಡೂ ಬದಿ ಒಂದಷ್ಟು ದೂರದವರೆಗೆ ಕಾಣುತ್ತಿದ್ದವು. ರೀಲ ತಿರುಗುತ್ತಲೇ ಇತ್ತು. ದೃಶ್ಯದಲ್ಯಾವುದೇ ಬದಲಾವಣೆಯಿಲ್ಲ.

ಎರಡು ನಿಮಿಷಗಳ ನಂತರ ಒಬ್ಬ ಗಾರ್ಡ್ ಸಿಗರೇಟ್ ಹಚ್ಚುತ್ತಿರುವಾಗ ಇನ್ನೊಬ್ಬ ಗಾರ್ಡ್ ಏನೋ ಕಾಮೆಂಟ್ ಮಾಡಿ ನಕ್ಕದ್ದಷ್ಟೇ ಒಂಚೂರು ಓಡಲಾವಣೆ !

ಐದು ನಿಮಿಷಗಳಾದ ಮೇಲೂ ವಿಡಿಯೋದ ಚಿತ್ರ ಬದಲಾಗಲಿಲ್ಲ. ನಂತರ ರಸ್ತೆಯಲ್ಲೊಂದು ಮೆಟಡೋರ್ ಪ್ರತ್ಯಕ್ಷವಾಯಿತು. ಮೆಲ್ಲಗೆ ಬಂದ ಅದು ಸಾವರ್ನ್ ಅಪಾರ್ಟ್‌ಮೆಂಟ್ ಮುಂದೆ ನಿಂತಿತು. ಬಾಗಿಲು ತೆರೆದುಕೊಂಡು ಯುವಕನೊಬ್ಬ ಕೆಳಗಿಳಿದು ಗಾರ್ಡ್‌ಗಳ ಬಳಿ ಏನೋ ಮಾತಾಡಿದ. ಗಾರ್ಡ್ಸ್ ಪಕ್ಕದ ಅಪಾರ್ಟ್‌ಮೆಂಟ್ ತೋರಿಸಿ ಏನೋ ಹೇಳಿದರು. ಯುವಕ ಹಿಂತಿರುಗಿ ಡ್ರೈವಿಂಗ್ ಸೀಟ್‌ನಲ್ಲಿದ್ದ ವ್ಯಕ್ತಿಗೆ ಏನೋ ಹೇಳಿದ. ಮೆಟಡೋರ್ ರಸ್ತೆಯ ಪಕ್ಕಕ್ಕೆ ಚಲಿಸಿ ನಿಲ್ಲಿಸಿದ ಡ್ರೈವರ್. ಅವನು ಕೆಳಕ್ಕಿಳಿಯುತ್ತಿದ್ದಂತೆ ಯುವಕ ಬ್ಯಾಕ್‌ಡೋರ್ ತೆಗೆದು ಟೇಬಲ್ ಬಾಕ್ಸ್‌ನಂತೆ ಕಾಣುತ್ತಿದ್ದ ಪೆಟ್ಟಿಗೆಯೊಂದನ್ನು ಹೊತ್ತು ಚಾಲಕನ ಹಿಂದೆಯೇ ಸಾವರ್ನ್ ಪಕ್ಕದ ಅಪಾರ್ಟ್‌ಮೆಂಟ್‌ನೊಳಗೆ ಹೋಗುವುದು ಕಾಣಿಸಿತು.

ಇನ್ನತ್ತು ನಿಮಿಷ ಪಿಕ್ಚರ್ ಫ್ರೇಮ್‌ನಲ್ಲಿ ಮೆಟಡೋರ್ ಸಹ ಫೀಡ್ ಆಗುವುದರ ವಿನಹ ಬೇರೇನೂ ಬದಲಾವಣೆಯಿಲ್ಲ.

"ಛ್ಛ... ವೇಸ್ಟ್ ಆಯಿತೇನೋ ಇಷ್ಟೆಲ್ಲಾ ಅರೇಂಜ್‌ಮೆಂಟ್ಸ್! ನಾವು ಇಲ್ಲಿಂದ ಲ್ಯಾಬ್‌ಗೋಗಿ ಬಂದಷ್ಟು ಸಮಯ ಇಲ್ಲೇನಂತಹ ವಿಶೇಷ ಘಟನೆ ನಡೆದಿಲ್ಲ !" ಹಿಂದೆಯೇ ನಿಂತಿದ್ದ ಸಿಂಗರ್ ಕಾಮೆಂಟ್ ಮಾಡಿದ.

ತುಟಿ ಬಿಚ್ಚದೆ ಮತ್ತೆ ರೀಲ್ ರೀವೈಂಡ್ ಮಾಡಿದ ಮಹೇಶ. ಮೆಟಡೋರ್ ಸ್ಕ್ರೀಟ್ ಮೇಲೆ ಬಂದೊಡನೆ ರೀಲ ರನ್ನಿಂಗ್ ನಿಲ್ಲಿಸಿ ದೃಶ್ಯವನ್ನು ಬ್ಲೋಅಪ್ ಮಾಡಿದ.

ಮೆಟಡೋರ್ ಫುಲ್ ಕ್ಲೋಸಪ್‌ನಲ್ಲಿ ಬಂತು !

ಅದರ ಮೇಲೆ 'ಜನರಲ್ ಎಲೆಕ್ಟ್ರಿಕ್ಸ್' ಎಂಬ ಲೋಗೋ ಪಕ್ಕದಲ್ಲೇ ಫೋನ್ ನಂಬರ್ ಇದ್ದವು.

"ಫ್ರೆಂಡ್ ! ಆ ಫೋನ್ ನಂಬರ್‌ಗೆ ರಿಂಗ್ ಮಾಡಿ ಜನರಲ್ ಎಲೆಕ್ಟ್ರಿಕಲ್ ಕಂಪೆನಿ ತಮ್ಮ ವರ್ಕರ್ಸ್ ಅನ್ನು ಈ ಸ್ಟ್ರೀಟ್‌ನಲ್ಲಿ ಯಾವುದಾದರೂ ಮನೆಗೆ ಎಲೆಕ್ಟ್ರಿಕ್ ಕೆಲಸಕ್ಕೆಂದು ಕಳಿಸಿದೆಯೇ ವಿಚಾರಿಸು ... ಕ್ವಿಕ್ !" ಅಂದ ಸಿಂಗರ್.

ಸ್ಕ್ರೀನ್ ಮೇಲಿನ ಫೋನ್ ನಂಬರ್ ನೋಟ್ ಮಾಡಿಕೊಂಡು ಟೆಲಿಫೋನ್ ಕಡೆಗೆ ನಡೆದ ಮಹೇಶ.

ಐದು ನಿಮಿಷಗಳ ನಂತರ ಯೋಚನಾಭರಿತ ಮುಖದೊಡನೆ ವಾಪಸ್ಸಾದ ಅವನು "ಈ ದಿನ ಕಂಪನಿ ತನ್ನ ಯಾವುದೇ ವೆಹಿಕಲ್ ಹೊರಕ್ಕೇ ಕಳಿಸಿಲ್ಲವಂತೆ ಮಹೇಶ್ ! ಆ ಕಂಪೆನಿಯ ಮ್ಯಾನೇಜರ್ ತಾನೇ ಹೇಳಿದ" ಅಂದ.

ಮಹೇಶನ ತುಟಿಗಳ ಮೇಲೆ ಮುಗುಳ್ನಗೆ ಪ್ರತ್ಯಕ್ಷವಾಯಿತು. ಸ್ಕ್ರೀನ್ ಮೇಲಿನ ಮೆಟಡೋರ್ ಅನ್ನು ಐದು ನಿಮಿಷ ಕೇರ್‌ಫುಲ್ ಆಗಿ ಪರಿಶೀಲಿಸಿದ.

ಎಂಜಿನ್ ಸ್ಮೋಕ್ ಹೊರ ಚೆಲ್ಲಲು ಎರಡು ಪೈಪ್‌ಗಳಿದ್ದವು ಅದಕ್ಕೆ. ವಿಶಿಷ್ಟ ಕೃತಿಯಲ್ಲಿ ತಯಾರಾಗಿದ್ದವವು.

ತನ್ನ ಐಡಿಯಾ ಕರೆಕ್ಟ್... ಗೋಲ್ಡ್‌ಗ್ಯಾಂಗ್ ಹೆಲ್ಗಾಳನ್ನು ಕಿಡ್ನಾಪ್ ಮಾಡಲು ಇಷ್ಟರಲ್ಲೇ ಪ್ರಯತ್ನಿಸಲಿದೆ. ಆದರೆ ಸಾರ್ವರ್ಜ್ ಅವರ ಬಳಿ ಇಲ್ಲದಿರುವಾಗ ಹೆಲ್ಗಾಳನ್ನು ಕಿಡ್ನಾಪ್ ಮಾಡಿ ಅವರು ಸಾಧಿಸುವುದಾದರೂ ಏನು ? ತಮ್ಮಂತೆಯೇ ಸಾರ್ವರ್ಜ್ ಸುಳಿವು ತಿಳಿಯುಲಿರಬಹುದೇ ?

ಸಿಗರೇಟ್ ಹತ್ತಿಸಿಕೊಳ್ಳುತ್ತ ಕಿಟಕಿಯಿಂದ ಹೊರಗಡೆಗೆ ನೋಡಿದ ಮಹೇಶ. ಮೆಟಡೋರ್ ಅಸ್ಪಷ್ಟವಾಗಿ ಕಾಣಿಸುತ್ತಿತ್ತು. ಸಿಐಎ ಗಾರ್ಡ್ಸ್ ಫ್ಲಾಸ್ಕ್‌ನಿಂದ ಕಪ್ಪುಗಳಿಗೆ ಕಾಫಿ ಬಗ್ಗಿಸಿಕೊಳ್ಳುತ್ತಿದ್ದರು.

ವಾಚ್ ನೋಡಿಕೊಂಡ ಮಹೇಶ.

ಇನ್ನೆರಡು ಗಂಟೆ... ....ಹೆಲ್ಗಾಳನ್ನು ಅಪಾರ್ಟ್‌ಮೆಂಟ್‌ನಿಂದ ಕರೆದೊಯ್ಯಲು ಸಿಐಎ ಬ್ಯಾಚ್ ಬರಲಿರುವ ವ್ಯವಧಿ ಅದು !

ಸಿಂಗರ್ ಆ ವೇಳೆಗೆ ಬ್ಲಾಕ್ ಕಾಫಿ ಪ್ರಿಪೇರ್ ಮಾಡಿದ್ದ. ಕಾಫಿ ಸಿಪ್ ಮಾಡುತ್ತ ವಿಂಡೋ ಬಳಿ ಕುಳಿತ ಮಹೇಶ.

ನಿಧಾನವಾಗಿ ಕಾಲ ಸರಿಯುತ್ತಿತ್ತು. ಸಂಜೆ ಐದನ್ನು ಸಮೀಪಿಸು ತ್ತಿತ್ತು ವೇಳೆ.

ಶಾರ್ಮನ್ ಪಕ್ಕದ ಅಪಾರ್ಟ್‌ಮೆಂಟ್‌ನೊಳಕ್ಕೋದ ಎಲೆಕ್ಟ್ರೀಷಿ ಯನ್ನ ಸುಳಿವೇ ಇಲ್ಲ. ಈ ವೇಳೆಯಲ್ಲೇ ಪೋಸ್ಟ್‌ಮನ್ ಒಬ್ಬ ಆ ಬೀದಿ ಯಲ್ಲಿ ಕಾಲಿಟ್ಟು ಶಾರ್ಮನ್ ಅಪಾರ್ಟ್‌ಮೆಂಟ್ ಎದುರಿಗಿರುವ ಪೋಸ್ಟ್ ಬಾಕ್ಸ್‌ನಿಂದ ಲೆಟರ್ಸ್ ಕಲೆಕ್ಟ್ ಮಾಡಿಕೊಂಡಿದ್ದು ಮಹೇಶನ ಕಣ್ಣಿಗ ಬಿತ್ತು.

ಸಿಗರೇಟ್ ಕೊನೆಯ ದಂ ಎಳೆದು ಆಷ್‌ಟ್ರೇಯಲ್ಲದುಮುತ್ತಿರುವಾಗ ಕೇಳಿ :ಂದಿತ್ತು ಕಾರೊಂದರ ಶಬ್ದ.

ಅಲರ್ಟಾಗಿ ಕಿಟಕಿಯಿಂದ ನೋಡಿದ ಮಹೇಶ.

ಮೈರ್ಸ್ ರೋಡ್‌ನ ತಿರುವು ಕ್ರಮಿಸಿ ಅತ್ತ ಕಡೆಗೇ ಬರುತ್ತಿತ್ತೊಂದು ಅಫಿಷಿಯಲ್ ಲಿಮೋಸಿನ್ ಕಾರು. ಅದರ ಹಿಂದೆಯೇ ಒಂದು ಟ್ರಕ್ ತುಂಬಾ ಇದ್ದರು ಸ್ಪೆಷಲ್ ಪೋಲೀಸ್ !

"ಸಿಂಗರ್.. ಗೆಟ್ ರೆಡಿ...." ಟಕ್ಕನೆದ್ದು ನಿಂತು ಹಾಲ್‌ನತ್ತ ಓಟ ಕ್ಕಿತ್ತ ಮಹೇಶ.

ಅವನನ್ನು ಫಾಲೋ ಮಾಡಿದ ಸಿಂಗರ್.

ತಮ್ಮ ಅಪಾರ್ಟ್‌ಮೆಂಟ್ ಡೋರ್ ಓರೆಯಾಗಿ ತೆಗೆದು ಬಗ್ಗಿ ನೋಡಿದ ಮಹೇಶ. ಸಿಐಎ ಸ್ಪೆಷಲ್ ಸ್ಕ್ವಾಡ್ ಇದ್ದ ಲಿಮೋಸಿನ್ ಶಾರ್ಮನ್ ಅಪಾರ್ಟ್‌ಮೆಂಟ್ ಮುಂದೆ ನಿಂತಿತು. ಅದರೊಳಗಿಂದ ಕೆಳ ಕ್ಕಿಳಿದರು ಅರ್ಧ ಡಝನ್ ಆಫೀಸರ್ಸ್. ಲಿಮೋಸಿನ್ ಹಿಂದೆಯೇ ನಿಂತ ಟ್ರಕ್ ನಿಂದ ಸರಸರ ಕೆಳಕ್ಕೆ ನೆಗೆದರು ಸ್ಪೆಷಲ ಪೋಲೀಸ್.

ಅವರಿಗೇನೋ ಆಜ್ಞಾಪಿಸಿ ಅರ್ಧ ಡಝನ್ ಆಫೀಸರ್ಸ್ ಶಾರ್ಮನ್ ಅಪಾರ್ಟ್‌ಮೆಂಟ್‌ನೊಳಕ್ಕೆ ಹೋದರು. ಸ್ಪೆಷಲ್ ಪೋಲೀಸ್ ಲಿಮೋಸಿನ್ ಸುತ್ತಲೂ ಕೋಟೆ ಕಟ್ಟಿದಂತೆ ನಿಂತರು. ಭುಜಗಳಿಂದ ನೇತಾಡುತ್ತಿದ್ದ ಮೆಷಿನ್‌ಗನ್ಸ್ ಕೆಳಿಯಾಗಿಡದು ಅಪಾರ್ಟ್‌ಮೆಂಟ್ ಕಡೆಗೇ ಅಟೆಂಟಿವ್ ಆಗಿ ನೋಡತೊಡಗಿದರು.

ಬಾಗಿಲ ಸಂದಿಯಿಂದ ಅವರನ್ನು ನೋಡುತ್ತಿದ್ದ ಮಹೇಶ ಸರಿಯಾಗಿ ಆಗಲೇ ಪಕ್ಕದ ಅಪಾರ್ಟ್‌ಮೆಂಟ್‌ನಿಂದ ಜನರಲ್ ಎಲೆಕ್ಟ್ರಿಕ್ ಕಂಪನಿ ಕೆಲಸಗಾರರ ಸೋಗು ಹಾಕಿದ್ದ ಇಬ್ಬರು ವ್ಯಕ್ತಿಗಳು ಹೊರ ಬರುವುದನ್ನು ಗಮನಿಸಿದ. ಅವರಲ್ಲೊಬ್ಬ ಟೂಲ್ ಬಾಕ್ಸ್ ಹಿಡಿದಿದ್ದ. ಅವರು ನಿಧಾನವಾಗಿ ಪಕ್ಕದಲ್ಲಿನ ಘಟನೆಗಳಿಗೂ ದಮಗೂ ಸಂಬಂಧವೇ ಇಲ್ಲವೆಂಬಂತೆ ತಮ್ಮ ವೆಹಿಕಲ್ ಕಡೆಗೆ ಹೆಜ್ಜೆ ಹಾಕತೊಡಗಿದ್ದರು.

ದೂರದಲ್ಲಿ ಪೋಸ್ಟ್ ಬಾಕ್ಸ್ ಬಾಗಿಲು ಮುಚ್ಚಿ ಕಾಗದಗಳನ್ನು ಬ್ಯಾಗ ನಲ್ಲಿ ಹಾಕಿಕೊಳ್ಳ ತೊಡಗಿದ ಪೋಸ್ಟ್‌ಮ್ಯಾನ್!

ಆಗಲೇ ಅಪಾರ್ಟ್‌ಮೆಂಟ್ ನಿಂದ ಹೊರ ಬಂದರು ಸಿಐಎ ಆಫೀಸರ್ಸ್. ಅವರ ನಡುವೆಯಿದ್ದಳು ಸುಮಾರು ಇಪ್ಪತ್ತೈದರ ಹರೆಯದ ಯುವತಿಯೊಬ್ಬಳು.

ಒಂದು ಕ್ಷಣ ಅವಳನ್ನೇ ನೋಡುತ್ತಿದ್ದು ಬಿಟ್ಟ ಮಹೇಶ. ಅವಳ ಮಾಡಲ್ ಮೈನ ಸೊಬಗು ಸೂಜಿಗಲ್ಲಿನಂತೆ ಎಲ್ಲರನ್ನೂ ಆಕರ್ಷಿಸಿತ್ತೆನ್ನಬಹುದು. ಭುಜದ ಮೇಲೆ ಹರಡಿರುವ ಹೊಂಬಣ್ಣದ ಕೂದಲು. ಹೆಜ್ಜೆ ಹಾಕುತ್ತಿದ್ದರೆ ಕುಲುಕುತ್ತಿರುವ–ಖಂಡಿತಾ ಬ್ರಾ ಹಾಕಿಲ್ಲ ಅವಳು–ಯೌವ್ವನ ಕಲಶಗಳು ...ಮ್ಯಾಕ್ಸಿಯೊಳಗಿನ ದೇಹ ಇಮಾರ್ಜಿ ಮಾಡಿಕೊಂಡರೇನೇ ನರಗಳೆಲ್ಲಾ ಜುಂಜುಂ.

ಮಹೇಶನೇ ದಂಗಾಗಿ ಬಿಟ್ಟ ಅವಳ ಬ್ಯೂಟಿಗೆ. ಸಾವರ್ನ್ ಮಗಳು ಹೆಲ್ಗಾ ಅವಳೇ! ನೋ ಡೌಟ್ ಇನಿಟ್!

ಅವಳ ಸುತ್ತಲೂ ಕವಚದಂತೆ ನಿಂತು ಅವಳನ್ನು ಅಪಾರ್ಟ್‌ಮೆಂಟ್‌ನಿಂದ ಹೊರಕ್ಕೆ ಕರೆತಂದರು ಸಿಐಎ ಆಫೀಸರ್ಸ್. ಲಿಮೋಸಿನ್ ಬ್ಯಾಕ್ ಡೋರ್ ತೆರೆದು ರೆಡಿಯಾಗಿದಿದ್ದ ಒಬ್ಬ ಸ್ಪೆಷಲ್ ಪೋಲೀಸ್. ಅವಳು ಲಿಮೋಸಿನ್‌ನೊಳಕ್ಕೆ ಹತ್ತಲು ಅತ್ತ ಕಡೆಗೆ ಹೆಜ್ಜೆ ಹಾಕಿದಳು.

ಆಗಲೇ ಪೋಸ್ಟ್ ಬಾಕ್ಸ್ ಬಳಿ ನಿಂತಿದ್ದ ಪೋಸ್ಟ್‌ಮ್ಯಾನ್ ಮುಂದಾದ. ಅವನ ಕೈನಲ್ಲಿ ಗುಂಡಸೆಯ ವಸ್ತುವೊಂದು ಪ್ರತ್ಯಕ್ಷವಾಗುದನ್ನು ಕಂಡೊಡನೆ ಬೆಚ್ಚಿ ಡೋರ್ ಪೂರ್ತಿ ತೆರೆದು ಹೊರಕ್ಕೆ ನುಗ್ಗಿದ ಮಹೇಶ.

ಅಷ್ಟರಲ್ಲೇ ಪೋಸ್ಟ್‌ಮನ್ ಲಾಬ್ ಮಾಡಿದ ಗುಂಡನೆಯ ವಸ್ತು ನೇರ ಹೋಗಿ ಲಿಮೋಸಿನ್ ಮುಂದೆ ನೆಲವನ್ನು ಸೋಕಿದೊಡನೆ ಜೋರು ಶಬ್ದದೊಡನೆ ಸ್ಫೋಟಿಸಿ ಒಮ್ಮೆಲೇ ಬಿಳಿ ಹೊಗೆ ಆ ಪ್ರದೇಶದಲ್ಲೆಲ್ಲಾ ಕವಿಯಲು ಶುರುವಾಯಿತು.

ಅದುರಿ ಹೋದ ಸಿಐಎ ಸ್ಕ್ವಾಡ್ ರಿಕವರ್ ಆಗುವುದರೊಳಗೆ ಮೆಟಡೋರ್ ಹತ್ತಿದ ಎಲೆಕ್ಟ್ರೀಷಿಯನ್, ಆವನ ಅಸಿಸ್ಟೆಂಟ್, ವ್ಯಾನ್ ಸ್ಟಾರ್ಟ್ ಮಾಡಿ ರಿವರ್ಸ್ ಗೇರ್‌ನಲ್ಲಿ ಅವರ ಕಡೆಗೆ ನುಗ್ಗಿಸಿದರು.

ಅದೇ ಕ್ಷಣ ಮೆಟಡೋರ್ ಸೈಲೆನ್ಸರ್‌ನಂತೆ ಕಾಣುತ್ತಿದ್ದ ಕೊಳವೆಗಳಿಂದ ಕಂಗೆಡಿಸುವ ಶಬ್ದಗಳೊಡನೆ ಬುಲೆಟ್ಸ್ ರಿಲೀಸ್ ಆಗತೊಡಗಿದವು.

ಧಢ... ಧಢ... ಧಡಾಧಢ –

ಆಕ್ರಂದನಗಳೊಡನೆ ದೊಡ್ಡ ಗಲಭೆಗ್ರಸ್ತ ಪ್ರದೇಶವಾಯಿತು ಅದು.

ಪ್ರಾಣಗಳನ್ನು ಕಾಪಾಡಿಕೊಳ್ಳಲು ಪಕ್ಕಕ್ಕೆ ನೆಗೆದ ಕೆಲವು ಸಿಐಎ ಆಫೀಸರ್ಸ್ ಪಾರ್ಕ್‌ನಿಂದ ಹೊರ ಬಿದ್ದೊಡನೆ ಜೋರಾಗಿ ಕೂಗಿಕೊಂಡರು. "ಅಟ್ಯಾಕ್ ಫೈರ್.. !" ಕರ್ಕಶ ಸ್ವರಗಳಿಂದ ಪಿಸ್ತೂಲುಗಳನ್ನು ತೆಗೆದು ಭೂತದೋಪಾದಿಯಲ್ಲಿ ರಿವರ್ಸಾಗಿ ಬರುತ್ತಿದ್ದ ಮೆಟಡೋರ್ ಅನ್ನು ಶೂಟ್ ಮಾಡಲು ಪ್ರಯತ್ನಿಸಿದರು.

ಸ್ಪೆಷಲ್ ಪೋಲೀಸರನ್ನು ನೋಡದಂತೆ ಕವಿಯಿತು ವೈಟ್ ಗ್ಯಾಸ್. ಕಕ್ಕಾಬಿಕ್ಕಿಯಾಗಿ ಆ ಹೊಗೆ ಒಳಕ್ಕೆಳೆದುಕೊಂಡ ಅವರು ಒಬ್ಬೊಬ್ಬರಾಗಿ ತೊಪತೊಪ ನೆಲಕ್ಕುರುಳತೊಡಗಿದರು. ಸಿಕ್ಕಾಬಟ್ಟೆ ಮತ್ತು ತರಿಸುವ ಆ ಹೊಗೆಯಿಂದ ತಪ್ಪಿಸಿಕೊಂಡು ಮೆಟಡೋರ್ ಕಡೆಗೆ ಶೂಟ್ ಮಾಡಲು ಪ್ರಯತ್ನಿಸಿದ ಕೆಲವರನ್ನು ಸೈಲೆನ್ಸರ್‌ನಿಂದ ಹೊರ ಬೀಳುತ್ತಿದ್ದ ಬುಲೆಟ್ಸ್ ಚಿಂದಿಯೆಬ್ಬಿಸುತ್ತಿದ್ದವು. ವಿಕಾರ ಕೂಗುಗಳೊಡನೆ ವಿಲವಿಲ ಒದ್ದಾಡುತ್ತ ಪ್ರಾಣ ಕಳೆದುಕೊಳ್ಳುತ್ತಿದ್ದರು ಅವರು.

ರಾಕೆಟ್ ನಂತೆ ಅತ್ತ ಕಡೆಗೆ ನುಗ್ಗಿದ ಮಹೇಶನಿಗೆ ಪೋಸ್ಟ್‌ಮ್ಯಾನ್ ವೇಷದಲ್ಲಿದ್ದ ವ್ಯಕ್ತಿ ಮೂರ್ಛೆ ಹೋಗಿರುವ ಹೆಲ್ಗಾಳನ್ನು ಭುಜದ ಮೇಲೆತ್ತಿಕೊಂಡು ದೌಡಾಯಿಸತೊಡಗಿದ್ದು ಕಾಣಿಸಿತು.

ತಕ್ಷಣ-ಅವನ ಬೆನ್ನು ಬಿದ್ದ ಮಹೇಶ. ಅದನ್ನು ಗಮನಿಸಿದ ಮೆಟ ಡೋರ್ ಡ್ರೈವರ್ ಪಿಸ್ತೂಲನ್ನು ಮಹೇಶನ ಕಡೆಗೆ ಏಮ್ ಮಾಡಹೋದ. ಮಹೇಶನ ಹಿಂದೆಯೇ ಆ ಪ್ರದೇಶಕ್ಕೆ ನುಗ್ಗಿ ಬಂದ ಸಿಂಗರ್ ಕೈನಲ್ಲಿ ಮಿಂಚಿ ನಂತೆ ಝಳಪಿಸಿಕೊಂಡಿತ್ತೊಂದು ಸಣ್ಣ ಡ್ಯಾಗರ್. 'ಸುಂಯ್' ಎಂದು ಶಬ್ದ ಮಾಡುತ್ತ ಮೆಟಡೋರ ವಿಂಡೋ ಮೂಲಕ ನುಗ್ಗಿ ಚಾಲಕನ ಗಂಟಲಲ್ಲಿ ಲಾಡ್ಜ್ ಆಯಿತು.

ಸಣ್ಣಗೆ ಮುಲುಗಿ ಸ್ಟೀರಿಂಗ್ ವೀಲ್ ಮೇಲೆ ಒರಗಿ ಬಿಟ್ಟ ಮೆಟ ಡೋರ್ ಡ್ರೈವರ್. ತನ್ಮೂಲಕ ರಿವರ್ಸ್ ಗೇರ್‌ನಲ್ಲಿ ಇರುತ್ತಿದ್ದ ವಾಹ ನದ ಕಂಟ್ರೋಲ್ ತಪ್ಪಿ ಸ್ಪೆಷಲ್ ಪೋಲೀಸು ಟ್ರಕ್‌ಗೆ ಬಲವಾಗಿ ಡಿಕ್ಕಿ ಹೊಡೆಯಿತು. ಟ್ರಕ್ ಮುಂದಕ್ಕೆ ಜಿಗಿದು ಹಿಂದಿದ್ದ ಲಿಮೋಸಿನ್‌ಗೆ ಡ್ಯಾಷ್ ಹೊಡೆಯಿತು. ಲಿಮೋಸಿನ್ ಜರ್ರನೆ ಮುಂದಕ್ಕೆ ಜಾರಿ ಇಬ್ಬರು ಸಿಐಎ ಆಫೀಸರ್ಸ ಮೇಲೆ ಹತ್ತಿತು.

ಚೀರಾಟ, ಕೂಗಾಟಗಳೇ ತುಂಬಿ ಹೋಯಿತು ಆ ಪ್ರದೇಶದಲ್ಲಿ.

ಗಿರ್ರನೆ ಹಿಂದಕ್ಕೆ ತಿರುಗಿ ದೂರದಲ್ಲಿ ನಿಲ್ಲಿಸಿದ್ದ ತನ್ನ ಡಾಟ್ಸನ್ ಕಾರನ್ನು ಸೇರಿಕೊಂಡು ಕಾರನ್ನು ಮಹೇಶ ಓಡಿದ ಕಡೆಗೆ ನುಗ್ಗಿಸಿದ ಸಿಂಗರ್,

ಹೆಲ್ಗಾಳನ್ನು ಹೊತ್ತು ಪರಾರಿಯಾಗುತ್ತಿದ್ದ ಫೋರ್ಸ್ಟರ್ ಸಣ್ಣ ಗಲ್ಲಿ ಯೊಂದರೊಳಕ್ಕೆ ನುಗ್ಗಿ ಕೊನೆಯಲ್ಲಿ ನಿಲ್ಲಿಸಿದ್ದ ಕಾರಿನ ಕಡೆಗೆ ಓಟ ಕಿತ್ತ.

ಮಹೇಶ ಆ ಗಲ್ಲಿಯ ಎಂಟ್ರೆನ್ಸ್‌ಗೆ ಬರುವ ವೇಳೆಗೆ ಹೆಲ್ಗಾಳನ್ನು ಹಿಂದಿನ ಸೀಟಿನಲ್ಲಿ ಮಲಗಿಸಿ ವೇಗವಾಗಿ ಡ್ರೈವಿಂಗ್ ಸೀಟ ನೊಳಕ್ಕೆ ತೂರು ತ್ತಿರುವಾಗಲೇ ಮಹೇಶನನ್ನು ನೋಡಿದ.

ಮಹೇಶನ ಕೈನಲ್ಲಿ ಪ್ರತ್ಯಕ್ಷವಾದ ಲ್ಯೂಗರ್ ಗಮನಿಸಿದೊಡನೆ ಅಲಾಡಿ ಹೋಗಿ ಫ್ರಂಟ್ ಸೀಟಿನಲ್ಲಿ ವಾಲಿಬಿಟ್ಟ.

ಥಸ್....

ಭಯಂಕರ ಮೊಳಗುವಿಕೆಯೊಡನೆ ಕಾರಿನ ಫ್ರಂಟ್ ವಿಂಡೋ ಛಿದ್ರ ಮಾಡಿತ್ತು 'ರಾಣಿ'ಯ ಬುಲೆಟ್ .

ಬರ್ ಎಂದು ಸ್ಟಾರ್ಟಾಯಿತು [redacted] ಎಂದು ಮಹೇಶನ ಕಡೆಗೆ ಪಿಶಾಚಿಯಂತೆ ನುಗ್ಗಿತು !

ತಲೆ ಡ್ಯಾಷ್‌ಬೋರ್ಡ್ ಲೆವಲ್‌ನಲ್ಲಿರಿಸಿ ಅದನ್ನು ಡ್ರೈವ್ ಮಾಡುತ್ತಿದ್ದ ಒಳಗಿದ್ದ ವ್ಯಕ್ತಿ ! 274.814308 72

ಢರ್... ಢರ್.... ANA N94

ಎರಡು ಟೈರ್‌ಗಳನ್ನು ಚಿಂದಿಯೆಬ್ಬಿಸಿದವು ಎರಡು ಬುಲೆಟ್ಸ್.

ಅದರೂ ಕಾರು ನಿಲ್ಲಿಸಲಿಲ್ಲ ಅವನು. ಫ್ಲಾಟಾದ ಟೈರ್‌ಗಳೊಡನೆ ಸ್ವಲ್ಪ ಸ್ಲೋ ಆಗಿ ಮಹೇಶನ ಕಡೆಗೆ ಬರುತ್ತಲೇ ಇತ್ತು ಕಾರು.

ಅದು ಸಮೀಪಿಸಿದೊಡನೆ ಎಗರಿ ಚಾನೆಲ್ ಸೇರಿಕೊಂಡ ಮಹೇಶ.

ಧನ್....

ಮಹೇಶ ಅದೇ ನಡೆ ತೋರುವನೆಂದು ಊಹಿಸಿ ರೆಡಿಯಾಗಿದ್ದ ಪೋಸ್ಟ್‌ಮರ್ನಂತೆ ನಟಿಸಿದ್ದ ವ್ಯಕ್ತಿ ಮಹೇಶ ಮುಂದೆ ಕಾಣಿಸಿದೊಡನೆ ಫೈರ್ ಮಾಡಿದ ! 642420

ಅದಕ್ಕೆ ತಾನೂ ರೆಡಿಯಾಗಿದ್ದ ಮಹೇಶ....... ಜರ್ರನೆ ಪಕ್ಕಕ್ಕೆ ಜಾರಿ ಹೋದ. ಅವನ ಭುಜ ಉಜ್ಜಿಕೊಂಡು ಹೋಯಿತು ಬುಲೆಟ್.

ಎರಡನೇ ಪ್ರಯತ್ನ ಮಾಡುವುದರಲ್ಲಿದ್ದ ಆ ವ್ಯಕ್ತಿ.

ಮಹೇಶನ ಮುಷ್ಟಿ ಗ್ಲಾಸ್‌ನಲ್ಲಾದ ರಂಧ್ರದ ಮೂಲಕ ಹೋಗಿ ಆ ವ್ಯಕ್ತಿಯ ಹಣೆ ಸಂಪರ್ಕಿಸಿತು.

ಚಿಟಾರನೆ ಕಿರುಚಿದ ವ್ಯಕ್ತಿ ಸೀಟ್ ಮೇಲೆ ಒದ್ದಾಡಿದ ಎರಡು ಕ್ಷಣ. ಹಣೆಗೆ ಸುತ್ತಿಗೆಯಿಂದ ಹೊಡೆದಂತಾಗಿ ಅವನು ಚೇತರಿಸಿಕೊಳ್ಳುವಷ್ಟರಲ್ಲಿ ಮುಖದತ್ತ ನುಗ್ಗಿ ಬರುತ್ತಿರುವ ಮಹೇಶನ ಮುಂಗೈ ಕಾಣಿಸಿತು.

ಆ ಪಂಚ್‌ನಿಂದ ಪಾರಾಗಲು ತೀವ್ರ ಪ್ರಯತ್ನವೆಸಗಿದ ಆ ವ್ಯಕ್ತಿ. ಆದರೆ ತಡವಾಗಿ ಹೋಗಿತ್ತು....

ಅರ್ಧ ಮಡಚಿದ್ದ ಮಹೇಶನ ಬೆರಳುಗಳು ಅವನ ಮುಖವನ್ನು ಸಂಪರ್ಕಿಸಿದೊಡನೆ ಅವನ ಗಂಟಲಿಂದ ವಿಕೃತ ಕೂಗೊಂದು ಹೊರಟಿತು.

ಗಾಳಿ ತೆಗೆದು ಬೆಲೂನ್‌ನಂತಾಗಿ ಸೀಟಿನ ಮೇಲೆ ಜಾರಿ ಸ್ಟ್ರೈಕೆ ಕಳೆದು ಕೊಂಡ.

ಬಾನೆಟ್ ಮೇಲಿಂದ ಕೆಳಕ್ಕೆ ನೆಗೆದು ಬ್ಯಾಕ್ ಡೋರ್ ತೆಗೆದು ಹೆಲ್ಗಾಳನ್ನು ಹೊರಗೆತ್ತಿಕೊಂಡ ಮಹೇಶ.

ಆಗಲೇ ಗಲ್ಲಿಯೊಳಕ್ಕೆ ಎಂಟರಾಯಿತು ಸಿಂಗರ್ ಡ್ರೈವ್ ಮಾಡು ತ್ತಿದ್ದ ಕಾರು.

ಹೆಲ್ಗಾಳನ್ನು ಭುಜದ ಮೇಲೆ ಹೊತ್ತು ಮುಂದಕ್ಕೋಡಿದ ಮಹೇಶ. ಓಡಿ ಬರುತ್ತಿರುವ ಮಹೇಶನನ್ನು ಕಂಡೊಡನೆ ಬ್ಯಾಕ್ ಡೋರ್ ತೆಗೆದ ಸಿಂಗರ್. ಕಾರು ಹತ್ತಿರವಾದೊಡನೆ ಆಟಿಕೆಯಂತಿದ್ದ ಹೆಲ್ಗಾಳನ್ನು ಬ್ಯಾಕ್ ಸೀಟ್ ಸೇರಿಸಿ ತಾನೂ ಹತ್ತಿದ ಮಹೇಶ.

"ಲೆಟಸ್ ಗೆಟ್ ದ ಹೆಲ್ ಔಟಾಫ್ ಹಿಯರ್ ಫ್ರೆಂಡ್ ಸಿಂಗರ್.... ಮೂವ್ ವೆರಿ ವೆರಿ ಫಾಸ್ಟ್!" ಧಡಕ್ಕನೆ ಬ್ಯಾಕ್‌ಡೋರ್ ಮುಚ್ಚಿ ಕೂಗಿಕೊಂಡ ಮಹೇಶ.

ಕ್ಲಚ್ ಬಿಟ್ಟೊಡನೆ ಆಕ್ಸಿಲೇಟರ್ ತಳದವರೆಗೆ ಪ್ರೆಸ್ ಮಾಡಿತು ಸಿಂಗರ್ ಪಾದ. ಕಡಿವಾಣ ಸಡಿಲಿಸಿದ ಕುದುರೆಯಂತೆ ಮುನ್ನುಗ್ಗಿತು ಕಾರು.

ಮಹೇಶನ ಮಿದುಳು ಅದೇ ವೇಗದೊಡನೆ ಓಡುತ್ತಿತ್ತು.

ಗ್ಯಾಂಗ್ ಮೆಂಬರ್ಸ್‌ನಿಂದ ಹೆಲ್ಗಾಳನ್ನು ರಕ್ಷಿಸುವುದರಲ್ಲಿ ಕೃತಕೃತ್ಯ ನಾದಂತೆಯೇ ಅವಳನ್ನು ಅವರ ಕಣ್ಣಿಗೆ ಬೀಳದ ಪ್ರದೇಶದಲ್ಲಿ ಸುರಕ್ಷಿತವಾಗಿಡ ಬೇಕು. ನಾರ್ಮನ್ ತಲೆ ಮರೆಸಿಕೊಂಡಿರುವ ಕ್ಲಿಫ್ ಅನ್ನುವ ವ್ಯಕ್ತಿ ಯಾರೆಂದು ತಿಳಿಸ ಬಲ್ಲವಳು ಪ್ರಸ್ತುತಕ್ಕೆ ಹೆಲ್ಗಾ ಒಬ್ಬಳೇ!

ಆ ವಿಷಯ ಗೋಲ್ಡನ್ ಗ್ಯಾಂಗ್ ಸಹ ಗ್ರಹಿಸಿರುತ್ತದೆ... ಆದ್ದರಿಂದಲೇ ಪ್ರಾಣವನ್ನೂ ಪಣವಾಗಿಟ್ಟು ಹೆಲ್ಗಾಳನ್ನು ಕೈವಶ ಮಾಡಿಕೊಳ್ಳಲು ಪ್ರಯ ತ್ನಿಸುತ್ತಾರೆ ಗ್ಯಾಂಗ್‌ಗೋನ್ಸ್!

ಅವಳನ್ನು ಅವರ ಕೈನಿಂದ ಕಿತ್ತುಕೊಂಡದ್ದು ಇಡೀ ಗ್ಯಾಂಗ ನಲ್ಲೇ ಸಂಚಲನೆ ಸೃಷ್ಟಿಸುತ್ತದೆಂದು ಮಹೇಶನಿಗೆ ಚೆನ್ನಾಗಿ ಗೊತ್ತು. ಹೇಟ್ಟಿ

ನಾಯಿಗಳಂತೆ ಸಿಕ್ಕಿಯಲ್ಲ. ತನಗಾಗಿ ಹುಡುಕುತ್ತಾರವರು ಅವರ ಕೈಗಳಿಗೆ ಸಿಗದಷ್ಟು ದೂರಕ್ಕೆ ಹೆಲ್ಗಾಳನ್ನು ಸಾಗಿಸಬೇಕು

ಎಲ್ಲಿಗೆ ಕರೆದೊಯ್ಯುವುದವಳನ್ನ ?

ಮೂರ್ಛೆ ಹೋಗಿ ತನ್ನ ಪಕ್ಕದಲ್ಲಿ ಪ್ರಶಾಂತವಾಗಿ ನಿದ್ರಿಸುವಂತಿರುವ ಹೆಲ್ಗಾಳನ್ನೇ ತದೇಕವಾಗಿ ನೋಡಿದ ಮಹೇಶ.

ಸ್ಲೀಪಿಂಗ್ ಬ್ಯೂಟಿ ! ಮೂರ್ಛೆ ಹೋಗಿ ಮಲಗಿದ್ದರೂ ವೆರಿ ಟೆಂಪ್ಟಿಂಗ್ ಫಿಗರ್ !

"ಮಹೇಶ್....ವಾಟ್ಸ್ ದ ನೆಕ್ಸ್ಟ್ ಮೂವ್ ?"

ಸಿಂಗರ್ ಪ್ರಶ್ನೆಗೆ ತಲೆಯೆತ್ತಿ ಅವನನ್ನೇ ಆಲೋಚನೆಯೊಡನೆ ನೋಡಿದ ಮಹೇಶ ಅಷ್ಟೊತ್ತಿಗಲ್ಲಾ ಡಾರ್ಕ್ ಸಣ್ಣ ಪುಟ್ಟ ರಸ್ತೆಗಳನ್ನು ಕ್ರಮಿಸಿ ನ್ಯಾಷನಲ್ ಹೈವೇ ತಲುಪಿತ್ತು. ಕ್ಯಾಲಿಫೋರ್ನಿಯಾಗೆ ಕರೆದೊಯ್ಯುವ ಸೇಫ್ ರೂಟ್ ಅದು !

"ಸಿಂಗರ್....ಹೆಲ್ಗಾಳನ್ನು ಯಾವುದಾದರೂ ಸುರಕ್ಷಿತತಾಣದಲ್ಲಿಡಬೇಕು ಅಷ್ಟೇ....ಎಲ್ಲಿ ಅವಳಿಗೆ ಮಾಫಿಯಾ ದಾಳಿ ತಗುಲದ ಪ್ರದೇಶ ಎಂಬುದು ನನಗಿನ್ನೂ ಅರ್ಥವಾಗುತ್ತಿಲ್ಲ" ಎಂದ ಮಹೇಶ.

ತಲೆಯಾಡಿಸಿದ ಸಿಂಗರ್, ಪರಿಸ್ಥಿತಿ ಅರ್ಥವಾಗಿತ್ತು. ಇಫ್ ಫ್ಯಾರ್, ನೆಸೆಸಿಟಿ ಬಂದರೆ ಹೆಲ್ಗಾಳನ್ನು ಒಂಟಿಯಾಗಿ ಬಿಟ್ಟು ಹೋದರೂ ಅವಳಿಗೇನೂ ಆಗದ ಗ್ಯಾರಂಟಿಯಿರುವ ಪ್ರದೇಶ ಬೇಕಾಗಿತ್ತು ಅರ್ಜೆಂಟಾಗಿ !

"ಮಹೇಶ್....ಕ್ಯಾಲಿಫೋರ್ನಿಯಾಗೆ ಹೋದರೆ...."

ಹುಬ್ಬುಗಳು ಹಣೆದುಂಬಿಕೊಳ್ಳುತ್ತಿದ್ದಂತೆ ಸಿಂಗರ್ ಐಡಿಯಾ ಏನೆಂದು ಅರ್ಥವಾಗಿತ್ತು ಮಹೇಶನಿಗೆ. ತನ್ನ ಅಪಾರ್ಟ್‌ಮೆಂಟ್ ಬಗ್ಗೆ ಹೇಳುತ್ತಿದ್ದಾನೆ ಸಿಂಗರ್ ಜೆನ್ನಿಯಂತೂ ಬಹಳ ಒಳ್ಳೆಯವಳು [illegible] ಏನಾದರೂ ಸಮಸ್ಯೆಯುಂಟಾದರೆ ಒಂದು ಫೀ ಮೇಲ್ ಹ್ಯಾಂಡ್ ಇರುವುದೂ ಒಳ್ಳೆಯದೇ ಅಂತಹ ವಾತಾವರಣದಲ್ಲಿ ಹೆಲ್ಗಾ ತನ್ನ ಮೇಲೆ ಅನುಮಾನವನ್ನು ತೋರಿಸಲಾರಳು !

"ವಾಟ್ ಡು ಯು ಸೇ ಮ್ಯಾನ್ ?" ಅವನ ಮೌನ ಅರ್ಥ ಮಾಡಿಕೊಳ್ಳಲಾಗದೆ ಕೇಳಿದ ಸಿಂಗರ್.

"ಗೋ ಅಹೆಡ್....ಅಲ್ಲಿಗೇ ಹೋಗೋಣ !" ಒಂದು ನಿರ್ಣಯಕ್ಕೆ ಬಂದು ಹೇಳಿದ ಮಹೇಶ.

"ಥ್ಯಾಂಕ್ಯೂ ಮಹೇಶ್....ಥ್ಯಾಂಕ್ಯೂ ವೆರಿ ಮಚ್ ! ಸಂತೋಷದೊಡನೆ ಕಾರಿನ ವೇಗ ಇನ್ನಷ್ಟು ಹೆಚ್ಚಿಸಿ ಮೆಲುವಾಗಿ ವಿಷಲ್ ಮಾಡತೊಡಗಿದ ಸಿಂಗರ್.

ಪ್ರಶಾಂತವಾಗಿದ್ದ ಹಿಲ್ ಏರಿಯಾದಲ್ಲಿನ ಅಂದವಾದ ಬಂಗಲೆಯೊಂದರ ವ್ಹೈಗೇಟ್ ಮುಂದೆ ನಿಂತಿತು ಕಾರ್.

ಕಾರಿನ ಹಾರ್ನ್ ಎರಡು ಸಲ ಮೊಳಗಿಸಿದ ಸಿಂಗರ್.

ಬಂಗಲೆಯ ಸುತ್ತಲೂ ಇದ್ದ ಸುಂದರವಾದ ಗಾರ್ಡನ್‌ನ ಒಂದು ಮೂಲೆಯಿಂದ ಓಡುತ್ತಾ ಬಂದು ವ್ಹೈಗೇಟ್ ತೆರೆದುಬಿಟ್ಟ ನೀಗ್ರೋಸರ್ವೆಂಟ್.

ಕಾರನ್ನು ಒಳಕ್ಕೆ ನಡೆಸಿದ ಸಿಂಗರ್.

"ಇದು ನಾನು ಹೊಸದಾಗಿಕೊಂಡ ವಿಲ್ಲಾ ಮಹೇಶ್... ನಿನ್ನ ಪ್ರೋತ್ಸಾಹದಿಂದ ಲೆಜಿಟಿಮೇಟ್ ಬಿಜಿನೆಸ್ ಗಿಳಿದು ಈ ಮಟ್ಟಕ್ಕೆ ಬಂದಿದ್ದೇನೆ" ಕಾರನ್ನು ಪೋರ್ಟಿಕೋದಲ್ಲಿ ನಿಲ್ಲಿಸಿ ಹೇಳಿದ ಸಿಂಗರ್.

ಅತ್ಯಾಧುನಿಕ ರೀತಿಯಲ್ಲಿ ಕಟ್ಟಿರುವ ವಿಲ್ಲಾ ಕ್ಷಣ ಪರಿಕಿಸಿದ ಮಹೇಶ, ಆಗಲೇ ಒಳಗಿಂದ ಇಬ್ಬರು ಮಕ್ಕಳು ಓಡೋಡಿ ಬಂದರು

"ಹಾಯ್ ಡ್ಯಾಡ್....!" ಕೆಳಕ್ಕಿಳಿದ ಸಿಂಗರ್ ಕುತ್ತಿಗೆಯನ್ನು ತಬ್ಬಿಕೊಂಡ ನಾಲ್ಕುವರೆ ವರ್ಷಗಳ ಪೋರ.

ಅವನಷ್ಟು ವೇಗವಾಗಿ ಓಡಿ ಬರಲಾಗದೆ ತಂದೆಯ ಸಾನಿಧ್ಯದಿಂದ ದೂರವಾದುದಕ್ಕೆ ಸಣ್ಣ ಮುಖ ಮಾಡಿಕೊಂಡು ನಿಂತಿದ್ದಳು ಮೂರು ವರ್ಷದ ಹಸುಳೆ ಅಷ್ಟು ದೂರದಲ್ಲಿ !

ಕೆಳಕ್ಕಿಳಿದ ಮಹೇಶ, ಹಸುಳೆ ಅವನನ್ನೇ ಕುತೂಹಲದೊಡನೆ ನೋಡಿದಳು. ನಗುತ್ತಾ ಕೈ ಚಾಚಿದ ಮಹೇಶ ಅವನನ್ನೇ ಓರೆಗಣ್ಣಿಂದ ನೋಡುತ್ತಾ ತಂದೆಯ ಹಿಂದಕ್ಕೆ ಸರಿದಳು ಪೋರಿ !

ಪುಟ್ಟ ಬೊಂಬೆಯಂತೆ ಸಣ್ಣ ಫ್ರಾಕ್‌ನಲ್ಲಿ ಮುದ್ದು ಮಾತುಗಳನ್ನಾಡುತ್ತಿರುವ ಆ ಹುಡುಗಿಯನ್ನು ನೋಡುತ್ತಿದ್ದರೇನೇ ಏನೋ ಒಂದು ರೀತಿಯ ಆನಂದ.

ಸಿಂಗರ್‌ನನ್ನು ಬಿಟ್ಟು ಮಹೇಶನ ಕಡೆಗೆ ತಿರುಗಿದ ಪೋರ.

"ಡ್ಯಾಡ್ ಹೂ ಈಸ್ ದಿಸ್ ?" ಸೊಂಟದ ಮೇಲೆ ಕೈಯಿಟ್ಟು ಮಹೇಶನನ್ನು ಮೇಲಿಂದ ಕೆಳಗಿನವರೆಗೆ ಪರೀಕ್ಷಿಸಿದ.

"ಗೆಸ್ ಮೈ ಸನ್....ಯಾರೋ ಹೇಳು ನೋಡೋಣ !" ಹೆಣ್ಣು ಮಗುವನ್ನು ಎತ್ತಿಕೊಂಡು ನಗು ಮುಖದೊಡನೆ ಹೇಳಿದ ಸಿಂಗರ್.

ಕ್ಷಣ ಆಲೋಚಿಸುವವನಂತೆ ಮುಖವಿಟ್ಟು, "ಮಹೇಶ್ ಅಂಕಲ್... ಗೊತ್ತಾಯಿತು.. ಡ್ಯಾಡಿ ಇಂದು ಬೆಳಿಗ್ಗೆ ಹೇಳಿದರು ಮಹೇಶ್ ಅಂಕಲ್ ಬರುತ್ತಾರೆಂದು... ಹಲೋ ಅಂಕಲ್ !" ದೊಡ್ಡ ಗಂಡಸಂತೆ ಕೈ ಚಾಚಿದ ಆ ಪೋರ

"ಹಲೋ ಡೇವ್ !" ತಾನೂ ಅವನಷ್ಟೇ ಸೀರಿಯಸ್ಸಾಗಿ ಅವನ ಕೈ ಹಿಡಿದ ಕುಲುಕಿದ ಮಹೇಶ. ತನ್ನ ಮಗನ ಹೆಸರು ಡೇವ್, ಮಗಳ ಹೆಸರು ಲೂಸಿ ಎಂದು ಬರುವಾಗ ಸಿಂಗರ್ ತಿಳಿಸಿದ್ದ.

"ಮಹೇಶನನ್ನು ಸ್ವಲ್ಪ ಒಳಗೆ ಬರಲು ಬಿಡುವಿರಾ....ಅಥವ ಬಾಗಿಲಲ್ಲೇ ಪರಿಚಯ ಮಾಡಿಸಿ ಹಾಗೇ ಕಳಿಸಿ ಬಿಡುವಿರಾ ?" ಮೃದುವಾದ ಧ್ವನಿಯೊಂದನ್ನು ಕೇಳಿ ತಲೆಯೆತ್ತಿದ ಮಹೇಶ.

ಬಾಗಿಲ ಬಳಿ ಮುಗುಳ್ನಗೆಯೊಡನೆ ನಿಂತಿದ್ದಳು ಜೇನಿ

"ಹಲೋ ಬ್ಯೂಟಿ ಫುಲ್ ಜೇನಿ ಹೌ ಆರ್ ಯು ?" ಅಂದ ಮಹೇಶ

"ಮೊದಲು ಒಳಗೆ ಬಾ ಬ್ರದರ್ ನಿಮ್ಮಿಬ್ಬರಿಗೆ ಬೆಳಿಗ್ಗೆಯಿಂದ ಕಾದೂ ಕಾದೂ ಬಸವಳಿದು ಹೋಗಿದೆ " ಕೋಪ ನಟಿಸುತ್ತಾ ಹೇಳಿದ್ದಳವಳು.

"ನಡಿ ಮ್ಯಾನ್ " ಮಹೇಶನ ಭುಜದ ಮೇಲೆ ಕೈಯಿಟ್ಟು ಒಳಗೆ ನಡೆದ ಹೋದ ಸಿಂಗರ್.

"ಸಿಂಗರ್ ವಾಟ್ ಎಬೌಟ್ ಹೆಲ್ಗಾ ?" ಕೇಳಿದ ಮಹೇಶ.

"ಓಹ್....ಮರೆತೇ ಹೋದೆ ಒಂದು ನಿಮಿಷ " ಹೇಳಿ ಹಿಂದೆ ತಿರುಗಿ ಗೋವಾ ಸರ್ವೆಂಟ್‌ನನ್ನು ಕೂಗಿದ ಸಿಂಗರ್.

ಅವನು ಬಂದಾಗ ಕಾರಿನ ಹಿಂದಿನ ಸೀಟಿನಲ್ಲಿದ್ದ ಪೆಟ್ಟಿಗೆಗಳನ್ನ

ತೋರಿಸಿ ಅವಳನ್ನು ಕೇರ್‌ಫುಲ್ಲಾಗಿ ಒಳಕ್ಕೆತ್ತಿಕೊಂಡು ಬರುವಂತೆ ಆದೇಶಿಸಿದ ನಂತರ ಎಲ್ಲರೂ ಒಳಕ್ಕೆ ನಡೆದರು.

ಆಮೇಲೆ ಎರಡು ಮೂರು ಗಂಟೆಗಳವರೆಗೆ ಹೊತ್ತು ಕಳೆದದ್ದೇ ತಿಳಿಯಲಿಲ್ಲ ಮಹೇಶನಿಗೆ.

ಜೇನಿಯ ಸ್ನೇಹ ಪೂರ್ವಕ ನಡವಳಿಕೆ, ಮಕ್ಕಳ ಮುದ್ದು ಮಾತುಗಳು....ಎಲ್ಲವನ್ನೂ ಮರೆತು ಬಿಟ್ಟಿದ್ದ ಅವನು.

"ನೀನು ನಿಜವಾಗಿಯೂ ಬರುತ್ತಿರುವೆಯೆಂದರೆ ನಂಬಲಾಗಲಿಲ್ಲ ನನಗೆ ಮಹೇಶ್... ಅಮೇರಿಕಾ ಮರೆತೇ ಬಿಟ್ಟೆಯೇನೋ ಅಂದುಕೊಂಡಿದ್ದೆ!" ಡೈನಿಂಗ್ ಟೇಬಲ್ ಸುತ್ತಲೂ ಕೂರುತ್ತಿರುವಾಗ ಹೇಳಿದ್ದಳು ಜೇನಿ.

ಮುಗುಳ್ನಕ್ಕನಷ್ಟೇ ಮಾತ್ರ ಆ ಮಾತಿಗೆ ಪ್ರತಿಕ್ರಿಯೆಯಾಗಿ ಮಹೇಶ.

ಸಾಕಷ್ಟು ಸಲ ಅಮೇರಿಕಾಗೆ ಬಂದಿದ್ದಾನವನು. ಅಸೈನ್‌ಮೆಂಟ್ ಮುಗಿಸಿಕೊಂಡೊಡನೆ ಜಾಗ ಖಾಲಿ ಮಾಡಿದ್ದಾನೆ ಅಪಾಯದೊಡನೆ ಸರಸವಾಡುವ ತನ್ನ ದಂಧೆಯಲ್ಲಿ ತನ್ನ ಸುತ್ತ-ಮುತ್ತ ಇರುವವರಿಗೂ ಆ ನೆರಳು ಸೋಕದಿರದು ಅದಕ್ಕೇ ಇಂತಹ ಸೆಂಟಿಮೆಂಟ್‌ಗಳನ್ನೆಲ್ಲಾ ಅವಾಯ್ಡ್ ಮಾಡುವವನೇ ಮಹೇಶ ಆದರೆ ಈ ಸಲ ವಿಧಿಯಿರಲಿಲ್ಲ.

ಹೆಲ್ಗಾ ಎಚ್ಚರಳಾಗಿ ಸುಮಾರಾಗಿ ಚೇತರಿಸಿಕೊಂಡರೂ ಮೊದಲಿಲ್ಲಿಂದ ಹೊರಟು ಬಿಡಬೇಕು ಗ್ಯಾಂಗ್ ವಾಚ್ ಡಾಗ್ಸ್ ದೃಷ್ಟಿ ಇತ್ತ ಹರಿಯುವುದರೊಳಗೆ ಆಗಿ ಬಿಡಬೇಕು ಆ ಕೆಲಸ!

"ಅದೇನು ಇದ್ದಕ್ಕಿದ್ದಂತೆ ಅಷ್ಟೊಂದು ಆಲೋಚನೆ?" ಸಿಂಗರ್ ಮಾತು ಅವನನ್ನು ಪ್ರಸ್ತುತಕ್ಕೆ ಕರೆತಂದಿತ್ತು.

ತಲೆಯಾಡಿಸಿದ ಮಹೇಶ, "ನಥಿಂಗ್ ಮೈ ಫ್ರೆಂಡ್... ಇಷ್ಟು ರುಚಿಯಾದ ಊಟ ತಿಂದು ಎಷ್ಟು ದಿನಗಳಾದವು ಏನು ಕಥೆ..." ಸೂಪ್ ಮುಂದಕ್ಕೆಳೆದುಕೊಂಡು ಕೈ ಬಾಯಿಗೆ ಕೆಲಸ ಕೊಟ್ಟ.

ಡಿನ್ನರ್ ಮುಗಿಸಿ ಇನ್ನರ್ಧ ಗಂಟೆ ಅದೂ ಇದೂ ಮಾತಾಡಿ ಕಾಲ ಕಳೆದು ನಂತರ ಜೇನಿ ತನಗಾಗಿ ರೆಡಿ ಮಾಡಿದ್ದ ಗೆಸ್ಟ್ ರೂಂನೊಳಕ್ಕೆ ನಡೆದ ಎಲ್ಲರಿಗೂ ಗುಡ್ ನೈಟ್ ಹೇಳಿ.

ಗಂಡನ ಕಡೆಗೆ ತಿರುಗಿದಳು ಜೀನಿ, "ಮಹೇಶ ಕರೆ ತಂದಿರುವ ಆ ಯುವತಿ ಯಾರು ಡಾರ್ಲಿಂಗ್ ! ಅವನನ್ನು ಕೇಳಿದರೆ ಏನಾದರೂ ಅಂದು ಕೊಂಡಾನು ಎಂದು ಕೇಳಲಿಲ್ಲ " ಕುತೂಹಲದೊಡನೆ ಕೇಳಿದಳು ಜೀನಿ.

"ಆಕೆ ಒಬ್ಬ ಪ್ರೊಫೆಸರ್ ಮಗಳು ಜೀನಿ ಅವಳ ತಂದೆಯನ್ನು ಯಾರೋ ಕಿಡ್ನಾಪ್ ಮಾಡಿ ಇವಳನ್ನೂ ಎತ್ತಿಕೊಂಡು ಹೋಗಲು ಪ್ರಯತ್ನಿಸಿದರು ಮಹೇಶ ಅವರನ್ನು ತಡೆದು ಅವಳ ಎಸ್ಕೇಪ ಮಾಡಿದ. ಎಚ್ಚರವಾದಳೇ ಅವಳು ?" ಕೇಳಿದ ಸಿಂಗರ್.

"ಇನ್ನೂ ಇಲ್ಲ !"

"ಎಲ್ಲಿದ್ದಾಳೆ ಅವಳು ?"

"ಮಹೇಶನ ಕೊಠಡಿಯಲ್ಲೇ !" ಹೇಳಿ ಮುಗುಳ್ನಕ್ಕಳು ಜೀನಿ.

## 6

# 6

ಕೊಠಡಿಯೊಳಕ್ಕೆ ಪ್ರವೇಶಿಸಿ ಡೋರ್ ಲಾಕ್ ಮಾಡಿದ ಮಹೇಶ. ಒಳ್ಳೆಯ ಊಟ ಹೊಟ್ಟೆಗೆ ಬಿದ್ದು ಕಣ್ಣುಗಳು ಎಳೆಯುತ್ತಿದ್ದವು. ಆದರೂ ನಿದ್ರೆಗಿಂತ ಮುಖ್ಯವಾದ ಕೆಲಸವೊಂದು ಬಾಕಿ ಉಳಿದಿತ್ತು.

ಕೊಠಡಿಯ ಮಧ್ಯದಲ್ಲಿ ಡಬಲ್ ಬೆಡ್ ಮೇಲೆ ಹೇಗೆ ಮಲಗಿದ್ದಳೋ, ಅದೇ ಭಂಗಿಯಲ್ಲಿದ್ದಳು ಹೆಲ್ಗಾ ಥೇಟ್ ಗೊಂಬೆಯಂತೆಯೇ.

ಒಂದು ಬದಿಯಲ್ಲಿದ್ದ ಫ್ರಿಜ್ ಕಡೆಗೆ ನಡೆದ ಮಹೇಶ. ವಾಟರ್ ಬಾಟಲ್ ಎತ್ತಿಕೊಂಡು ಬೆಡ್ ಬಳಿಗೆ ಬಂದ.

ಹೆಲ್ಗಾ ಗಾಬರಿಯಿಂದ ಮೂರ್ಛೆ ಹೋಗಿಲ್ಲವೆಂದು, ಅವಳ ಮೇಲೆ ಮತ್ತಿನೌಷಧಿಯನ್ನು ಪ್ರಯೋಗಿಸಿ ಸುಲಭವಾಗಿ ಎತ್ತಿಕೊಂಡು ಹೋಗಲು ಗ್ಯಾಂಗ್‌ನ ಮನುಷ್ಯರು ಪ್ರಯತ್ನಿಸಿದರೆಂದು ಕಾರಿನಲ್ಲಿದ್ದವರನ್ನು ನೋಡಿದಾಗಲೇ ಅರ್ಥ ಮಾಡಿಕೊಂಡಿದ್ದ ಮಹೇಶ. ಆದ್ದರಿಂದಲೇ ಅವಳನ್ನು ತಕ್ಷಣ ಎಚ್ಚರಿಸಲು ಪ್ರಯತ್ನಿಸಲಿಲ್ಲ. ಅವಳು ಆ ಔಷಧಿಯ ಪ್ರಭಾವದಿಂದ ದೂರಾಗಲು ಸ್ವಲ್ಪ ಸಮಯ ಬೇಕೇಬೇಕು.

ಬೆಡ್ ಅಂಚಿನಲ್ಲಿ ಕುಳಿತು ಬಾಟಲ್‌ನಲ್ಲಿದ್ದ ತಣ್ಣನೆಯ ನೀರನ್ನು ಅವಳ ಮುಖದ ಮೇಲೆ ಸಿಂಪಡಿಸಿ ಅವಳನ್ನು ಎಬ್ಬಿಸುವ ಪ್ರಯತ್ನದಲ್ಲಿ ತೊಡಗಿದ ಮಹೇಶ.

ಕಾಲು ಗಂಟೆಯ ಸತತ ಪ್ರಯತ್ನದ ನಂತರ ಮೆಲ್ಲಗೆ ಕದಲಿದಳು ಹೆಲ್ಗಾ. ಅವಳ ತುಟಿಗಳ ನಡುವೆ ವಾಟರ್ ಬಾಟಲ್ ಇರಿಸಿ ಸ್ವಲ್ಪ ನೀರು ಕುಡಿಸಿದ.

ನಿಮಿಷದ ನಂತರ ಕಣ್ರೆಪ್ಪೆ ಪಟಪಟಾಡಿಸಿ ಕಣ್ಣು ತೆರೆದಳು ಹೆಲ್ಗಾ

ಕಾಡಿರುವ ಚಿಂತೆ. ಇದ್ದ ಪರಿಸ್ಥಿತಿ ಅವಳನ್ನು ಕಳವಳಗೊಳಿಸಿ ಮೇಲೇಳಲು ಪ್ರಯತ್ನಿಸಿದಳು.

"ಗಾಬರಿಗೊಳ್ಳಬೇಡ ಹೆಲ್ಗಾ ನಿನಗಿಲ್ಲಿ ಯಾವುದೇ ತೊಂದರೆಯಾಗದು" ಮೃದುವಾಗಂದ ಮಹೇಶ

ಬೆಚ್ಚಿ ಬಿದ್ದು ಆಗಲೇ ಅವನನ್ನು ನೋಡಿದಂತೆ ನೋಡಿದಳವಳು.

"ನೀ....ನೀನ್ಯಾರು ?" ನಾನೆಲ್ಲಿದ್ದೇನೆ ?' ಸಣ್ಣ ದನಿಯಲ್ಲಿ ಕೇಳಿದಳು.

"ನಾನು ಶತ್ರುವಲ್ಲ....ನೀನಿರುವುದು ನನಗೆ ಸಂಬಂಧಿಸಿದವರ ಮನೆಯಲ್ಲೇ...." ತುಟಿಗಳ ಮೇಲೆ ನಗೆ ತಂದುಕೊಂಡು ಹೇಳಿದ ಮಹೇಶ.

"ಆದರೆ....ಆದರೆ ನಾನು ಇಲ್ಲಿಗೇಗೆ ಬಂದೆ ? ಅಮೇರಿಕನ್ ಆಫೀಸರ್ಸ್ ನನ್ನನ್ನು ಡ್ಯಾಡಿಯ ಬಳಿಗೆ ಕರೆದೊಯ್ಯಲು ಬಂದಿದ್ದರು. ಅಷ್ಟರಲ್ಲಿ...." ನಡೆದ ಘಟನೆಗಳು ನೆನಪಾಗಿ ಮುಖ ಕಳೆಗುಂದಿತು.

"ಅಷ್ಟರಲ್ಲಿ...." ಅವಳ ಮಾತನ್ನು ಕಂಟಿನ್ಯೂ ಮಾಡಿದ ಮಹೇಶ,

"ಕೆಲವು ದುಷ್ಟರು ನಿನ್ನನ್ನು ಕಿಡ್ನ್ಯಾಪ್ ಮಾಡಲು ಪ್ರಯತ್ನಿಸಿದರು ಅವರಿಂದ ಪಾರು ಮಾಡಿ ನಾನು ಇಲ್ಲಿಗೆ ಕರೆ ತಂದೆ" ವಿವರಿಸಿದ ಮಹೇಶ.

"ನೀನು.. ನೀನು ರಕ್ಷಿಸಿದೆಯಾ ? ಅದೇಕೆ ?"

"ನಾನು ಭಾರತ ಸರ್ಕಾರದ ಪರವಾಗಿ ನಿನ್ನ ತಂದೆಯ ಕ್ಷೇಮ ಕೋರಿ ಬಂದವನು ಹೆಲ್ಗಾ. ನಿಮ್ಮ ತಂದೆ ಭಾರತಕ್ಕೆ ಬರಲು ಸಿದ್ಧನಾಗಿ ನಮ್ಮ ಸರ್ಕಾರದ ಸಹಾಯ ಕೇಳಿದ್ದಕ್ಕಾಗಿ ನಾನು ಬಂದೆ....ನಿನಗೆ ಈ ವಿಷಯ ನಿಮ್ಮ ತಂದೆ ಎಂದಾದರೂ ಹೇಳಿರುತ್ತಾರೆಂದೇ ನನ್ನ ಭಾವನೆ" ಅಂದ ಮಹೇಶ.

ಎರಡು ಕ್ಷಣ ಮಾತಾಡದೆ ಮಹೇಶನ ಮುಖವನ್ನೇ ನೋಡುತ್ತಿದ್ದ ಬಿಟ್ಟಳು ಹೆಲ್ಗಾ, ಮಿಸುಕಾಡಿದ ಮಹೇಶ. ಇವಳು ತನ್ನ ಮಾತು ನಂಬದಿದ್ದರೆ ಸಮಸ್ಯೆ ದುಪ್ಪಟ್ಟಾಗುತ್ತದೆ ಹೆಲ್ಗಾ ಸಹಕಾರವಿಲ್ಲದೆ ನಾಪರ್ಸನ್ ವಿಷಯದಲ್ಲಿ ತಾನು ಒಂದು ಮಿಲಿಮೀಟರ್ ಮುಂದಕ್ಕೆ ಹೋಗುವಂತಿಲ್ಲ !

ಕೊನೆಗೆ ತುಟಿ ತೆರೆದಳು ಹೆಲ್ಗಾ. "ಡ್ಯಾಡಿ ಒಮ್ಮೆ ಹೇಳಿದ್ದರು ..

ರಹಸ್ಯವಾಗಿ ಇಲ್ಲಿಂದ ಭಾರತಕ್ಕೆ ಹೋಗಬೇಕಾಗಿ ಬರಬಹುದು ರೆಡಿಯಾಗಿರು ಎಂದು !"

ಈಗ ಹಿಡಿದಿದ್ದ ಉಸಿರು ಹೊರ ಚೆಲ್ಲಿದ ಮಹೇಶ ಆಗ, "ದಟೀಸಿಟ್ ಬೇಬಿ....ನಿನ್ನ ನಿಮ್ಮ ಡ್ಯಾಡಿಯನ್ನು ಕ್ಷೇಮವಾಗಿ ಭಾರತಕ್ಕೆ ಕರೆದುಕೊ ಡು ಹೋಗಲೆಂದೇ ಬಂದವನು ನಾನು ಆದರೆ....ನಾನು ಬರುವ ಮೊದಲೇ ನಿಮ್ಮ ಡ್ಯಾಡಿ ಅದೃಶ್ಯರಾಗಿದ್ದರ." ಅಂದ

"ಇಲ್ಲ....ನಮ್ಮ ಡ್ಯಾಡಿಯನ್ನು ತಮ್ಮ ಹೆಡ್ ಕ್ವಾರ್ಟರ್ಸ್‌ನಲ್ಲಿರಿಸಿ ಕೊಂಡಿರುವೆವೆಂದು ಸಿ.ಐ.ಎ. ಆಫೀಸರ್ಸ್ ತಿಳಿಸಿದರು !"

ತಲೆ ಅಡ್ಡಡ್ಡ ಆಡಿಸಿದ ಮಹೇಶ, "ದಟೀಸ್ ಫಾಲ್ಸ್ ಹೆಲ್ಗಾ ! ಸಾಮ್ಸನ್ ಎಲ್ಲಿದ್ದಾನೆಂದು ಅವರಿಗೂ ಗೊತ್ತಿಲ್ಲ....ನಿನ್ನ ಗಾಬರಿಗೊಳಿಸ ಬಾರದೆಂದು ಹಾಗೆ ಸುಳ್ಳು ಹೇಳಿದ್ದಾರಷ್ಟೇ !" ಅಂದ

"ಹಾಗಾದರೆ . ಡ್ಯಾಡಿಯನ್ನು ಯಾರಾದರೂ...." ಭೀತಿಯಿಂದ ಕಣ್ಣರಳಿಸಿ ಹೇಳಿದಳು ಹೆಲ್ಗಾ.

"ನೋ....ಯಾರೂ ನಿಮ್ಮ ಡ್ಯಾಡಿಯನ್ನು ಕಿಡ್ನ್ಯಾಪ್ ಮಾಡಲಿಲ್ಲ ಅಂತಹ ಕಿಡ್ನ್ಯಾಪಿಂಗ್‌ಗೆ ಸಿಗಬಾರದೆಂದೇ ಯಾವುದೋ ರಹಸ್ಯ ಪ್ರದೇಶದಲ್ಲಿ ತಲೆ ಮರೆಸಿಕೊಂಡಿದ್ದಾರೆ ನಿಮ್ಮ ಡ್ಯಾಡಿ ..."

"ಎಲ್ಲಿ....ಎಲ್ಲಿದ್ದಾರೆ ಡ್ಯಾಡಿ ?"

ಭುಜ ಎಗರಿಸಿದ ಮಹೇಶ,ಅದು ನಿನ್ನಿಂದಲೇ ತಿಳಿಯಬೇಕು ಹೆಲ್ಗಾ" ಅಂದ.

"ನನ್ನಿಂದಲೇ ?" ಉದ್ಗರಿಸಿದಳು ಹೆಲ್ಗಾ.

". ಕ್ವಿಕ್... ! ಕ್ಲಿಪ್ ಎಂಬ ವ್ಯಕ್ತಿಯ ಬಗ್ಗೆ ನಿನ್ನ ತಂದೆ ಎಂದಾ ದರೂ ತಿಳಿಸಿದ್ದರೇ ? ಅವನೆಲ್ಲಿರುವುದು ? ನಿಮ್ಮ ಡ್ಯಾಡಿಗೂ ಅವನಿಗೂ ಇರುವ ಸಂಬಂಧವೇನು ? ಈ ಪ್ರಶ್ನೆಗಳಿಗೆ ಕೇರ್‌ಫುಲ್ಲಾಗಿ ಆಲೋಚಿಸಿ ಉತ್ತರ ಹೇಳು !" ಬಹಳ ಮೃದುವಾಗಿ ಮಾತು ಮಾತಿಗೂ ನಡುವೆ ಬ್ರೇಕ್ ಕೊಟ್ಟು ಹೇಳಿದ ಮಹೇಶ.

ಹಣೆಯಲ್ಲಿ ನೆರಿಗೆ ಮೂಡಿಸಿದಳು ಹೆಲ್ಗಾ. ತೀವ್ರವಾಗಿ ಯೋಚಿಸು

ತ್ತಿರುವಂತೆ ಹುಬ್ಬುಗಳು ಹಣೆಯೇರಿಕೊಂಡವು. ಆತುರ ತಡೆದುಕೊಂಡು ಅವಳ ಉತ್ತರಕ್ಕಾಗಿ ಕಾಯುತ್ತಾ ಕುಳಿತ ಮಹೇಶ.

ಎರಡು ನಿಮಿಷದ ನಂತರ ಅವನ ಮುಖ ನೋಡಿದಳವಳು, "ಸಾರಿ.... ಕ್ಲಿಪ್ ಎಂಬ ಹೆಸರಿಂದೂ ಡ್ಯಾಡಿ ಬಾಯಲ್ಲಿ ಕೇಳಿಲ್ಲ ನಾನು !" ಅಂದಳು

o o o o

ಹತಾಶನಾದ ಮಹೇಶ. ಅವಳಿಂದ ಆ ಲೆಟರ್ ಓದಿದೆಂದು ಎಕ್ಸ್‌ಪೆಕ್ಟ್ ಮಾಡಿರಲಿಲ್ಲ ಅವನು. ಸಾಮರ್ಸ್‌ಗೆ ಕ್ಲಿಪ್ ಬರೆದಿರುವ ಲೆಟರ್ಸ್ ನೋಡಿ ಅವರಿಬ್ಬರ ನಡುವೆ ಒಳ್ಳೆಯ ಸ್ನೇಹವಿದೆಯೆಂದೂ ಆದ್ದರಿಂದ ಕ್ಲಿಪ್ ಬಗ್ಗೆ ಹೆಲ್ಗಾಗೆ ತಿಳಿದಿರುತ್ತದೆಂದು ಲೆಕ್ಕ ಹಾಕಿದ್ದ ಅವನು. ಆದರೀಗ ಹೆಲ್ಗಾಳ ನಕಾರಾತ್ಮಕ ಉತ್ತರದಿಂದ ಒರಿಜಿನಲ್‌ಗೆ ಬಂದಿತ್ತು ಪ್ರಾಬ್ಲಂ !

"ನನಗೆ ಬಹಳ ಸುಸ್ತಾಗುತ್ತಿದೆ....ಹಸಿವೂ ಕೂಡ" ಅಂದಳು ಹೆಲ್ಗಾ.

"ಒನ್ ಮಿನಿಟ್ !" ಮೇಲೆದ್ದು ಕೊಠಡಿಯಿಂದ ಹೊರ ನಡೆದ ಮಹೇಶ.

ಐದು ನಿಮಿಷಗಳ ನಂತರ ಡಿನ್ನರ್ ಟ್ರೇಯೊಡನೆ ಒಳ ಬಂದ.

ಬೆಡ್ ಮೇಲೆದ್ದು ಕುಳಿತಿದ್ದಳು ಹೆಲ್ಗಾ ಅಷ್ಟೊತ್ತಿಗೆ ಮತ್ತಿನ ಪ್ರಭಾವ ಇಳಿದಿದ್ದರೂ ಆಹಾರವಿಲ್ಲದ ಸುಸ್ತು ಅವಳಿಗೆ.

ಅವಳನ್ನು ಮಂಚದಿಂದ ಕೆಳಗಿಳಿಸಿ ಭುಜ ಹಿಡಿದು ಬಾತ್ ರೂಂವರೆಗೆ ಕರೆದೊಯ್ದು ಮಹೇಶ, "ಮುಖ ತೊಳೆದುಕೋ ಹೆಲ್ಗಾ...ಡೋಂಟ್ ವರಿ.... ಎವ್ರಿಥಿಂಗ್ ವಿಲ್ ಬಿ ಓ.ಕೆ. !" ಎಂದು ಭುಜ ತಟ್ಟಿದ.

ಕೃತಜ್ಞತೆ ಯ ನೋಟ ಬೀರಿ ಬಾತ್‌ರೂಂನೊಳಕ್ಕೆ ನಡೆದಳು ಹೆಲ್ಗಾ.

ಸೋಫಾದಲ್ಲಿ ಕುಳಿತು ಸಿಗರೇಟ್ ಹಚ್ಚಿಕೊಂಡ ಮಹೇಶ. ಈಗ ತನ್ನ ಸಮಸ್ಯೆ ಇನ್ನೂ ದೊಡ್ಡದಾಗಿದೆ. ಕ್ಲಿಪ್ ಯಾರೆಂದು ತಿಳಿಯುವುದು ಹೇಗೆ ? ಸಾಮರ್ಸ್ ಅವನ ಬಳಿಗೆ ಹೋಗಿದ್ದಾನೆಯೇ ? ಕ್ಲಿಪ್

ಅವನಿಗೆ ರಕ್ಷಣೆ ಕೊಟ್ಟು ತನ್ನ ಬಳಿ ಇರಿಸಿಕೊಂಡಿರಬಹುದೇ ? ಪ್ರಶ್ನೆಗಳು ತಲೆಯನ್ನು ಒಂದೇ ಸಮ ಕೊರೆಯುತ್ತಿದ್ದವು.

ಸಿಗರೇಟ್ ಮುಗಿಯುವ ವೇಳೆಗೆ ಬಾತ್‌ರೂಂನಿಂದ ಹೊರ ಬಂದಳು ಹೆಲ್ಗಾ. ತಣ್ಣನೆಯ ನೀರು ಬಿದ್ದು ಮುಖ ನಿರ್ಮಲವಾಗಿತ್ತು. ಡಿನ್ನರ್ ಪ್ಲೇಟ್ ರೆಡಿಯಾಗಿ ಜೋಡಿಸಿಟ್ಟ ಮಹೇಶ.

ಅವಳದನ್ನು ಮುಗಿಸಿ ಕಾಫಿ ಕಪ್ ಎತ್ತಿಕೊಳ್ಳುವವರೆಗೆ ಮಾತಾಡಲಿಲ್ಲ ಮಹೇಶ.

"ನಿಮಗೆ ಹೇಗೆ ಥ್ಯಾಂಕ್ಸ್ ಹೇಳುವುದೋ ಅರ್ಥವಾಗುತ್ತಿಲ್ಲ.... ಮಿಸ್ಟರ್...." ಅಂದಳು ಹೆಲ್ಗಾ.

"ಮಹೇಶ್ !" ಅಂದ ಮಹೇಶ

"ಮಹೇಶ್ !" ಆ ಹೆಸರು ಟಾನಿಕ್‌ನಂತೆ ಉಚ್ಚರಿಸಿದಳು ಹೆಲ್ಗಾ.

"ವೆಲ್....ಲೆಟಸ್ ಕಮ್ ಟು ದ ಪಾಯಿಂಟ್ ಲೇಡಿ ! ನಿಮ್ಮ ಡ್ಯಾಡಿಯ ಬಗ್ಗೆ ನನಗೆ ಸ್ವಲ್ಪ ವಿವರಗಳು ಬೇಕು. ದಯವಿಟ್ಟು ನಿನಗೆ ಗೊತ್ತಿರುವುದೆಲ್ಲಾ ಮುಚ್ಚಿಡದೆ ಹೇಳಿದರೆ ಮಾತ್ರ ನಿಮ್ಮ ಡ್ಯಾಡಿಯನ್ನು ಜೀವಂತವಾಗಿ ಮತ್ತೆ ನೋಡಲು ಸಾಧ್ಯ !" ಅಂದ ಮಹೇಶ

ಉಗುರುಗಳನ್ನೇ ತೀಕ್ಷ್ಣವಾಗಿ ನಿರುಕಿಸುತ್ತಾ ಐದು ಕ್ಷಣ ಮೌನವಾಗಿದ್ದಳು ಹೆಲ್ಗಾ. ಅಸಹನೆಯೊಡನೆ ಅವಳನ್ನೇ ನೋಡಿದ ಮಹೇಶ

"ನನಗೆ....ನನಗೆ ಡ್ಯಾಡಿಯ ಬಗ್ಗೆ ಹೆಚ್ಚಾಗಿ ಏನೂ ಗೊತ್ತಿಲ್ಲ... ಮಹೇಶ್ !" ಅವನ ತೀಕ್ಷ್ಣ ನೋಟಕ್ಕೆ ತಡಬಡಿಸುತ್ತಾ ಹೇಳಿದಳು ಹೆಲ್ಗಾ.

"ಅಂದರೆ....ನಿಮ್ಮಿಬ್ಬರ ನಡುವೆ ಕ್ಲೋಸ್‌ನೆಸ್ ಇರಲಿಲ್ಲವೇ ?"

"ಒಂದು ರೀತಿಯಲ್ಲಿ ಹೌದೆಂದೇ ಹೇಳಬೇಕು ಮೂಡಿ ಮನುಷ್ಯ ನನ್ನ ಡ್ಯಾಡಿ ಹೆಚ್ಚು ಮಾತಾಡುವವರಲ್ಲ ದಿನದಲ್ಲಿ ಒಂದೆರಡು ಗಂಟೆ ಅಪಾರ್ಟ್‌ಮೆಂಟ್‌ನಲ್ಲಿದ್ದರೆ ಹೆಚ್ಚು. ಆ ಸಮಯದಲ್ಲಿ ಏನೋ ಆಲೋಚನೆ ! ನಾನು ಮಾತಾಡಿಸಿದರೇನೆ ಅವರೂ ಹುಂ ತೆಗೆಯುತ್ತಿದ್ದುದು. ಒಂದು

ಸಲ ಮಾತ್ರ... ಹದಿನೈದು ದಿವಸಗಳಹಿಂದೆ ಅಮೇರಿಕಾದಲ್ಲಿರುವುದರಿಂದ ತನಗೆ ಮನಶ್ಶಾಂತಿ ಸಿಗದೆಂದು....ಇಲ್ಲಿ ಜೈಲಿನಲ್ಲಿರುವಂತಿದೆಯೆಂದು....ಬಹಳ ಬೇಗ ಯಾರಿಗೂ ತಿಳಿಯದಂತೆ ರಹಸ್ಯವಾಗಿ ಭಾರತಕ್ಕೆ ಹೋಗಲು ರೆಡಿಯಾಗಿ ರೆಂದರು....ಇಷ್ಟೇ! ಅದರ ವಿನಹ ಡ್ಯಾಡಿಯ ಬಗ್ಗೆ ನನಗಿನ್ನೇನೂ ಗೊತ್ತಿಲ್ಲ!" ಪೇಲವ ಧ್ವನಿಯಲ್ಲಿ ಹೇಳಿದಳು ಹೆಲ್ಗಾ.

ತಲೆ ಒ ದ ಮಹೇಶ, "ಸಾರ್ಜನ್‌ಗೆ ಯಾರಾದರೂ ಸ್ನೇಹಿತರಿ ದ್ದರೇ? ಅಟ್‌ಲೀಸ್ಟ್ ಒಬ್ಬರ ಬಗ್ಗೆಯಾದರೂ ನಿನ್ನ ಡ್ಯಾಡಿ ಎಂದೂ ಮಾತಾ ಡಿಲ್ಲವೇ?" ಕೇಳಿದ ಮಹೇಶ.

"ಡ್ಯಾಡಿಗೆ ಸ್ನೇಹಿತರಿರುವವರೇ ಇಲ್ಲವೇ ನನಗೆ ಗೊತ್ತಿಲ್ಲ. ಒಂಟಿತನ ವನ್ನೇ ಅವರೆಂದೂ ಇಷ್ಟ ಪಡುತ್ತಿದ್ದರು. ಚಿಕ್ಕವಳಾಗಿದ್ದಾಗ ಅವರೊಡನೆ ನಮ್ಮ ಮನೆಗೆ ಇಬ್ಬರು ವ್ಯಕ್ತಿಗಳು ಬರುತ್ತಿದ್ದರು. ಅವರೊಡನೆ ಡ್ಯಾಡಿ ಗಂಟೆಗಟ್ಟಲೆ ರೂಮಲ್ಲಿ ಮಾತಾಡುತ್ತಿದ್ದರು. ಆಮೇಲೆ ನಾವು ಅಮೇರಿ ಕಾಗೆ ಬಂದೆವು. ಆಮೇಲೆ ಅವರಿಬ್ಬರೂ ಡ್ಯಾಡಿಯನ್ನು ಭೇಟಿಯಾದ ನೆನ ಪಿಲ್ಲ" ಅಂದಳು ಹೆಲ್ಗಾ.

"ಅವರ ಹೆಸರೇನಾದರೂ ಗೊತ್ತೇ?" ನಿರುತ್ಸಾಹಪೂರ್ಣತೆಯೇ ಕೇಳಿದ ಮಹೇಶ.

"ಒಬ್ಬನ ಹೆಸರು ಮಾತ್ರ ಗೊತ್ತು....ನಾನು ಸಣ್ಣವಳಿದ್ದಾಗ ಆ ಹೆಸರು ಕೇಳಿ ವಿಚಿತ್ರ ಅನ್ನಿಸುತ್ತಿತ್ತು ನನಗೆ.... ಕೋಬ್ರಾ ಆ ಇಬ್ಬರಲ್ಲೊ ಬ್ಬನ ಹೆಸರು!" ಅಂದಳು ಹೆಲ್ಗಾ.

"ಕೋಬ್ರಾ!" ಕಣ್ಣು ಕಿರಿದಾಗಿಸಿದ ಮಹೇಶ. ಸಹಜ ಹೆಸರಲ್ಲ ಅದು. ಬಹುಶಃ ಪೆಟ್‌ನೇಮ್ ಇರಬೇಕು....ಆದರೆ ಸಾರ್ಜನ್‌ನ ಹಳೆಯ ಗೆಳೆಯನ ಈ ಹೆಸರು ತನಗೆಷ್ಟರ ಮಟ್ಟಿಗೆ ಉಪಯೋಗವಾದೀತು?

ಇನ್ನರ್ಧ ಡಝನ್ ಪ್ರಶ್ನೆಗಳನ್ನು ಕೇಳಿದ ಮಹೇಶ. ಎಲ್ಲದಕ್ಕೂ ಗೊತ್ತಿಲ್ಲ ಎಂದೇ ಹೆಲ್ಗಾ ಉತ್ತರ!

ಕೊನೆಗೆ ಲೊಚ ಗುಟ್ಟುತ್ತಾ ತಾನೇ ಮೇಲೆದ್ದ ಮಹೇಶ, "ಓ.ಕೆ. ಬೇಬಿ....ಟೇಕ್‌ರೆಸ್ಟ್! ಬೆಳಗ್ಗೆ ಭೇಟಿಯಾಗೋಣ. ಗುಡ್‌ನೈಟ್!" ಎಂದು ಹೇಳಿ ಹೊರ ನಡೆದ.

ಬಾಗಿಲೆಳೆದುಕೊಂಡು ಹಾಲ್‌ಗೆ ಬಂದ. ಹಾಲ್‌ನಲ್ಲಿ ಕುಳಿತು ಯಾವುದೋ ಟ್ಯಾಬ್ಲಾಯ್ಡ್ ತಿರುಗಿಸುತ್ತಿದ್ದ ಸಿಂಗರ್ ಹೆಜ್ಜೆಯ ಶಬ್ದಕ್ಕೆ ತಲೆಯೆತ್ತಿ ನೋಡಿದ, "ಎನಿ ಡೆವಲಪ್‌ಮೆಂಟ್ ?" ಕೇಳಿದ.

"ನಥಿಂಗ್ !" ಅವನ ಪಕ್ಕದಲ್ಲೇ ಕುಕ್ಕರಿಸಿದ ಮಹೇಶ. "ಸಿಂಗರ್ ಭಾಯ್....ಹದಿನೈದು ವರ್ಷಗಳ ಹಿಂದೆ ನಡೆದ ಕೆಲವು ಘಟನೆಗಳ ಡೀಟೈಲ್ಸ್ ಬೇಕು ನನಗೆ ಅವು ಸಿಕ್ಕರೆ ಮಾತ್ರ ಈ ಸಮಸ್ಯೆಯ ಗಂಟು ಬಿಚ್ಚಲು ಸಾಧ್ಯ."

# 7

ಕಣ್ಣುಗಳಲ್ಲಿ ಉಸುಕು ಸೇರಿರುವಂತೆ ಒಂದೇ ಉರಿ. ಸಿಗರೇಟ್ ಸೇದಿ ಸೇದಿ ಬಾಯೆಲ್ಲಾ ಅದೊಂದು ರೀತಿಯಾಗಿತ್ತು. ಡಾಟ್ಸನ್ ಹಿಂದಿನ ಸೀಟಿನಲ್ಲಿ ಕುಳಿತು ಸಿಂಗರ್‌ಗಾಗಿ ಕಾಯುತ್ತಿದ್ದ ಮಹೇಶ.

ಇನ್ನೂ ಪೂರ್ಣ ಬೆಳಗಾಗಿರಲಿಲ್ಲ. ಕ್ಯಾಲಿಫೋರ್ನಿಯಾದಿಂದ ನ್ಯೂಯಾರ್ಕ್ ತಲುಪಲು ಇಡೀ ರಾತ್ರಿ ಹಿಡಿದಿತ್ತು. ರಸ್ತೆಗಳೆಲ್ಲ ನಿರ್ಜನ ನಿಃಶಬ್ದವಾಗಿದ್ದವು. ಡಾಟ್ಸನ್ ನಿಂತಿರುವ ಬೀದಿಯಲ್ಲಿ ಕಸಕಡ್ಡಿ ರಸ್ತೆಯಲ್ಲೆಲ್ಲಾ ಚೆಲ್ಲಾಡಿ ನೋಡಲೇ ಅಸಹ್ಯವಾಗಿತ್ತು. ಬಹಳ ಮಂದಿಗೆ ಗೊತ್ತಿಲ್ಲದ ಆ ಸ್ಲಂ ಏರಿಯಾದಲ್ಲಿ ಅತಿ ಮುಖ್ಯವಾದ ವ್ಯಕ್ತಿಯೊಬ್ಬನನ್ನು ಹುಡುಕಿಕೊಂಡು ಬಂದಿದ್ದರವರು. ಶಿಥಿಲಾವಸ್ಥೆ ತಲುಪಿರುವ ಕಟ್ಟಡಗಳನ್ನು ನೋಡುತ್ತಾ ಕಾಲ ಕ್ಷೇಪ ಮಾಡುತ್ತಿದ್ದ ಮಹೇಶ.

ಐದಾರು ನಿಮಿಷಗಳ ನಂತರ ಕಾರು ಹೋಗಲಾಗದ ಇರುಕು ಸಂದಿಯೊಂದರಿಂದ ಹೊರ ಬಂದ ಸಿಂಗರ್ ಏನಾಯಿತೆಂದು ಅವನಿಗೆ ಕೇಳುವ ಮೊದಲೇ ತಮಗೆ ಬೇಕಾದ ವ್ಯಕ್ತಿ ಅಲ್ಲಿಲ್ಲವೆಂದು ಅರ್ಥವಾಗುತ್ತಿತ್ತು ಮಹೇಶನಿಗೆ.

"ರಾತ್ರಿಯ ಶ್ರಮಕ್ಕೆ ಸರಿಯಾದ ಫಲಿತಾಂಶವಿಲ್ಲ ಮ್ಯಾನ್! ಆ ಬ್ರಡಿ ಈ ಡಿಯುಟ್ ಟೆಂಟನ್ನು ಬಿಟ್ಟಿದ್ದಾನೆ!" ನಿರಾಶೆಯೊಡನೆ ಡ್ರೈವಿಂಗ್ ಸೀಟ್ ಆಕ್ರಮಿಸಿ ಕಾರು ಸ್ಟಾರ್ಟ್ ಮಾಡುತ್ತಾ ಕಾಮೆಂಟ್ ಮಾಡಿದ ಸಿಂಗರ್.

ಮನಸ್ಸಿನೊಂದು ಮೂಲೆಯಲ್ಲೆಲ್ಲೋ ಮಿಣುಕ್ ಮಿಣುಕ್ ಎನ್ನುತ್ತಿದ್ದ

ಕೊನೆಯ ಆಶಾ ಜ್ಯೋತಿಯೂ ನಂದಿ ಹೋಗಿತ್ತು ! ಯಾವುದೇ ಆಧಾರವಿಲ್ಲದ ಡೆಡ್ ಎಂಡ್ ತಲುಪಿ ಬಿಟ್ಟಿರುವೆ ನಾನು ! ಸಾರ್ಗನ್ ಸುಳಿವು ಸಿಗಲಾರದೆ ಇನ್ನು ?

ಎರಡು ಸಲ ಬರ್ರ್ ಬರ್ರ್...ಎಂದು ಸೌಂಡ್ ಮಾಡಿ ಕಾರು ಸ್ಟಾರ್ಟಾಗದಿದ್ದಾಗ, "ಛೇ....ಡಬ್ಬಾ ರೋಗ ಬಂತೆ !" ಎಂದು ಸಿಡುಕುತ್ತಾ ಕೆಳಗಿಳಿದ ಸಿಂಗರ್.

ಅದೇ ಕ್ಷಣದಲ್ಲೇ ಸಿಂಗರ್ ಆಗಲೇ ಬಂದಿದ್ದ ಹಾದಿಯೆಡೆಗಿಂದ ತನ್ನ ಕಡೆಗೆ ಅಂಗಾತುರವಾಗಿ ಬರುತ್ತಿರುವ ಆಕಾರವೊಂದು ಮಹೇಶನ ಕಣ್ಣಿಗೆ ಬಿದ್ದಿತು. ಆ ನಡಿಗೆ ನೋಡಿ ಬೆಚ್ಚಿಬಿದ್ದ ಮಹೇಶ. ಅಯಾಚಿತವಾಗಿ ಅವನ ಕೈ ಡೋರ್ ಮೇಲೆ ಬಿತ್ತು. ಅವನು ಕಾರಿನಿಂದ ಕೆಳಕ್ಕೆ ಹಾರುವ ವೇಳೆಗೆ ಆ ವ್ಯಕ್ತಿ ಕಾರು ಸಮೀಪಿಸಿದ್ದ.

"ಫಾಕ್ಸ್ !" ಮೂಳೆಯ ಮೇಲೆ ಚರ್ಮ ಅಂಟಿಸಿರುವಂತೆ ಕಾಣುವ ಆ ಮುದಿ ಕೋಲಿನಂತಿದ್ದ ವ್ಯಕ್ತಿ ಹತ್ತಿರವಾದೊಡನೆ ಸಂತಸ ಉದುವಿಡಿದು

ಆ ಕೂಗಿಗೆ ಬಂದ ವ್ಯಕ್ತಿಯೇ ಅಲ್ಲ...ಬಾನೆಟ್ ತೆರೆದು ಎಂಜಿನ್ ಚೆಕ್ ಮಾಡುತ್ತಿದ್ದ ಸಿಂಗರ್ ಸಹ ಬೆಚ್ಚಿ ತಲೆ ಮೇಲೆತ್ತಿದ.

"ಹೂ ಇಸ್ ಹಿ ಫ್ರೆಂಡ್ ಮಹೇಶ್....ನನ್ನ ಬಗ್ಗೆ ವಿಚಾರಿಸುತ್ತಿರುವನು ನೀನೇನಾ ? ಗುಡ್ ಗಾಡ್....ಸ್ವಲ್ಪದರಲ್ಲಿ ಮಿಸ್ ಆಗಿ ಬಿಡುತ್ತಿದ್ದೆನಲ್ಲ...." ಒಳಕ್ಕೆ ಹೋಗಿದ್ದ ಫಾಕ್ಸ್ ಕಣ್ಣುಗಳಲ್ಲಿ ಮಿಂಚಿನ ಸೆಳಕು ಮಹೇಶ ಕಾಣಿಸಿದೊಡನೆ.

"ಫಾಕ್ಸ್...ನೀನಿಲ್ಲೇ ಇರುವೆಯಾ.. ನಿನ್ನ ಬಗ್ಗೆ ವಿಚಾರಿಸಿದರೆ ಇಲ್ಲಿ ನೀನಿಲ್ಲವೆಂದು ಹೇಳಿದರಲ್ಲ ಮನೆ ಓನರ್ !" ಅನ್ನುತ್ತಾ ಮುಂದೆ ಬಂದ ಸಿಂಗರ್.

"ಓಹ್ ನೀನಾ...ಸಿಂಗರ್...ಮೈ ಓಲ್ಡ್ ಫ್ರೆಂಡ್ !" ಅಂದ ಫಾಕ್ಸ್.

"ಹೌದು ಫಾಕ್ಸ್...ಸಿಂಗರ್ರೇ ! ನಿನಗಾಗಿ ತಲೆ ಕೆಳಗೆ ಮಾಡಿ ತಪಸ್ಸು ಮಾಡುತ್ತಿರುವಾಗ ಇದ್ದೂ ಇಲ್ಲದಂತಾಗುವುದು ಯಾವ ನ್ಯಾಯ?"

ಅವನ ಭುಜದ ಮೇಲೆ ಕೈ ಹಾಕಿ ನಗುತ್ತಾ ಕೇಳಿದ ಸಿಂಗರ್.

ಒಳಕ್ಕೆ ಹೋಗಿದ್ದ ಕೆನ್ನೆ ಉಬ್ಬಿ ಬರುವಂತೆ ನಕ್ಕ ಫಾಕ್ಸ್. "ನಿನಗೆ ಗೊತ್ತಿಲ್ಲವೆಂದುಕೊಳ್ಳುವೆ ಸಿಂಗರ್... ಈ ಮಧ್ಯದಲ್ಲಿ ನನಗೆ ಶತ್ರುಗಳು ಹೆಚ್ಚಾಗಿ ಬಿಟ್ಟಿದ್ದಾರೆ. ಯಾವ ಕ್ಷಣದಲ್ಲಿ ಯಾರು ನನ್ನ ಮೇಲೆ ಕಳಿಸುವರೋ ಎಂಬ ಸಸ್ಪೆನ್ಸ್‌ನಲ್ಲಿದೆ ನನ್ನ ಜೀವನ. ಆದ್ದರಿಂದಲೇ ನನಗಾಗಿ ಯಾರೇ ಬಂದರೂ ಇಲ್ಲವೆಂದೇ ಹೇಳುತ್ತಾಳೆ ಲ್ಯಾಂಡ್ ಲೇಡಿ....ನಾನು ಮರೆಯಲ್ಲಿ ಬಂದವರನ್ನು ನೋಡಿದ ಮೇಲೆಯೇ ಹೊರಗೆ ತಲೆಹಾಕುವುದು! ಆದಿರಲಿ... ಎತ್ತ ಕಡೆಗೆ ಪ್ರಯಾಣ ?" ಕೇಳಿದ

"ಇಲ್ಲ....ಹಾಯಾಗಿ ಯಾವುದಾದರೂ ಹೋಟೆಲ್‌ನಲ್ಲಿ ಹಾಟ್ ಕಾಫಿ ಸಿಪ್ ಮಾಡುತ್ತಾ ಗಾಸಿಪ್ ಮಾಡುವಾ! ಕಾರಹತ್ತು ಫ್ರೆಂಡ್..." ಅನ್ನುತ್ತಾ ಕಾರ್ ಡೋರ್ ತೆರೆದ ಸಿಂಗರ್.

ತಲೆಯಾಡಿಸಿ ಸಿಂಗರ್ ಪಕ್ಕದಲ್ಲೇ ಆಸೀನನಾದ ಫಾಕ್ಸ್

ಅಷ್ಟೇನೂ ಜನ ಸಂದಣಿಯಿಲ್ಲದ ಹೋಟೆಲೊಂದನ್ನು ಸೆಲೆಕ್ಟ್ ಮಾಡಿ ಅದರ ಮುಂದೆ ಕಾರು ನಿಲ್ಲಿಸಿದ ಸಿಂಗರ್. ಮೂವರು ಮೂಲೆಯ ಟೇಬಲ್ ಆಕ್ರಮಿಸಿಕೊಂಡ ಮೇಲೆ ಬ್ರೇಕ್ ಫಾಸ್ಟ್ ಆರ್ಡರ್ ಮಾಡಿದ ಮಹೇಶ.

ಸಿಂಗರ್ ಪಕ್ಕದಲ್ಲಿ ಕುಳಿತು ಏನೋ ಕಥೆ ಹೇಳುತ್ತಿದ್ದ ಫಾಕ್ಸ್.

ಅವನ ವಯಸ್ಸೆಷ್ಟೇ ಎಂದು ಖಚಿತವಾಗಿ ಹೇಳಲಾಗದು. ಸಡಿಲ ಸೂಟ್‌ನಲ್ಲಿರುವ ಅವನ ಬಡಕಲು ಶರೀರ, ಗ್ರೇ ಹೇರ್ಸ್ ನೋಡಿ ಐವತ್ತೆನ್ನ ಬಹುದೇನೋ ಯಾರಾದರೂ! ಆದರೆ ಆ ಗೆಸ್ಸಿಂಗ್ ತಪ್ಪು. ಜಸ್ಟ್ ಥರ್ಟಿ ಫೈವ್ ಇಯರ್ಸ್ ಓಲ್ಡ್ ಮ್ಯಾನ್ ಈ ಫಾಕ್ಸ್! ಆದರೆ....ಯಾರೂ ನಂಬರು!

ಫಾಕ್ಸ್....ಅದವನ ನೈಜ ಹೆಸರಲ್ಲ ಗೋಲ್ಡನ್ ಗ್ಯಾಂಗ್‌ನಲ್ಲಿ ಕೆಲವರಿಟ್ಟ ನಿಕ್ ನೇಮ್. ಅಮಾಯಕನಂತೆ ಕಾಣುವ ಫಾಕ್ಸ್ ಎಷ್ಟು ಡೇಂಜರಸ್ ಎಂಬುದು ಕೆಲವರಿಗೆ ಮಾತ್ರ ತಿಳಿದಿರುವ ಸತ್ಯ! ಎಷ್ಟೇ ಡೇಂಜ

ರಶ್ ಪೊಸಿಷನ್‌ದಲ್ಲಿದ್ದರೂ ತುಸುವಾದರೂ ಷೇಕ್ ಆಗುವವನಲ್ಲ ಫಾಕ್ಸ್.

ಅವನೊಬ್ಬ ಸುದ್ದಿ ಸಂಗ್ರಹಕಾರ ! ಅವನಿಗೆ ದೇವರು ಕೊಟ್ಟ ವರ ಜ್ಞಾಪಕ ಶಕ್ತಿ. ಎಷ್ಟು ವರ್ಷಗಳಾದರೂ, ಯಾವುದೇ ಮಾಹಿತಿಯಾದರೂ ನೆನಪಿಟ್ಟುಕೊಳ್ಳುವ ಕೆಪಾಸಿಟಿ ಅವನ ಮಿದುಳಿಗಿತ್ತು. ಯಾರಿಗೂ ಗೊತ್ತಿಲ್ಲದ ಎಷ್ಟೋ ವಿಷಯಗಳು ಅವನಿಗೇಗೆ ಗೊತ್ತೆಂದು ಯಾರಿಗೂ ಗೊತ್ತಿಲ್ಲ....ಆದರೆ ಅವನು ಮಾತ್ರ ತಿಳಿಸುತ್ತಿಲ್ಲ ! ಬೆಲೆಬಾಳುವ ಆ ಮಾಹಿತಿಗಳನ್ನು ಇಷ್ಟಿಷ್ಟು ಬೆಲೆಗೆ ಮಾರುವುದೇ ಅವನ ದಂಧೆ !

ಕ್ರಿಮಿನಲ್ ವರ್ಲ್ಡ್‌ನಲ್ಲಿ, ಸ್ಪೈ ವರ್ಲ್ಡ್‌ನಲ್ಲಿ ಅವನ ಬಗ್ಗೆ ತಿಳಿಯದವರಿಲ್ಲವೆಂದೇ ಹೇಳಬೇಕು....ಅಂದರೆ ಟಾಪ್ ಲೆವಲ್‌ನವರು ಮಾತ್ರ !

ಬ್ರೇಕ್ ಫಾಸ್ಟ್ ಬಂತು. ಗ್ರೀಡಿಯಾಗಿ ಬ್ರೇಕ್ ಫಾಸ್ಟ್ ಮೇಲೆ ಧಾಳಿಯಿಟ್ಟ ಫಾಕ್ಸ್. ಸ್ಯಾಂಡ್ ವಿಚ್ ಅಗಿಯುತ್ತಾ ಮಹೇಶನ ಕಡೆ ನೋಡಿದ. ಕಿರುನಗೆಯೊಂದಿಗೆ ಎರಡನೇ ಪ್ಲೇಟ್ ಸಹ ಅವನ ಕಡೆಗೆ ತಳ್ಳಿ ಬರೀ ಕಾಫಿ ಮಾತ್ರ ತೆಗೆದುಕೊಂಡ ಮಹೇಶ.

ಬ್ರೇಕ್ ಫಾಸ್ಟ್ ಮುಗಿದ ಮೇಲೆ ಸಿಗರೇಟ್ ಹಚ್ಚಿ ಹುಬ್ಬು ಕುಣಿಸಿದ ಫಾಕ್ಸ್. "ಥ್ಯಾಂಕ್ಸ್ ಚಂಕ್' ಮೈ ಫ್ರೆಂಡ್'....ನಿನಗೇನು ಮಾಹಿತಿ ಬೇಕು ?" ಆತುರದೊಡನೆ ಕೇಳಿದ.

"ಬಹಳ ಹಳೆಯ ಘಟನೆಗಳ ವಿವರಗಳು ಬೇಕು ಫಾಕ್ಸ್....ಅಲ್ ಮೋಸ್ಟ್ ಹದಿನೈದು ವರ್ಷಗಳ ಹಿಂದೆ ಜರ್ಮನಿಯಿಂದ ನಾರ್ಮನ್ ಎಂಬ ಸೈಂಟಿಸ್ಟ್ ತನ್ನ ಮಗಳೊಡನೆ ಅಮೇರಿಕಾಗೆ ಬಂದ. ಅವನ ವಿವರಗಳು ಬೇಕು !" ಅಂದ ಮಹೇಶ

ಸಿಗರೇಟ್ ಹೊಗೆ ಎದೆತುಂಬಾ ತುಂಬಿಕೊಂಡು ಕಣ್ಣು ಕಿರಿದುಗೊಳಿಸಿ "ನಾರ್ಮನ್ !" ಎಂದು ತನ್ನಷ್ಟಕ್ಕೆ ತಾನೇ ಗೊಣಗಿಕೊಂಡ ಫಾಕ್ಸ್.

ಅವನ ಉತ್ತರಕ್ಕಾಗಿ ಬಕ ಪಕ್ಷಿಯಂತೆ ಕಾಯತೊಡಗಿದ ಮಹೇಶ

ಕಣ್ಣು ಮುಚ್ಚಿ ಕೂರು ಬೆರಳೊಡನೆ ತಾಳ ಹಾಕತೊಡಗಿದ್ದ ಫಾಕ್ಸ್. ಎರಡು ನಿಮಿಷಗಳ ನಂತರ ಕಣ್ಣು ತೆರೆದ.

"ಕಿಲ್‌ಮಾಸ್ಟರ್ ನಾವರ್ಸ್ ಜರ್ಮನಿಯಿಂದ ಅಮೇರಿಕಾಕ್ಕೆ ಇಷ್ಟಪಟ್ಟು ಬಂದವನಲ್ಲ. ಬಲವಂತವಾಗಿ ಕರೆತರಲ್ಪಟ್ಟವ....ಅವನೊಡನೆ ಇನ್ನಿಬ್ಬರು ಸ್ಪೆಷಲಿಸ್ಟ್‌ಗಳನ್ನೂ ಕರೆತರಲಾಯಿತು. ಅವರಲ್ಲೊಬ್ಬನ ಹೆಸರು ಕ್ಲಿಪ್ ! ಇನ್ನೊಬ್ಬ ಚೇಸರ್ ! ಮೂವರನ್ನು ಸೀಕ್ರೆಟ್ಟಾಗಿ ಜರ್ಮನಿಯಿಂದ ಇಲ್ಲಿಗೆ ಸಾಗಿಸಿತು ಸಿ.ಐ.ಎ. ಕ್ಲಿಪ್ ಅಮೇರಿಕಾ ಬಂದ ವರ್ಷದಲ್ಲೇ ಸತ್ತು ಹೋದ...."

"ಅಬ್ಸರ್ಡ್ !" ಅಯಾಚಿತವಾಗಂದ ಮುಕೇಶ.

"ವಾಟ್ ಡು ಯು ಮೀನ್ ಫ್ರೆಂಡ್....ನನ್ನ ಮಾಹಿತಿ ತಪ್ಪೆಂದೇನು ನಿನ್ನ ಭಾವನೆ ? ಕ್ಲಿಪ್ ಸತ್ತದ್ದು ನನಗೆ ಚೆನ್ನಾಗಿ ಗೊತ್ತು ಏಕೆ ಗೊತ್ತೇನು ಅವನ ಫ್ಯೂನರಲ್‌ಗೆ ನಾನೂ ಹೋಗಿದ್ದೆ ! ಆ ವೇಳೆಯಲ್ಲಿ ಕ್ಲಿಪ್ ಗೋಲ್ಡ್ ಗ್ಯಾಂಗ್ ಹೆಲ್ಪಿನಿಂದ ಬೇರೆ ದೇಶಕ್ಕೆ ಪರಾರಿಯಾಗಬೇಕೆಂದಿದ್ದ. ಆದ್ದರಿಂದಲೇ ಅವನ ಬಗ್ಗೆ ನನಗೆಲ್ಲಾ ವಿವರಗಳೂ ಗೊತ್ತು ಹಿ ಈಸ್ ಡೆಡ್ !" ಅಂದ ಫಾಕ್ಸ್.

"ವೆಲ್....ಚೇಸರ್ ಏನಾದ ?"

"ಅವನಿನ್ನೂ ಬದುಕಿದ್ದಾನೆ....ಅವನು ಕೇವಲ ಎಲೆಕ್ಟ್ರಾನಿಕ್ಸ್‌ಗೆ ಸಂಬಂಧಿಸಿದ ಸೈಂಟಿಫಿಕ್ ರಿಸರ್ಚ್‌ನಲ್ಲಿ ಮಾತ್ರ ಅನುಭವವಿದ್ದವನಾದ್ದರಿಂದ ತಮಗೇನೂ ಉಪಯೋಗವಿಲ್ಲವೆಂದು ಸ್ವಲ್ಪ ದಿನಗಳ ನಂತರ ತಮ್ಮ ಕಸ್ಟಡಿಯಿಂದ ಅವನನ್ನು ಬಿಟ್ಟು ಬಿಟ್ಟರು ಸಿ ಐ ಎ ನವರು....ಹಿ ಈಸ್ ಇನ್ ವಾಷಿಂಗ್ಟನ್....ಬಹಳ ಪ್ರಶಾಂತ ಜೀವನ ನಡೆಸುತ್ತಿರುವನೆಂದು ಕೇಳಿದೆ...."

"ಕೋಬ್ರಾ....ಎಂಬುವವನ ಬಗ್ಗೆ ಏನಾದರೂ ಗೊತ್ತೇ ?"

"ನೋ....!" ಸ್ವಲ್ಪ ಹೊತ್ತಿನ ನಂತರ ನುಡಿದ ಫಾಕ್ಸ್.

"ಆಲ್ ರೈಟ್....ಚೇಸರ್‌ನ ಪರ್ಫೆಕ್ಟ್ ವಿಳಾಸಬೇಕು !"

ಚಕಚಕ ಅವನು ಹೇಳಿದನ್ನು ಮನದಲ್ಲೇ ನೋಟ್ ಮಾಡಿಕೊಂಡ ಮಹೇಶ. ಪರ್ಸ್ ತೆಗೆದ ಥೌಸಂಡ್ ಡಾಲರ್ಸ್ ನೋಟೊಂದನ್ನು ಅವನ ಕೈನಲ್ಲಿಟ್ಟು, "ಥ್ಯಾಂಕ್ಯೂ ಥಾಕ್ಸ್ !" ಅನ್ನುತ್ತಾ ಸಿಂಗರ್‌ಗೆ ಸನ್ನೆ ಮಾಡಿದ.

"ಯೂ ಆರ್ ವೆಲ್ ಕಂ ಟು....ಎನಿ ಟೈಂ....ಎನಿ ಪ್ಲೇಸ್ !" ಅಂದ ಥಾಕ್ಸ್.

ಅವನಿಗೆ ಕೈ ಬೀಸಿ ಮಹೇಶನ ಹಿಂದೆ ನಡೆದ ಸಿಂಗರ್.

"ಇವನ ಭೇಟಿಯಾದ್ದರಿಂದ ಏನಾದರೂ ಉಪಯೋಗವಾಯಿತೇ ಮಹೇಶ್ !" ಅವನ ಪಕ್ಕದಲ್ಲೇ ನಡೆಯುತ್ತಾ ಕೇಳಿದ.

"ಕಾಂಟ್ ಸೇ ನೌ ಸಿಂಗರ್....ವಾಷಿಂಗ್ಟನ್‌ನಲ್ಲಿ ಜೇಸನ್ ಎಂಬ ದೊಡ್ಡ ಮನುಷ್ಯನನ್ನು ಭೇಟಿಯಾಗುವವರೆಗೆ ಏನೂ ಹೇಳಲಾಗದು.... ಅವನೇನು ಹೇಳುವನೋ ನೋಡೋಣ" ಡಾಕ್ಸಿ ಕಡೆಗೆ ನಡೆದ ಮಹೇಶ

ತಾನು ಕಾರು ಹತ್ತಿ ಸ್ಟಾರ್ಟ್ ಮಾಡಿದ ಸಿಂಗರ್. ಅವರ ಕಾರು ಪೈರ್ ರೋಡ್ ಪ್ರವೇಶಿಸುತ್ತಿದ್ದಂತೆ ಸೂರ್ಯ ಕಾಣಿಸಿಕೊಳ್ಳ ತೊಡಗಿದ. ವಾಷಿಂಗ್ಟನ್ ಕಡೆಗೆ ವೇಗವಾಗಿ ಧಾವಿಸ ತೊಡಗಿತು ಡಾಕ್ಸಿ.

# 8

ಮಹೇಶನನ್ನು ವಾಷಿಂಗ್‌ಟನ್‌ನಲ್ಲಿ ಬಿಟ್ಟು ಕ್ಯಾಲಿಫೋರ್ನಿಯಾಗೆ ಪ್ರಯಾಣಿಸಿದ. ಸಿಂಗರ್ ಮಹೇಶನ ಒತ್ತಡದಿಂದಾಗಿ ಹೆಲ್ಗಾಳನ್ನು ಒಂಟಿಯಾಗಿ ಬಿಡಲಿಚ್ಛಿಸದೆ ಸಿಂಗರ್‌ನನ್ನು ಕಳಿಸಿದ್ದ ಮಹೇಶ.

ಜೇಸನ್ ಬಗ್ಗೆ ಎಲ್ಲಾ ವಿಷಯಗಳನ್ನು ಅರಿತು ಅವನ ಬಂಗಲೆಯಲ್ಲಿ ಮಹೇಶ ಕಾಲಿಡುವ ವೇಳೆಗೆ ರಾತ್ರಿ ಎಂಟು ಗಂಟೆಯಾಗಿತ್ತು.

ಬಹಳ ಕಾಲದ್ ಆಗಿ ಒಳಗ್ಯಾರೂ ಇಲ್ಲವೆಂಬಂತೆ ಡಿಮ್ ಲೈಟ್ ಹರಡಿತ್ತು ಅಸ್ಪಷ್ಟವಾಗಿತ್ತು ಹಾಲ್.

ಅಷ್ಟು ವಿಶಾಲ ಬಂಗಲೆಯಲ್ಲಿ ಫ್ರಂಟ್‌ಗೇಟ್ ಬಳಿ ಒಬ್ಬ ವಾಚ್‌ಮನ್ ಸಹ ಇಲ್ಲದಿರುವುದು ತುಸು ಆಶ್ಚರ್ಯವೆನಿಸಿದರೂ ಬಂಗಲೆಯ ತಲೆ ಬಾಗಿಲ ವರೆಗೆ ಅನುಮಾನವಿಲ್ಲದೇನೇ ನಡೆದು ಬಂದ ಮಹೇಶ.

ನೀಲಿ ಬಣ್ಣದ ಲೈಟ್‌ಗಳು ಬೆಳಗುತ್ತಿದ್ದವಲ್ಲಿ. ಸೆಕೆಂಡ್ ವರ್ಲ್ಡ್ ವಾರ್ ಮೊದಲು ಕಟ್ಟಿದ ಹಳೆಯ ಮಾಡೆಲ್‌ನಂತಿತ್ತು ಬಂಗಲೆ. ಬಲವಾದ ಮರದ ಬಾಗಿಲ ಮೇಲೆ ಹಲವಾರು ಚಿತ್ರಗಳು ಮೂಡಿ ನೋಡಲು ಚೆನ್ನಾಗಿತ್ತು. ಕಾಲಿಂಗ್ ಬಝರ್‌ಗಾಗಿ ಬಾಗಿಲ ಅತ್ತಿತ್ತ ನೋಡುತ್ತಿರುವಾಗಲೇ ಬಾಗಿಲು ನಿಶ್ಶಬ್ದವಾಗಿ ತೆರೆದುಕೊಂಡಿತು !

ಬೆಚ್ಚಿಬಿದ್ದ ಮಹೇಶ. ಅವನ್ಯಾರೂ ತೆಗೆಯಲಿಲ್ಲ. ಅವಷ್ಟಕ್ಕವೇ ಓಪನ್ ಆಗಿದ್ದವು !

"ಕಮ್ ಇನ್ ಸೈಡ್ !"

ಗರಗರ ಶಬ್ದದೊಡನೆ ಯಾವುದೋ ಧ್ವನಿ ಕೇಳಿಸಿತು. ಕಿವಿ ನಿಮಿರಿಸಿದ ಮಹೇಶನಿಗೆ ಆ ಧ್ವನಿ ಯಾವುದೋ ಸ್ಪೀಕರ್‌ನಿಂದ ಕೇಳಿ ಬಂದಂತೆನಿಸಿತು.

ಬಾಗಿಲು ದಾಟಿ ಕತ್ತಲೇ ಗುಹೆಯಂತೆ ಕಾಣುತ್ತಿದ್ದ ಹಾಲ್‌ನೊಳಕ್ಕೆ ಕಾಲಿಟ್ಟ ಮಹೇಶ.

ಅವನು ಒಳಕ್ಕೆ ಬಂದೊಡನೆ ಎಲ್ಲೋ 'ಕ್ಲಿಕ್' ಎಂಬ ಅತಿ ಸೂಕ್ಷ್ಮ ಸೌಂಡ್....ಅದರ ಹಿಂದೆಯೇ ಹಾಲ್ ಮೇಲ್ಛಾವಣಿಯಲ್ಲಿದ್ದ ಲೈಟ್‌ಗಳು ಚಟಕ್ಕನೆ ಹತ್ತಿಕೊಂಡವು.

ಹಾಲ್ ಸ್ಪಷ್ಟವಾಗಿ ಕಾಣಿಸತೊಡಗಿತೇಗ.

ನಿರ್ಜನಪ್ರಾಯವಾಗಿತ್ತು ಹಾಲ್, ಫಿಟಾಗಿ ಫರ್ನಿಚರ್ ಆಗಿರುವ ಅಲ್ಲಿ ಪಿನ್‌ಡ್ರಾಪ್ ಸೈಲೆನ್ಸ್.

"ಹೂ ಆರ್ ಯು ?" ಕಣ್ಣಿಗೆ ಕಾಣಿಸದ ವ್ಯಕ್ತಿಯ ಧ್ವನಿ ಕೇಳಿಸಿತು ಅದೇ ಗರಗರ ಶಬ್ದ.

ತನ್ನ ಹಿಂದೆಯೇ ಮುಚ್ಚಿಕೊಳ್ಳುತ್ತಿದ್ದ ಮರದ ಬಾಗಿಲನ್ನು ಕಣ್ಣಂಚಿನಿಂದಲೇ ಗಮನಿಸುತ್ತಾ, "ಜೇಸನ್ ಭೇಟಿಯಾಗಲೆಂದು ಬಂದಿರುವ ಸ್ನೇಹಿತ !" ಎಂದು ಜೋರು ಧ್ವನಿಯಲ್ಲಿ ಉತ್ತರಿಸಿದ ಆ ಅಶರೀರವಾಣಿಗೆ ಮಹೇಶ.

"ನಿನ್ನ ಬಳಿ ಮಾರಕಾಸ್ತ್ರಗಳೇನಾದರೂ ಇವೆಯೇ ?" ಕೇಳಿತು ಆ ಧ್ವನಿ.

'ರಾಣಿ'ಯನ್ನು ಹೊರ ತೆಗೆದ ಮಹೇಶ, "ಇದೆ !" ಅಂದ.

"ಅವುಗಳನ್ನು ಹಾಲ್ ಮಧ್ಯದಲ್ಲಿರುವ ಟೀಪಾಯ್ ಮೇಲಿಡು.... ಸಣ್ಣ ನೈಫ್ ಸಹ ಬಿಡದೆ ಅಲ್ಲೇ ಇರಿಸಿ ನಿನ್ನ ಮುಂದೆ ಬೀಳುವ ಸ್ಪಾಟ್ ಲೈಟ್ ಬೆಳಕನ್ನೇ ಫಾಲೋ ಮಾಡಿಕೊಂಡು ಬಾ... ತುಸು ಚಾಲಾಕಿತನ ಪ್ರದರ್ಶಿಸಲೋದರೂ ಸಾಯುವೆ !"

ತಲೆ ಕುಣಿಸಿ ಪಿಸ್ತೂಲನ್ನು ಟೀಪಾಯ್ ಮೇಲಿಟ್ಟ ಮಹೇಶ. ಬಲ ಮುಂಗೈ ಮೇಲಿದ್ದ 'ರಾಜ'ನನ್ನೂ ಟೀಪಾಯ್ ಮೇಲಿರಿಸಿ ಮುಂದೆ ನೋಡಿದ.

ಅದೇ ಕ್ಷಣ ಎಲ್ಲಿಂದಲೋ ಸಣ್ಣನೆಯ ಸ್ಪಾಟ್ ಲೈಟ್ ಬೆಳಕು ಟೀಪಾಯ್ ಫ್ರಂಟ್‌ಗೆ ನೆಲದ ಮೇಲೆ ಬಿದ್ದು ಮುಂದಕ್ಕೆ ಕದಲಿತು. ಅದ

ನ್ಯಾರೋ ಪ್ರೊಜೆಕ್ಟ್ ಮಾಡುತ್ತಿದ್ದರು. ಕಾಮನ್ ಆಗಿ ಚಲಿಸುತ್ತಿತ್ತು ಆ ಬೆಳಕು.

ಅದರ ಹಿಂದೆಯೇ ಹೆಜ್ಜೆ ಹಾಕಿದ ಮಹೇಶ. ಆ ಲೈಟ್ ಸ್ಪಾಟ್ ಹಾಲ್ ಮಧ್ಯದಲ್ಲೇ ಮೆಟ್ಟಿಲುಗಳ ಮೂಲಕ ಮೇಲಕ್ಕೆ ಸಾಗಿತು, ಹಿಂಬಾಲಿಸಿದ ಮಹೇಶ.

ಸರಿಯಾಗಿ ಒಂದು ಕೊಠಡಿಯ ಮುಂದೆಹೋಗಿ ನಿಂತಿತು ಆ ಸ್ಪಾಟ್ ಲೈಟ್.

ಕೊಠಡಿಯ ಬಾಗಿಲು ತೆರೆದುಕೊಂಡಿತು. ಒಳಗೂ ನೀಲಿ ಬಣ್ಣದ ದೀಪವೇ ಬೆಳಗುತ್ತಿತ್ತು. ವಿಶಾಲವಾಗಿದ್ದ ಆ ಕೊಠಡಿಯ ಒಂದು ಪಕ್ಕಕ್ಕೆ ಟೆಲಿವಿಷನ್ ಸ್ಕ್ರೀನ್... ಅದರ ಮುಂದೆ ಎತ್ತರವಾದ ಟೇಬಲ್ ಮೇಲೆ ಹಲವಾರು ಎಲೆಕ್ಟ್ರಿಕ್ ಪರಿಕರಗಳು ...ಅವುಗಳ ಮುಂದೆ ಕುಳಿತಿದ್ದನೊಬ್ಬ ವ್ಯಕ್ತಿ !

"ಒಳಕ್ಕೆ ಬಾ ಮಿಸ್ಟರ್ !" ಹಿಂದಕ್ಕೆ ತಿರುಗದೇನೇ ಆದೇಶಿಸಿದ ಆ ವ್ಯಕ್ತಿ.

ಕಾಮನ್ ಆಗಿ ಒಳಕ್ಕೆ ನಡೆದ ಮಹೇಶ. ಕೊಠಡಿಯ ಬಾಗಿಲು ಮೊದಲಿನಂತೆ ಕ್ಲೋಸಾಯಿತು

ನಿಧಾನವಾಗಿ ಮಹೇಶನ ಕಡೆಗೆ ತಿರುಗಿದ ಆ ವ್ಯಕ್ತಿ. ಅಲ್‌ಮೋಸ್ಟ್ ಅರವತ್ತಿರಬಹುದು ಅವನವಯಸ್ಸು. ವಯಸ್ಸಾದ ಆ ಮುಖದಲ್ಲಿ ತೀಕ್ಷ್ಣವಾಗಿರುವುದು ಅವನೆರಡು ಕಣ್ಣುಗಳೇ. ಬಿಳಿಯ ಬಟ್ಟೆಗಳಲ್ಲಿದ್ದ ಅವನ ವದನದಲ್ಲಿ ಅದೊಂದು ರೀತಿಯ ಪ್ರಶಾಂತತೆ ಎದ್ದು ಕಾಣುತ್ತಿತ್ತು.

"ವೆಲ್‌ಕಮ್ ಜೇಸರ್....ಹೂ ಆರ್ ಯು ?" ಗಂಭೀರವಾಗಿ ಕೇಳಿದ.

ತನ್ನನ್ನಿಲ್ಲಿಯವರೆಗೆ ಗೈಡ್ ಮಾಡಿದ ಧ್ವನಿ ಅವನದೇ ಎಂದರ್ಥವಾಯಿತು ಮಹೇಶನಿಗೆ.

"ನಿಮ್ಮ ಸ್ನೇಹಿತ ನಾರ್ಮನ್ ಪರವಾಗಿ ನಿಮ್ಮನ್ನು ಭೇಟಿಯಾಗಲು ಬಂದಿದ್ದೇನೆ ನನ್ನ ಹೆಸರು ಮಹೇಶ್....!" ನಾರ್ಮನ್ ಹೆಸರು ಕೇಳಿ ದೊಡನೆ ಬೆಚ್ಚಿದ ಜೇಸರ್. ಅದನ್ನು ಹೊರಕ್ಕೆ ಕಾಣಿಸದಂತೆ ನಸುನ

ಪ್ರಯತ್ನ ಮಹೇಶನ ಕಣ್ಣಿಂದ ಎಸ್ಕೇಪ್ ಆಗಲಿಲ್ಲ !

"ಶಾರ್ವರೀಶ್‌ನನ್ನು ನಾನು ಭೇಟಿಯಾಗಿ ಹದಿನೈದು ವರ್ಷಗಳಮೇಲಾಯಿತು ಮಿಸ್ಟರ್ ಮಹೇಶ್....ಅವನೆಲ್ಲಿದ್ದಾನೆಂಬುದೂ ನನಗೆ ಗೊತ್ತಿಲ್ಲ ..."

"ವೆಲ್....ಸುತ್ತಲೂ ನೋಡಿ ರಿಲಾಕ್ಸ್ ಆದವನಂತೆ ಭುಜ ಎಗರಿಸಿದ ಮಹೇಶ, "ಇಷ್ಟು ದೊಡ್ಡ ಬಂಗಲೆಯಲ್ಲಿ ನೀವೊಬ್ಬರೇ ಇರುವಿರಾ ?" ಅಂದ

"ಹೌದು....ನನಗೆ ಏಕಾಂತವೆಂದರೆ ಬಹಳ ಇಷ್ಟ....ನನ್ನೊಡನೆ ಇನ್ನೊಂದು ಪ್ರಾಣಿಯಿರುವುದೂ ನನಗಿಷ್ಟವಿಲ್ಲ !" ಮುಖಕ್ಕೆ ಹೊಡೆದಂತೆ ಮುಕ್ತವಾಗಿ ಉತ್ತರಿಸಿದ ಚೇಸರ್.

"ಸೋ... ಈ ಎಲೆಕ್ಟ್ರಾನಿಕ್ ಡಿವೈಸ್‌ಗಳನ್ನೇ ನಿಮ್ಮ ಮಿತ್ರರಂತೆ ಭಾವಿಸಿ ಕಾಲ ಕಳೆಯುತ್ತಿರುವಿರಾ ಮಿಸ್ಟರ್ ಕೋಬ್ರಾ ?" ಮುಗುಳ್ನಗೆಯೊಡನೆ ಕೇಳಿದ ಮಹೇಶ.

ಬೆಚ್ಚಿದ ಚೇಸರ್. ಮಿಂಚಿನ ವೇಗದೊಡನೆ ಅವನ ಕೈನಲ್ಲಿ ಕಾಣಿಸಿಕೊಂಡಿತ್ತೊಂದು ಪಿಸ್ತೂಲು !

"ನಿಜವಾಗಿಯೂ ನೀವ್ಯಾರು ಹೇಳಿ ಮಿಸ್ಟರ್....ಕೋಬ್ರಾ ಬಗ್ಗೆ ನಿಮಗೇನು ಗೊತ್ತು ?" ಕಟುವಾಗಿತ್ತೀಗ ಅವನ ಧ್ವನಿ

"ಏನೂ ಗೊತ್ತಿಲ್ಲ....ತಿಳಿದುಕೊಳ್ಳಬೇಕೆಂಬೇ ನನ್ನ ಪ್ರಯತ್ನ....ನಿಮ್ಮ ಹೆಸರು ಕೋಬ್ರಾ ಅಲ್ಲ ಎಂದು ಚೆನ್ನಾಗಿ ಗೊತ್ತು....ಆದರೆ ಆ ಹೆಸರಿನ ವ್ಯಕ್ತಿ ಮಾತ್ರ ನಿಮಗೆ ಚೆನ್ನಾಗಿ ತಿಳಿದವರಿರಬೇಕು....ಆಮ್ ಐ ರೈಟ್ ?" ಸಹಜ ಧ್ವನಿಯಲ್ಲೇ ಕೇಳಿದ ಮಹೇಶ

ಮಹೇಶನ ಕಣ್ಣುಗಳನ್ನೇ ತೀಕ್ಷ್ಣವಾಗಿ ನೋಡಿದ ಚೇಸರ್....ಅವನ ಅಂತರಂಗದೊಳಕ್ಕೆ ಹೋಗಿ ನೋಡುವ ಪ್ರಯತ್ನದೊಡನೆ.

"ಕ್ಷಮಿಸಿ....ನಾನು ನಿಮಗಾಗಲಿ, ಶಾರ್ವರೀಶ್‌ಗಾಗಲಿ ಯಾವುದೇ ತೊಂದರೆ ಮಾಡುವ ಉದ್ದೇಶದೊಡನೆ ಬಂದವನಲ್ಲ....ನಡೆದ ವಿಷಯವೇನೆಂದರೆ...." ಮೊದಲಿನಿಂದ ಕೊನೆಯವರೆಗೆ ನಡೆದದ್ದನ್ನೆಲ್ಲಾ ವಿವರಿಸಿದ ತಾನ್ಯಾರೆಂಬ ವಿಷಯ ಮಾತ್ರ ಬಹಿರಂಗಗೊಳಿಸದೆ.

ಭಾರವಾಗಿ ನಿಟ್ಟುಸಿರುಗರೆದು ಪಿಸ್ತೂಲು ಕೆಳಗಿಳಿಸಿದ ಜೇಸನ್ “ಹೂಂ ! ಕೊನೆಗಂತೂ ನಾರ್ದರ್ನ್ ಇಂಟರ್ ಸೆಕ್ಟರ್ ಅನ್ನು ಆವಿಷ್ಕರಿಸಿದ ಎಂತಾಯಿತು ಅದಕ್ಕಾಗಿಯೇ ಕಾಯುತ್ತಿದ್ದ ಕೋಬ್ರಾ ಅವನನ್ನು ಬುದ್ಧಿ ವಂತಿಕೆಯಿಂದ ಟ್ರಾಪ್ ಮಾಡಿದನೆಂತಾಯಿತು !” ತನಗೆ ತಾನೇ ಅಂದು ಕೊಂಡ.

“ನೀವೇನನ್ನುತ್ತಿರುವಿರೋ ನನಗರ್ಥವಾಗುತ್ತಿಲ್ಲ...ದಯಿಟ್ಟು ಅರ್ಥವಾಗುವಂತೆ ಹೇಳುವಿರಾ ?” ಆತುರ ತಡೆದುಕೊಂಡು ಶಾಂತವಾಗಿಯೇ ಕೇಳಿದ ಮಹೇಶ

ಹಣೆ ಉಜ್ಜಿಕೊಂಡ ಜೇಸನ್, “ಇದರ ಹಿಂದೆ ದೊಡ್ಡ ಕಥೆಯಿದೆ ಮಿಸ್ಟರ್ ಮಹೇಶ್....ಸೆಕೆಂಡ್ ವರ್ಲ್ಡ್‌ವಾರ್ ಸಮಯದಲ್ಲಿ ನಾಜಿಗಳ ಕೈನಲ್ಲಿ ಚಿತ್ರ ಹಿಂಸೆ ಅನುಭವಿಸಿದ ಮೂವರು ಸ್ನೇಹಿತರು ನಾವು ನಾರ್ದರ್ನ್ ಕೋಬ್ರಾ, ನಾನು... ನಾರ್ದರ್ನ್ ಅಟಾಮಿಕ್ ರಿಸರ್ಚ್ ಮಾಡುತ್ತಿದ್ದ.... ಕೋಬ್ರಾ ಕೆಮಿಕಲ್ ಎಕ್ಸ್‌ಪರ್ಟ್ !”

“ಒನ್ ಮಿನಿಟ್....ಕೋಬ್ರಾನ ಅಸಲಿ ಹೆಸರೇನು ?” ಕೇಳಿದ ಮಹೇಶ.

“ಕ್ಲಿಪ್ ಅವನ ಹೆಸರು ! ಅದರವನ ಕಣ್ಣುಗಳು ಹಾವಿನ ಕಣ್ಣು ಗಳಂತಿದ್ದವು....ಅದಕ್ಕೇ ನಾನವನಿಗೆ ಕೋಬ್ರಾ ಎಂಬ ಅಡ್ಡ ಹೆಸರಿಟ್ಟಿದ್ದವು ವೆಲ್....ಆಗ ಹಿಟ್ಲರ್ ಆಜ್ಞೆಯಂತೆ ಅಟಾಮಿಕ್ ವೆಪನ್ಸ್ ತಯಾರಿಸಲು ಸಿದ್ಧನಾದರೂ ಅಣು ಶಕ್ತಿಯನ್ನು ಅದಕ್ಕಾಗಿ ಉಪಯೋಗಿಸಲು ಇಷ್ಟವೇ ಇರಲಿಲ್ಲ ನಾರ್ದರ್ನ್‌ಗೆ. ಆದ್ದರಿಂದಲೇ ನಾಜಿಯ ಕ್ಲಚೆಸ್‌ನಿಂದ ಪಾರಾದ ಮೇಲೆ ಅಟಾಮಿಕ್ ಡಿಪನ್ಸ್‌ಗೆ ವಿರುದ್ಧ ಶಕ್ತಿಯೊಂದನ್ನು ಕಂಡು ಹಿಡಿ ಯಲು ತೀವ್ರವಾಗಿ ಪ್ರಯತ್ನಿಸುತ್ತಿರುವಾಗ ಮೂವರೂ ಅಮೇರಿಕ ಏಜೆಂಟರ ಬಲಾತ್ಕಾರದಿಂದ ಇಲ್ಲಿಗೆ ಬರಬೇಕಾಯಿತು....”

“ಯು ಮೀನ್....ನಿಮಗಿಷ್ಟವಿಲ್ಲದೆ ಇಲ್ಲಿಗೆ ಬಂದಿರೇನು ?” ಕೇಳಿದ ಮಹೇಶ.

ನಿಸ್ತೇಜನಗೆ ಬೀರಿದ ಜೇಸನ್ “ಬಿಸಿ ಬಾಣಲೆಯಿಂದ ಉರಿಯುವ

ಬೆಂಕಿಗೆ ಬೀಳಲು ಯಾರು ತಾನೇ ಇಷ್ಟ ಪಡುತ್ತಾರೆ ಮಿಸ್ಟರ್ ಮಹೇಶ್.... ನಮ್ಮಿಬ್ಬರ ಪ್ರಸಕ್ತಿಯೇ ಬರಲಿಲ್ಲ ಇಲ್ಲಿ. ನಮ್ಮನ್ನು ರಹಸ್ಯವಾಗಿ ಇಲ್ಲಿಗೆ ಕರೆ ತಂದರು ಅಮೇರಿಕನ್ಸ್. ನಮ್ಮನ್ನು ಬೆದರಿಸಿಯೂ .. ನಾವಿಷ್ಟ ಪಟ್ಟಿದ್ದೇ ಕರೆತಂದವೆಂದು ಪ್ರಚಾರ ಮಾಡಿದರು ಇವರ ಕಸ್ಟಡಿಯಲ್ಲಿರಲಿಚ್ಛ ಪಡದ ಕ್ಲಿಪ್ ರಹಸ್ಯವಾಗಿ ಗೋಲ್ಡನ್ ಗ್ಯಾಂಗ್ ಸಂಪರ್ಕಿಸಿದ....ಅವರಿಗೆ ಅಮೂಲ್ಯ ಫಾರ್ಮುಲಾ ನೀಡುವೆನೆಂದು ಆಮಿಷ ಒಡ್ಡಿದ. ಅವರು ಸಿ ಐ ಎ ಸೆಲ್‌ನಿಂದ ಕ್ಲಿಪ್‌ನನ್ನು ಪಾರು ಮಾಡುವ ಪ್ರಯತ್ನದಲ್ಲಿರುವಾಗಲೇ ಕ್ಲಿಪ್‌ಗೆ ಗುಂಡೇಟು ತಗಲಿ ಅವನು ಪ್ರಾಣ ಬಿಟ್ಟ !"

"ವಾಟ್....ನೀವು ಹೇಳಿದಂತೆ ಕ್ಲಿಪ್ ಸತ್ತಿದ್ದರೆ....ನಾರ್ಮನ್‌ನನ್ನು ಸಂಪರ್ಕಿಸದೇ ಕ್ಲಿಪ್ ಹೇಗೆ ದಕ್ಕಿಸಿಕೊಳ್ಳಲು ಸಾಧ್ಯ ?" ಅಚ್ಚರಿಯೊಡನೆ ಕೇಳಿದ ಮಹೇಶ

"ವೆಲ್...ಕ್ಲಿಪ್ ಸತ್ತು ಹೋದನೆಂಬ ವಿಷಯ ಕೇವಲ ಸಿ.ಐ.ಎ. ಕಣ್ಣಿಗೆ ಮಣ್ಣು ತೂರಲು ಮಾತ್ರ ಕ್ಲಿಪ್ ಹಾಗೂ ಗ್ಯಾಂಗ್ ಕೂಡಿಯೇ ಆಡಿದ್ದ ನಾಟಕ ! ಇನ್ ಫ್ಯಾಕ್ಟ್ ಶೂಟಿಂಗ್‌ನಲ್ಲಿ ಸತ್ತವನು ಕ್ಲಿಪ್ ಅಲ್ಲ ! ಅವನಂತೆಯೇ ಕಾಣುತ್ತಿದ್ದ ವ್ಯಕ್ತಿ ! ಕ್ಲಿಪ್‌ನನ್ನು ಅದಕ್ಕೆ ಮೊದಲೇ ಸಿ.ಐ ಎ ಸೆಲ ನಿಂದ ಲಿಫ್ಟ್ ಮಾಡಿ ಬಿಟ್ಟಿತು ಗ್ಯಾಂಗ್. ಅವನ ಜಾಗದಲ್ಲಿ ಆ ನಕಲು ವ್ಯಕ್ತಿಯನ್ನಿರಿಸಿತ್ತು....ಅವನನ್ನು ಎಸ್ಕೇಪ್ ಮಾಡಿಸುವಂತೆ ನಾಟಕ ವಾಡಿದರು ಗ್ಯಾಂಗ್ ಕಿಲ್ಲರ್ಸ್ ಆಗಿನ ಗಲಭೆಯಲ್ಲಿ ಡೂಪ್ಲಿಕೇಟ್ ಕ್ಲಿಪ್ ಸತ್ತದ್ದರಿಂದ ಅಸಲಿಯ ಬಗ್ಗೆ ತನಿಖೆ ನಡೆಯದೆಂದು ಗ್ಯಾಂಗ್ ಲೆಕ್ಕ. ಇನ್ ಫ್ಯಾಕ್ಟ್ ನಡೆದದ್ದೇ ಹಾಗೆ ! ಕ್ಲಿಪ್ ಗ್ಯಾಂಗ್ ಹೆಲ್ಪ್‌ನಿಂದ ಭೂಗತನಾದ, ಕ್ಲಿಪ್‌ನನ್ನು ಅತಿ ಜಾಗ್ರತೆಯಿಂದ ಗಮನಿಸುತ್ತಿದ್ದ ನನಗೆ ಮಾತ್ರ ಕ್ಲಿಪ್ ಬದುಕಿದ್ದಾನೆಂಬ ವಿಷಯಗೊತ್ತಿರುವುದು....ನಾರ್ಮನ್‌ಗೆ ಕ್ಲಿಪ್ ಬದುಕಿರುವ ವಿಷಯವಷ್ಟೇ ಗೊತ್ತೇ ಹೊರತು ಅವನು ಗ್ಯಾಂಗ್ ಸಹವಾಸ ಮಾಡಿದ್ದಾನೆಂದು ತಿಳಿಯದು. ಆದ್ದರಿಂದಲೇ ಕ್ಲಿಪ್‌ನನ್ನು ನಂಬಿದ. ಥಾಮಸ್ ಎಂಬ ತನ್ನವನನ್ನು ನಾರ್ಮನ್ ಹಿಂದೆ ನೆರಳಿನಂತೆ ಬಿಟ್ಟ ಕ್ಲಿಪ್ ಅವನ ರಿಸರ್ಚ್‌ನ ಪ್ರತಿ ಘಟ್ಟವನ್ನೂ ಫಾಲೋ ಮಾಡುತ್ತಾ ಬಂದ.

"ಈ ವಿಷಯ ಗ್ರಹಿಸಿ ನಾನು ಸಾರ್ವರ್ನ್‌ನನ್ನು ಎಚ್ಚರಿಸಲು ಪ್ರಯತ್ನಿಸಿದೆ....ಆದರೆ ಕೋಬ್ರಾ ಅಲಿಯಾಸ್ ಕ್ಲಿಪ್ ನನಗಡ್ಡ ಬಂದ. ಅವನ ಕೈಯಿಂದ ಪಾರಾದನಷ್ಟೇ, ಸಾರ್ವರ್ನ್‌ಗೆ ಎಚ್ಚರಿಸಲಾಗಲಿಲ್ಲ. ಅಂದಿನಿಂದ ಕ್ಲಿಪ್ ನನ್ನ ಮೇಲೂ ಒಂದು ಕಣ್ಣಿಟ್ಟ ಆದ್ದರಿಂದಲೇ ನನ್ನ ಬಂಗಲೆಯಲ್ಲಿ ಇಷ್ಟೆಲ್ಲಾ ಸೆಕ್ಯೂರಿಟಿ ಮೆಷರ್ಸ್ ತೆಗೆದುಕೊಳ್ಳಬೇಕಾಯಿತು. ನಿನ್ನನ್ನೂ ಅನುಮಾನಿಸಬೇಕಾಯಿತು....ಸಾರ್ವರ್ನ್ ಎಷ್ಟೋ ವರ್ಷಗಳು ಅಹರ್ನಿಶಿ ಕಷ್ಟಪಟ್ಟು ಸಂಪಾದಿಸಿದ ಇಂಟರ್ ಸೆಪ್ಟರ್ ಆ ದುಷ್ಟನ ಕೈ ಸೇರದಂತೆ ಮಾಡುವಲ್ಲಿ ಕೊನೆಗೂ ವಿಫಲನಾದೆ!" ಬಹಳ ನೋವಿನೊಡನೆ ಹೇಳಿದ ಜೇಸನ್.

"ಇಂಟರ್ ಸೆಪ್ಟರ್....ಬಗ್ಗೆ ಏನಾದರೂ ಹೇಳ ಬಲ್ಲಿರಾ ?" ಆಸಕ್ತಿಯೊಡನೆ ಕೇಳಿದ ಮಹೇಶ.

"ಇಂಟರ್‌ಸೆಪ್ಟರ್... ಸಾರ್ವರ್ನ್ ಕನಸಿನ ನೈಜ ರೂಪ....ಯಾವಾಗಲೂ ನನ್ನೊಡನೆ ತನ್ನ ಪ್ರಯೋಗಗಳ ಬಗ್ಗೆ ಮನ ಬಿಚ್ಚಿ ಮಾತಾಡುತ್ತಿದ್ದ ಅವನು. ಅಟಾಮಿಕ್ ಬಾಂಬೊಂದು ಯಾವುದೇ ಟಾರ್ಗೆಟ್ ಕಡೆಗಾದರೂ ಪ್ರಯಾಣಿಸಿದ ಮರುಕ್ಷಣ ..ಅದು ತನ್ನ ಕಕ್ಷೆಯಲ್ಲಿ ಪ್ರವೇಶಿಸಿದೊಡನೆ ಅದನ್ನು ತನ್ನ ಕಡೆಗೆಳೆದುಕೊಂಡು ಅಪಾಯವಾಗದಷ್ಟು ದೂರಕ್ಕೆ ಅಂತರಿಕ್ಷದೊಳಕ್ಕೆ ಸಾಗಿಸಿ ಅಲ್ಲದು ಸ್ಫೋಟಿಸುವಂತೆ ಮಾಡುವ ಶಕ್ತಿಯಿದೆ ಇಂಟರ್‌ಸೆಪ್ಟರ್‌ಗೆ! ಅದರ ಸಹಾಯದಿಂದಾಗಿ ಯಾವುದೇ ದೇಶ ಅಟಾಮಿಕ್ ವೆಪನ್ಸ್‌ಗೆ ಭಯ ಪಡುವಂತಿಲ್ಲ. ಭೂಮಿಯ ಮೇಲೆ ಯಾವುದೇ ಅಸ್ತ್ರ ಸ್ಫೋಟಿಸದಂತೆ ತಡೆಯುವ ಸಾಮರ್ಥ್ಯವಿದೆ ಇಂಟರ್ ಸೆಪ್ಟರ್‌ಗೆ...."

"ಮಾರ್ವಲಸ್ !" ಅಂದ ಮಹೇಶ ಆಟೋಮ್ಯಾಟಿಕ್ಕಾಗಿ.

"ಎಸ್! ಎಲ್ಲ ದೇಶಗಳಿಗೂ ಒಂದು ವರವಾಗುತ್ತದೆ ಈ ಇಂಟರ್ ಸೆಪ್ಟರ್. ಅದನ್ನರಿತೇ ಸಾರ್ವರ್ನ್‌ನನ್ನು ಅಮೇರಿಕಾ ಭೂಗರ್ಭದಲ್ಲಿರಿಸಿತು. ಅವನ ರಿಸರ್ಚ್ ಮೇಲೆ ವಿದೇಶಿ ಏಜೆಂಟರ ದೃಷ್ಟಿ ಬೀಳದಂತೆ ಅವನು ಮಾಡುತ್ತಿರುವ ಪ್ರಯೋಗಗಳು ಕ್ಯಾನ್ಸರ್ ನಿಲುಗಡೆಗೆಂದು ಪ್ರಚಾರ ಕೊಟ್ಟಿತು. ಆ ಇಂಟರ್ ಸೆಪ್ಟರ್ ಶತ್ರುದೇಶಕೆ ಸಾಧ್ಯವಾಗಬೇಕೆಂದು

ಅಮೇರಿಕಾ ಇಚ್ಛೆ !" ಅಂದ ಚೇಸರ್.

"ಶಾರ್ದುಲ್ ಅಮೇರಿಕಾಗೆ ಈ ಪರಿಕರ ತಯಾರಿಸಬೇಕೆಂಬ ಇಚ್ಛೆಯಂತೂ ಹೊಂದಿರಲಿಲ್ಲ ಅಲ್ಲವೇ ?" ಸಾಲೋಚನೆಯೊಡನೆ ಕೇಳಿದ ಮಹೇಶ

"ಹೌದು ! ಅಣ್ವಸ್ತ್ರಗಳು ಬೇಡವೆಂದು ಪ್ರತಿಪಾದಿಸುವ ಶಾಂತಿ ಪ್ರಿಯ ರಾಷ್ಟ್ರಗಳಿಗೆ ಅದನ್ನು ನೀಡಬೇಕೆಂದು ಶಾರ್ದುಲ್ ಆಶಯ. ಅವನಾಸೆ ಈಡೇರುವ ಅವಕಾಶವೇ ಇಲ್ಲ ಈಗ !" ನಿಟ್ಟುಸಿರುಗರೆದ ಚೇಸರ್.

"ಇದೆ ಮಿಸ್ಟರ್ ಚೇಸರ್....ಅಣು ಯುದ್ಧದಿಂದ ಪಾರಾಗಿ ಪ್ರಶಾಂತವಾಗಿ ಬದುಕುವ ಇಚ್ಛೆಯಿರುವ ಬಡ ದೇಶಗಳು ಆ ಇಂಟರ್‌ಸೆಪ್ಟರ್ ಪಡೆಯುವ ಅವಕಾಶಗಳು ಇನ್ನೂ ಇವೆ" ಅಂದ ಮಹೇಶ.

"ಅವಕಾಶವಿದೆಯೇ ? ಹೇಗೆ ?" ಆತುರದೊಡನೆ ಕೇಳಿದ ಚೇಸರ್.

"ನೀವು ನನಗೆ ಸಹಾಯ ಮಾಡಿದರೆ ಭಾರತ ಸರ್ಕಾರದ ಪರವಾಗಿ ಪ್ರಪಂಚ ಶಾಂತಿಗಾಗಿ ಶಾರ್ದುಲ್‌ರನ್ನು, ಆ ಇಂಟರ್ ಸೆಪ್ಟರ್ ಅನ್ನು ನಾನು ಭಾರತಕ್ಕೆ ತೆಗೆದುಕೊಂಡು ಹೋಗುತ್ತೇನೆ ನಮ್ಮ ಸರ್ಕಾರದ ಸಹಾಯದಿಂದ ಶಾರ್ದುಲ್ ತನ್ನ ಆಶಯ ಈಡೇರಿಸಿಕೊಳ್ಳಬಹುದು...." ಅಂದ ಮಹೇಶ.

ಮಿಂಚಿದವು ಚೇಸರ್ ಕಣ್ಣುಗಳು. ಆದರೂ ತಕ್ಷಣ ಏನೂ ಹೇಳಲಿಲ್ಲ ಅವನು.

"ನನ್ನ ಮಾತಿನ ಮೇಲೆ ನಂಬಿಕೆಯಿಲ್ಲವೇ ಚೇಸರ್ ?" ಕೇಳಿದ ಮಹೇಶ

"ಇದೆ ಮಿಸ್ಟರ್ ಮಹೇಶ್....ಪ್ರಪಂಚದಲ್ಲಿ ಶಾಂತಿಗಾಗಿ ಕಾತರಿಸುವ ದೇಶ ಭೂಪಟದಲ್ಲಿದ್ದರೆ ಅದು ಭಾರತ ಮಾತ್ರ ಎಂದು ನನಗೆ ಗೊತ್ತು. ಇಂಟರ್ ಸೆಪ್ಟರ್ ತಮ್ಮ ಸ್ವಾರ್ಥಕ್ಕಾಗಿ ಮಾತ್ರ ಇಟ್ಟುಕೊಳ್ಳದೆ ಬೇರೆ ಬಡ ದೇಶಗಳಿಗೂ ಒದಗಿಸುವ ಹೃದಯ ವಿಶಾಲತೆ ಇರುವುದು ಭಾರತೀಯರಿಗೆ ಮಾತ್ರ !"

"ಹಾಗಿದ್ದಲ್ಲೂ ಏಕೆ ಸಂದೇಹ ?"

"ನಿನ್ನ ಸಹಾಯದಿಂದ ಈ ಕಾರ್ಯ ನೀನು ಹೇಗೆ ಸಾಧಿಸಬಲ್ಲೆ ಯೆಂಬುದೇ ಅರ್ಥವಾಗುತ್ತಿಲ್ಲ. ಕೋಬ್ರಾ ಗೋಲ್ಡ್ ಗ್ಯಾಂಗ್ ನೆರಳಲಿರುವವನು....ಗೋಲ್ಡ್ ಗ್ಯಾಂಗ್ ದೊಡ್ಡ ಕ್ರಿಮಿನಲ್ ಸಿಂಡಿಕೇಟ್ ! ಆ ಸಿಂಡಿಕೇಟ್ ಸಪೋರ್ಟರುವ ಕೋಬ್ರಾ ವಿಷದಂತಗಳ ನಡುವೆ ಸಿಲುಕಿರುವ ಕಾರ್ಡನ್‌ನನ್ನು ಹೇಗೆ ತಾನೇ ಪಾರು ಮಾಡು ಬಲ್ಲೆ ?" ಕೇಳಿದ ಚೇಸರ್.

"ಆ ವಿಷಯ ನನಗೆ ಬಿಡಿ ನನಗೆ ಒಂದು ಮಾಹಿತಿ ಮಾತ್ರ ನಿಮ್ಮಿಂದ ಬೇಕು ಕೋಬ್ರಾನನ್ನು ತಲುಪುವುದು ಹೇಗೆ ? ಇದೊಂದು ಸಹಾಯ ಮಾಡಿದರೆ ಸಾಕು....ಮಿಕ್ಕಿದ್ದನ್ನು ನಾನು ನೋಡಿಕೊಳ್ಳುತ್ತೇನೆ" ಅಂದ ಮಹೇಶ.

"ಓ ಕೆ....ಕೋಬ್ರಾನ ಪ್ರತಿ ಮೂವ್‌ಮೆಂಟ್ ನನಗೆ ಗೊತ್ತು.... ಅವನ ಸುಳಿವು ಗ್ಯಾಂಗ್‌ನ ಸುಪ್ರೀಂ ಕಮಾಂಡರ್ಸ್ ವಿನಹ ಬೇರ‍್ಯಾರಿಗೂ ತಿಳಿಯದು ಕೋಬ್ರಾ ಮುಕ್ಸೆಕೋದಲ್ಲಿರುವ ಕೋರಕೇ ಬ್ರಾಂಕ್ ದಲ್ಲಿ...!"

ಬಹಳ ಶ್ರದ್ಧೆಯೊಡನೆ ಆಲಿಸುತ್ತಿದ್ದ ಮಹೇಶ ಬಹಳ ಲೇಟಾಗಿ ಗಮನಿಸಿದ ಆ ಮೂವ್‌ಮೆಂಟ್. ಚೇಸರ್‌ನನ್ನು ಎಚ್ಚರಿಸಲೂ ಸಾಧ್ಯವಾಗದಷ್ಟು ಹಠಾತ್ತಾಗಿ ನಡೆದು ಹೋಗಿತ್ತು ಆ ಸಂಘಟನೆ

"ಟಪ್ !"

ಇನ್ನೂ ಅವನ ಮಾತು ಮುಗಿಯುವುದರೊಳಗೇನೆ ಗಂಟಲಲ್ಲಿ ಲ್ಯಾಂಡ್ ಆಗಿತ್ತೊಂದು ಸೈಲೆನ್ಸರ್ ಅಳವಡಿಸಿದ ಪಿಸ್ತೂಲಿಂದ ಹೊರ ಬಿದ್ದ ಬುಲೆಟ್ ! ಕಿಟಕಿಯ ಕಂಬಿಗಳ ಮಧ್ಯದಿಂದ ನುಗ್ಗಿ ಬಂದಿತ್ತದು.

"ಕ್ವಕ್" ಎಂಬ ಶಬ್ದದ ವಿನಹ ಬೇರೊಂದು ಸೌಂಡ್ ಬರಲಿಲ್ಲ ಚೇಸರ್ ಗಂಟಲಿಂದ. ಯಾವುದೋ ಪಿಶಾಚ ಹಸ್ತ ತನ್ನ ಗಂಟಲು ಹಿಸುಕುತ್ತಿರುವಂತೆ ಕ್ಷಣ ಮಹೇಶನ ಕಡೆಗೆ ನೋಡ ಹೋದ. ಮರುಕ್ಷಣವೇ ಕಣ್ಣು ನಿಸ್ತೇಜಗೊಂಡು ನೆಲಕ್ಕುರುಳಿ ಬಿಟ್ಟ ರಕ್ತ ಕ್ಷಣಗಳಲ್ಲೇ ಅವನ ಸುತ್ತಲೂ ಕೆಂಪು ವಲಯದಂತೆ ಹರಡಿಕೊಂಡಿತು.

ಟಪ್....ಟಪ್...

ಅದುರಿ ಬಿದ್ದ ನೆಲದತ್ತ ಪ್ಲಾಟ್ ಡೈವ್ ಮಾಡಿದ ಮಹೇಶ ಒಂದು ಕ್ಲೋಸ್ ಮಿಸ್ಸಾಗಲೂ ಇನ್ನೊಂದು ಭುಜದಲ್ಲೊಂದು ಗಾಯ ಮಾಡಿಯೇ ಹೋಯಿತು. ಜೋರಿಯಿಂದ ಭುಜದ ಮೇಲೆ ಒಂದಿಂಚಿನಷ್ಟು ಎಳೆದಂತಾಗಿ ಭಗ್ಗೆಂದಿತ್ತು ಭುಜ

ಆ ಟೈಂಗೆ 'ರಾಣಿ' ತನ್ನ ಬಳಿ ಇಲ್ಲದಿರುವುದಕ್ಕೆ ಮನಸಲ್ಲೇ ಬೈದು ಕೊಳ್ಳುತ್ತಾ ಎಲೆಕ್ಟ್ರಾನಿಕ್ ಟೇಬಲ್ ಮರೆಯಲ್ಲೇ ಯಾವುದಾದರೂ ಆಯುಧ ದೊರಕೀತೇನೋ ಎಂದು ಅತ್ತಿತ್ತ ನೋಡಿದ ಮಹೇಶ

ಆಗಲೇ ಕೊಠಡಿಯಾಚೆ ಯಾರೋ ಓಡುತ್ತಿರುವಂತೆ ಹೆಜ್ಜೆಯ ಶಬ್ದ ಕೇಳಿ ಬಂದಿತ್ತು. ಮಹೇಶನ ನೋಟ ಟೇಬಲ್ ಮೇಲಿದ್ದ ಚೇಸರ್ ಪಿಸ್ತೂಲ ಮೇಲೆ ಬಿತ್ತು. ಸರ್ರನೆ ಆ ಪಿಸ್ತೂಲು ಬಾಚಿ ಬಾಗಿಲ ಕಡೆ ಗೋಟಿ ಕಿತ್ತ.

ವಿದ್ಯುತ್ ನಿಯಂತ್ರಿತ ಬಾಗಿಲನ್ನು ಸುಲಭವಾಗಿ ತೆರೆಯಲು ಸಾಧ್ಯ ವಾಗಲಿಲ್ಲ. ಅದರ ಆಪರೇಷನ್ ಬಗ್ಗೆ ಅರ್ಥ ಮಾಡಿಕೊಂಡು ಅದನ್ನು ತೆಗೆಯಲು ಎರಡು ನಿಮಿಷಗಳೇ ಬೇಕಾದವು ಅವನಿಗೆ. ಬಾಗಿಲನ್ನು ತೆರೆದು ಕೊಂಡು ಹೆಜ್ಜೆಗೆ ನಾಲ್ಕರಂತೆ ಮೆಟ್ಟಿಲು ಕ್ರಮಿಸಿ ಹಾಲ್‌ನೊಳಕ್ಕೋಡಿ ಬಂದ ಅವನ ಕಿವಿಗಳಿಗೆ ಯಾವುದೋ ಕಾರು ಸ್ಟಾರ್ಟಾದ ಶಬ್ದ ಕೇಳಿ ಸಿತು.

ಹಾಲ್‌ನಿಂದ ಬಂಗಲೆಯ ಹೊರಕ್ಕೆ ಡೌಡಾಯಿಸಿದ. ಮೈನ್‌ಗೇಟ್ ತಲುಪಿದಾಗ ಅವನನ್ನು ಅಣಕಿಸುತ್ತಿರುವಂತೆ ರಸ್ತೆಯ ತಿರುವಿನಲ್ಲಿ ಕಾರಿನ ಟೈಲ್ ಲೈಟ್ಸ್ ಕಾಣಿಸಿದವು !

ನಿಸ್ಸಹಾಯಕತೆಯೊಡನೆ ಭುಜ ಎಗರಿಸಿದ ಮಹೇಶ. ಚೇಸರ್ ತನ್ನೊಡನೆ ಮಾತಾಡುತ್ತಿರುವಾಗ ಟಿ.ವಿ ಸ್ಕ್ರೀನ್ ಮೇಲೆ ಇಷ್ಟರೂ ಗಮನ ಹರಿಸಿರಲಿಲ್ಲ ಎಂಬುದೀಗ ನೆನಪಾಗಿ ನಿಡುಸುಯ್ದ. ಆಗಲೇ ಒಳ ಬಂದ ಶತ್ರು ಬಹಳ ಬುದ್ಧಿವಂತನೆಂಬುವುದರಲ್ಲಿ ಸಂಶಯವೇ ಇಲ್ಲ.

ತಾನಿಲ್ಲಿಗೆ ಬಂದದ್ದನ್ನು ಅರಿತಿದ್ದಾನೆಂದರೆ ಅವನು ತನ್ನನ್ನು ಫಾಲೋ

ಮಾಡಿರಬೇಕು. ತನಗಂತೂ ಯಾವುದೇ ಸುಳಿವು ಸಿಕ್ಕಿರಲಿಲ್ಲ. ಸಿಂಗರ್ ತನ್ನ ಯಾರೂ ಹೀಗೆಯೇ ಫಾಲೋ ಮಾಡಿಲ್ಲ ತಾನೇ? ಮಾಡಿದ್ದರೆ ಮಾತ್ರ....ಢವಢವವೆಂದಿತು ಮಹೇಶನೆದೆ.

ಹಿಂದೆ ತಿರುಗಿ ಬಂಗಲೆಯೊಳಕ್ಕೆ ದೌಡಾಯಿಸಿದ ಮಹೇಶ ತನ್ನ ಆಯುಧಗಳಿಗಾಗಿ ಇನ್ನೈದು ನಿಮಿಷಗಳ ನಂತರ ಬಂಗಲೆಯ ಹಿಂಭಾಗದಲ್ಲಿನ ಕಾರ್ ಷೆಡ್‌ನಲ್ಲಿದ್ದ ಟಾಯೋಟಾ ಕಾರನ್ನು ಸ್ಟಾರ್ಟ್ ಮಾಡಿಕೊಂಡು ಭುರ‍್ರನೆ ಮುನ್ನುಗಿಸಿದ.

# 9

ಕಪ್ಪು ಹೊಗೆ ಸುಳಿಯೋಪಾದಿಯಲ್ಲಿ ಗಿರ್ರನೆ ತಿರುಗುತ್ತ ಆಕಾಶದತ್ತ ಚಿಮ್ಮುತ್ತಿತ್ತು. ಆಗಾಗ ಆ ಹೊಗೆಯ ಮಧ್ಯದಿಂದ ತಾನಿರುವುದನ್ನು ಪ್ರಕಟಿಸುತ್ತಿತ್ತು ಬೆಂಕಿ !

ಕೂಗು, ಕೇಕೆಗಳೊಡನೆ ಉರಿಯುತ್ತಿದ್ದ ಆ ಬಂಗಲೆಯ ಸುತ್ತಲೂ ನಿಂತಿದ್ದ ಜನರ ಗುಂಪು ನೋಡುತ್ತಿತ್ತು ಆ ದೃಶ್ಯವನ್ನು. ಫೈರ್ ಸರ್ವೀಸ್‌ನವರು ಬೆಂಕಿ ಆರಿಸಲು ತೀವ್ರ ಪ್ರಯತ್ನವೆಸಗುತ್ತಿದ್ದರು ಆದರೆ ಬೆಂಕಿಗಿಷ್ಟು ಸುಲಭವಾಗಿ ಅವರಿಗೆ ಬಗ್ಗದೆ ಇನ್ನಷ್ಟು ಪ್ರಜ್ವಲಿಸ ತೊಡಗಿತ್ತು.

ಫಳೀರ್....ಫಳೀರ್ ಎಂದು ಒಂದೊಂದೇ ಫ್ಲೋರ್ ಕುಸಿಯುತ್ತಿದ್ದರೆ ಹಾಹಾಕಾರವೆಸಗುತ್ತಿದ್ದರು ಜನ.

ಗಂಟೆಗಳ ಹಿಂದೆ ಆಗ ಹೊತ್ತಿ ಬೆಂಕಿ ಬಿದ್ದಿದ್ದ ಆ ಬಂಗಲೆಯನ್ನೇ ನೋಡುತ್ತಾ ನಿಂತು ಬಿಟ್ಟಿದ್ದ ಮಹೇಶ.

ಸಿಂಗರ್ ಬಂಗಲೆ ಅದು !

ತನ್ನೆಲ್ಲಾ ಎಬಿಲಿಟಿಯೊಡನೆ ಕಾರಿನ ಮ್ಯಾಕ್ಸಿಮಮ್ ಉಪಯೋಗ ಪಡೆದು ಬೆಳಗಾಗುವುದರೊಳಗೇ ಅಲ್ಲಿಗೆ ತಲುಪಿದ್ದ ಮಹೇಶ. ಆದರೂ ಅವನ ಭಯ ನಿಜವಾಗಿ ಬಿಟ್ಟಿತ್ತು. ತನಗೆ ಸಹಾಯ ಮಾಡಿದ್ದ ಒಂದೇ ಕಾರಣಕ್ಕೆ ಸಿಂಗರ್‌ಗಾದ ಅನ್ಯಾಯ ಅದು !

ಅವನ ರಕ್ತ ಲಾವಾದಷ್ಟೇ ಬಿಸಿಯಾಗಿ ಉಸಿರು ಬೆಂಕಿಯಂತೆ ಹೊಗೆಯುಗುಳತೊಡಗಿತು. ಆ ಕೆಲಸ ಮಾಡಿದ ಗ್ಯಾಂಗ್ ಸ್ಟರ್ಸ್ ಈಗವನ

ಕೈಗೆ ಸಿಕ್ಕಿದ್ದರೆ ಬೆರಳುಗಳಿಂದಲೇ ತರಿದು ಬಿಡಬೇಕೆಂಬಷ್ಟು ಆಕ್ರೋಶ ಹೃದಯದಲ್ಲಿ. ಆವೇಶಕ್ಕೆ ನಸುಕಂಪಿಸತೊಡಗಿತ್ತವನ ದೇಹ.

ಆ ಬಂಗಲೆಯಿಂದ ಸಿಂಗರ್ ಫ್ಯಾಮಿಲಿ ಖಂಡಿತಾ ಬದುಕಿ ಪಾರಾಗಿರಲಾರರು.... ಆ ಬೆಂಕಿಯಲ್ಲಿ ಸಜೀವವಾಗಿ.... ಅಂಗೈಗಳಿಂದ ಕಣ್ಣುಗಳನ್ನು ಮುಚ್ಚಿಕೊಂಡ ಮಹೇಶ್. ಗಾಡ್.... ವಾಟ್ ಎ ಟ್ರಾಜಿಡಿ !

ತನ್ನ ಬುದ್ಧಿ ಹೀನತೆ ಜೀವನ ಶೈಲಿಯನ್ನೇ ಬದಲಾಯಿಸಿಕೊಂಡು ಪ್ರಶಾಂತವಾಗಿ ಜೀವಿಸುತ್ತಿದ್ದ ಒಂದು ಸಂಸಾರವನ್ನೇ ಹಾಳುಗೆಡವಿತು... ಬೂದಿ ಮಾಡಿಬಿಟ್ಟಿತು. ಹಿಂದೆ-ಮುಂದೆ ಯೋಚಿಸದೆ ಸಿಂಗರ್ ಹೆಲ್ಪ್ ಪಡೆದು ಅವನಿಗೇ ದ್ರೋಹ ಬಗೆದೆ

ಬ್ರದರ್.... ಬ್ರದರ್ ಅನ್ನುತ್ತ ಅಕ್ಕರೆಯೊಡನೆ ಡಿನ್ನರ್ ಸರ್ವ್ ಮಾಡಿದ ಜೀನ್ನಿ, ಅವಳ ಮುದ್ದು ಮಕ್ಕಳು ಕಣ್ಣ ಮುಂದೆ ಕದಲಿದರು.

ಗುಂಡಿಗೆಯಲ್ಲಿ ಅಗ್ನಿ ಪರ್ವತವೇ ಸ್ಫೋಟಿಸಿದಂತಾಯಿತು. ರಕ್ತವೆಲ್ಲಾ ಮುಖಕ್ಕೆ ನುಗ್ಗಿ ಕೆಂಪಾಯಿತು ಅವನ ವದನ.

ಗೋಲ್ಡನ್ ಗ್ಯಾಂಗ್‌ನ ಏನೆಲ್ಲಾ ಕಟುಕತನ ನೋಡಿದ್ದ ಮಹೇಶ.... ಆದರೂ ಅದರ ಬರ್ಬರತೆಗೆ ಬೆಂಕಿ ಹಚ್ಚುವ ಕಾರ್ಯದತ್ತ ಅಷ್ಟಾಗಿ ಹರಿದಿರಲಿಲ್ಲ ಅವನ ಗಮನ.... ಮುಗಿಯುವೆಂದಿಗೆ ಆ ವೇಳೆ.... ಗೋಲ್ಡನ್ ಗ್ಯಾಂಗ್ ಈ ಬರ್ಬರತೆಗೆ ಉತ್ತರಿಸಲೇಬೇಕು ತನಗೆ ! ಈ ರಕ್ತಕ್ಕೆ ರಕ್ತ ಹರಿಸಲೇಬೇಕು ತಾನು ! ಮುಟ್ಟಬೇಡಿರೆಂದು ಹೇಳಿದ ಸಿಂಗರ್‌ನನ್ನು ಮುಟ್ಟಿ ತನಗೆ ಓಪನ್ ಚಾಲೆಂಜ್ ಮಾಡಿದೆ ಗೋಲ್ಡನ್ ಗ್ಯಾಂಗ್ ! ಆಲ್ ರೈಟ್... ತಾನದನ್ನು ಸ್ವೀಕರಿಸುತ್ತೇನೆ !

ಫೈರ್ ಸರ್ವೀಸ್ ಆಫೀಸರ್ ಕಡೆಗೆ ನಡೆದ ಮಹೇಶ. ತನ್ನ ಸಹಚರರಿಗೆ ಆರ್ಡರ್ಸ್ ಕೊಡುತ್ತಾ ನಿಂತಲ್ಲಿ ನಿಲ್ಲದೆ ಓಡಾಡುತ್ತಿದ್ದ ಅವನು ಮಹೇಶನನ್ನು ಗಮನಿಸಲು ಐದು ನಿಮಿಷವೇ ಹಿಡಿಯಿತು.

"ಯೆಸ್ !" ಅಂದ ಆಗ.

"ಆಫೀಸರ್ ! ಬಂಗಲೆಯಿಂದ ಯಾರಾದರೂ ಬದುಕಿ ಹೊರ ಬಿದ್ದರೇ ?" ಸಹಜ ಧ್ವನಿಯಲ್ಲಿ ಕೇಳಲು ಪ್ರಯತ್ನಿಸಿ ಸೋತ.

"ಷ್..." ನಿಡುಸುಯ್ದ ಆಫೀಸರ್. "ಸುತ್ತ ಮುತ್ತಲಿನವರ ಹೇಳಿಕೆ ಯಂತೆ ಒಬ್ಬರೂ ಬದುಕುಳಿಯಲಿಲ್ಲ ಮಿಸ್ಟರ್....ಅವರ ಡೆಡ್ ಬಾಡೀಸ್ ತನ್ನ ಸಹ ಚರರ ಕಡೆಗೆ ತಿರುಗಿದ ಅವನು.

ಅಯಾಚಿತವಾಗಿ ಮಹೇಶನ ಕಣ್ಣುಗಳು ಫೈರ್ ಸರ್ವೀಸ್ ವೆಹಿಕಲ್ ಪಕ್ಕದಲ್ಲಿ ನೆಲದ ಮೇಲೆ ಸ್ಟ್ರೆಚರ್‌ಗಳ ಮೇಲಿರುವ ದೇಹಗಳತ್ತ ತಿರುಗಿದವು. ತುಟಿಗಳನ್ನು ಕಚ್ಚಿ ಹಿಡಿದು ಅತ್ತ ನಡೆದ.

ಕುತ್ತಿಗೆಯವರೆಗೆ ಬಿಳಿಯ ಶೀಟ್ಸ್ ಸುತ್ತಿದ್ದರು ದೇಹಗಳಿಗೆ. ಗುರು ತಿಸಲು ಸಾಧ್ಯವಾಗದಂತೆ ಭಯಂಕರವಾಗಿ ಬರ್ನ್ಸ್ ಆಗಿದ್ದವು ಸಿಂಗರ್ ಜೋಡಿ ಯರ ಮುಖಗಳು. ಅವರ ಪಕ್ಕದಲ್ಲೇ ಮುಖಗಳನ್ನು ಕವರ್ ಮಾಡಿ ರುವ ಎರಡು ಪುಟ್ಟ ದೇಹಗಳನ್ನು ನೋಡಿದಾಗ ಮಹೇಶನ ಕಣ್ಣಂಚಿನಿಂದ ಕೆನ್ನೆಯ ಮೇಲಕ್ಕೆ ಅವಶ್ಯಕ್ಕವೇ ಜಾರಿದವು ಕಣ್ಣೀರ ಹನಿಗಳು

ಲೂಸಿ, ಪೀಟರ್ ದೇಹಗಳು, ಕರುಣೆಯಿಲ್ಲದ ಬೆಂಕಿ ಸುಟ್ಟು ಮಸಿ ಮಾಡಿಬಿಟ್ಟಿದೆ.

ಎಷ್ಟೆಷ್ಟೋ ಭಯಂಕರ ಮರಣಗಳನ್ನು ತನ್ನ ವೃತ್ತಿ ಜೀವನದಲ್ಲಿ ನೋಡಿದವನು ಮಹೇಶ... ಭೀಭತ್ಸ ಸಾವುಗಳನ್ನೂ ನಿರ್ಲಿಪ್ತವಾಗಿ ನೋಡುವ ಕಲ್ಲು ಗುಂಡಿಗೆ ಅವನದು....

ಆದರೆ.... ಈ ಕ್ಷಣ....ಇನ್ನೊಂದು ನಿಮಿಷ ಆ ಮೃತ ದೇಹಗಳನ್ನು ನೋಡುತ್ತಿದ್ದರೆ ದುಃಖದಿಂದ ಫೈಂಟ್ ಆಗಿ ಬೀಳ ಬೇಕೇನೋ ಅನ್ನಿಸತೊಡ ಗಿತ್ತು. ತಲೆ ಪಕ್ಕಕ್ಕೆ ತಿರುಗಿಸುವುದರಲ್ಲಿದ್ದಾಗಲೇ ಗಾಳಿಯ ವೇಗ ತುಸು ಹೆಚ್ಚಾಗಿ ಸಿಂಗರ್‌ಗೆ ಹೊದಿಸಿದ್ದ ಬಿಳಿಯ ಬಟ್ಟೆಯನ್ನು ಮೇಲೆತ್ತಿತ್ತು.

ಬೊಬ್ಬೆಗಳೆದ್ದು, ಕಂದು ವಿಕೃತವಾಗಿತ್ತು ಸಿಂಗರ್ ಶರೀರ. ಅವ ನನ್ನು ತಾನೇ ಈ ದುರ್ಭರ ಸಾವಿಗೆ ತಳ್ಳಿದೆ ಎಂಬ ಗಿಲ್ಟಿ ಫೀಲಿಂಗ್‌ನಿಂದ ಹಿಂದಕ್ಕೆ ತಿರುಗ ಹೋದ ಮಹೇಶ.

ಆಗಲೇ ಅವನ ಕಣ್ಣಿಗೆ ಬಿದ್ದಿತ್ತೊಂದು ವಿಚಿತ್ರ ದೃಶ್ಯ. ಸಿಂಗರ್ ಮುಷ್ಟಿ !

ಮುಚ್ಚಿದ್ದ ಆ ಮುಷ್ಟಿ ತನಗೇನೋ ಸಂದೇಶ ನೀಡುತ್ತಿದೆ ಅನ್ನಿಸಿತ್ತು

ಮಹೇಶನಿಗೆ. ಕಣ್ಣು ಕೊನೆಯಿಂದ ಫೈರ್ ಸರ್ವೀಸ್‌ನವರನ್ನು ಗಮನಿಸಿದ. ಎಲ್ಲರ ಕಣ್ಣುಗಳೂ ಬಂಗಲೆಯ ಕಡೆಗೇನೇ.

ಮೆಲ್ಲಗೆ ಸಿಂಗರ್‌ನನ್ನು ಸಮೀಪಿಸಿ ಬೂಟುಕಾಲ ಮೇಲೆ ಕುಳಿತು ಸಿಂಗರ್ ಮುಷ್ಟಿಯನ್ನು ಬಲವಂತವಾಗಿ ಬಿಡಿಸಿದ.

ಮರುಕ್ಷಣ ಅರಳಿದ್ದವು ಮಹೇಶನ ಕಂಗಳು.

ಸಿಂಗರ್ ಶರೀರವೆಲ್ಲಾ ಬೆಂಕಿ ಗಾಹುತಿಯಾಗಿದ್ದರೂ ತನ್ನ ಅಂಗೈ ಏನನ್ನು ಸೇಫಾಗಿಟ್ಟುಕೊಂಡಿದ್ದನೆಂಬುದು ಅರ್ಥವಾಗಿತ್ತವನಿಗೆ.

ಅಂಗೈ ಮೇಲೆ ಡಾಟ್ ಪೆನ್ನಿಂದ ಬರೆದ ಅಕ್ಷರಗಳು ಅಂಕು ಡೊಂಕಾಗಿ ಅಸ್ಪಷ್ಟವಾಗಿ ಕಾಣುತ್ತಿದ್ದವು.

'ರೋಡಿಂಗ್ ಹೆಲ್ಮ್‌ಗಳನ್ನು ಅಪಹರಿಸಿದ....ಕ್ಷಮಿಸು....ತಡೆಯಲಾಗಲಿಲ್ಲ.

ತಟಕ್ಕನೆದ್ದು ನಿಂತ ಮಹೇಶ!

"ರೋಡಿಂಗ್....ಬಾಸ್ಟರ್ಡ್ ರೋಡಿಂಗ್....!" ಕಟಕಟವೆಂದಿದ್ದವು ಅವನ ಹಲ್ಲುಗಳು.

# 10

ಪಾನ್ ಅಮೇರಿಕ ಜಂಬೋಜೆಟ್ ಮೆಕ್ಸಿಕೊ ಲ್ಯಾಂಡ್ ಮೇಲೆ ಇಳಿಯುವ ವೇಳೆಗೆ ಟೈಂ ಮಧ್ಯಾಹ್ನ ಹನ್ನೆರಡು ದಾಟಿತ್ತು.

ಎಲ್ಲರಿಗಿಂತಾ ಕೊನೆಯವನಾಗಿ ವಿಮಾನದಿಂದ ಕೆಳಕ್ಕಿಳಿದ ಮಹೇಶ. ಕೈನಲ್ಲೊಂದು ಬ್ರೀಫ್‌ಕೇಸ್ ಇತ್ತಷ್ಟೇ. ಏರ್‌ಪೋರ್ಟ್ ವ್ಯಾನ್ ಕಡೆಗೆ ಸರಸರನೆ ಹೆಜ್ಜೆ ಹಾಕಿದ.

ಕಾಲು ಗಂಟೆಯಲ್ಲಿ ಏರ್‌ಪೋರ್ಟ್ ಫಾರ್ಮಾಲಿಟೀಸ್ ಮುಗಿಸಿಕೊಂಡು ಹೊರ ಬಂದ, ತೋರು ಬೆರಳಿಂದ ಒಂದು ಕ್ಯಾಬ್‌ಗೆ ಸನ್ನೆ ಮಾಡಿ ಅದು ಬಂದು ಮುಂದೆ ನಿಂತೊಡನೆ ಹಿಂದಿನ ಸೀಟಿನಲ್ಲಿ ಆಸೀನನಾದ.

"ಎಲ್ಲಿಗೆ ಸಿಸ್ಯೋರ್ ?" ಕೇಳಿದ ಚಾಲಕ

"ರೋಡಿಂಗ್ ಬಾರ್ !" ಗಂಭೀರವಾಗಿ ಹೇಳಿದ ಮಹೇಶ.

ಕ್ಷಣ ತಟಪಟಾಯಿಸಿದ ಕ್ಯಾಬ್ ಸ್ಟಾರ್ಟ್ ಮಾಡಿದ ಡ್ರೈವರ್. ಮುನ್ನುಗ್ಗಿತು ಕ್ಯಾಬ್.

ಸಿಗರೇಟೊಂದು ಹತ್ತಿಸಿ ಓರೆಗಣ್ಣಿನಿಂದಲೇ ಭುಜದ ಹಿಂದೆ ನೋಡಿದ ಮಹೇಶ.

ಯಾವುದೇ 'ಟೈಲ್' ಕಾಣಿಸಿಕೊಳ್ಳಲಿಲ್ಲ. ಅರ್ಧ ಗಂಟೆಯಲ್ಲಿ ಅವನನ್ನು ರೋಡಿಂಗ್ ಬಾರ್ ಮುಂದೆ ಡ್ರಾಪ್ ಮಾಡಿತು ಕ್ಯಾಬ್.

ನಿಧಾನವಾಗಿ ಕೆಳಕ್ಕಿಳಿದು ಫೇರ್ ಸಲ್ಲಿಸಿ ತಲೆಯ ಮೇಲಿದ್ದ ಮೆಕ್ಸಿಕನ್ ಹ್ಯಾಟ್ ಕೆಳಗಿಳಿದುಕೊಂಡು ಬಾರ್‌ನೊಳಕ್ಕೆ ನಡೆದ ಮಹೇಶ. ನಡು ಮಧ್ಯಾಹ್ನವಾದ್ದರಿಂದ ಬಾರ್ ನಿರ್ಮಾನುಷ್ಯವಾಗಿತ್ತು. ಹೆಜ್ಜೆಯ ಶಬ್ದಕ್ಕೆ ಕೌಂಟರ್ ಬಳಿ ಕುಳಿತು ಪ್ಲೇಬಾಯ್ ಮ್ಯಾಗಜೈನ್ ತಿರುಗಿಸುತ್ತಿದ್ದ ವ್ಯಕ್ತಿ ತಲೆ ಮೇಲೆತ್ತಿದ್ದ. ಮಹೇಶನನ್ನು ಕಂಡೊಡನೆ ಅವನ ಮುಖ ನಿಸ್ತೇಜಗೊಂಡಿತು. ಕೈನಲ್ಲಿದ್ದ ಮ್ಯಾಗಜೈನ್ ಬಿಟ್ಟು ಕಂಗಾಲಾಗಿ ಮೇಲೆದ್ದು ಒಳಕ್ಕೆ ಓಡಲು ಪ್ರಯತ್ನಿಸಿದ.

ಭುಜದ ಮೇಲಿದ್ದ ಲಾಂಗ್‌ಕೋಟ್ ಪ್ಯಾರಾಶೂಟ್‌ನಂತೆ ಅವನ

ಮೇಲಕ್ಕೆಸೆದ ಮಹೇಶ. ಕ್ಷಣಾರ್ಧದಲ್ಲಿ ಆ ವುಲ್ಲನ್ ಕೋಟ್ ಆ ವ್ಯಕ್ತಿಯ ಮುಖವನ್ನು ಕವರ್ ಮಾಡಿತ್ತು ! ಕಕ್ಕಾಬಿಕ್ಕಿಯಾಗಿ ಆ ಕೋಟ್ ಕಿತ್ತೆಸೆಯಲು ಪ್ರಯತ್ನಿಸಿದ ಅವನನ್ನು ಒಂದೇ ಹೆಜ್ಜೆಯಲ್ಲಿ ಸಮೀಪಿಸಿದ ಮಹೇಶ, ಅವನ ಕೈ ಸರ್ರನೆದ್ದಿತು.

ಛಟಾರ್....!

ಕೋಟ್ ಮುಚ್ಚಿದ್ದ ಮುಖವನ್ನೇ ಬಲವಾಗಿ ಪಂಚ್ ಮಾಡಿದ್ದ ಅವನು. ಸಣ್ಣಗೆ ಮುಲುಗುತ್ತಾ ಕೌಂಟರ್ ಮೇಲೆ ಬಿದ್ದ ಆ ವ್ಯಕ್ತಿ. ಸಾಲಾಗಿ ಜೋಡಿಸಿದ್ದ ಬಾಟಲ್ಸ್ ಸಾಲಾಗಿಯೇ ನೆಲಕ್ಕುರುಳಿ ಫಳ್.... ಫಳಾರ್....ಎಂದು ಒಡೆದು ಹೋದವು

ಮಹೇಶನ ಬಲಗೈ ಅವನ ಗಂಟಲಿಡಿಯಿತು.

"ರೋಡಿಂಗ್ ಎಲ್ಲಿ ?" ಹಲ್ಲು ಕಚ್ಚಿ ಕೇಳಿದ ಮಹೇಶ ಎಡಗೈಯಿಂದ ಕೋಟ್ ಪಕ್ಕಕ್ಕೆ ಸರಿಸಿ

ರಕ್ತವೇ ಇಲ್ಲದಂತೆ ಇಂಗಿ ಹೋಗಿತ್ತು ಆ ವ್ಯಕ್ತಿಯ ಮುಖ. ಎಡಗೈ ಮೇಲೆತ್ತಿದ ಮಹೇಶ.

"ರೋ....ರೋಡಿಂಗ್ ಮೇಲಿನ ಕೊಠಡಿಯಲ್ಲಿ ಲಾಂಚ್ ತೆಗೆದುಕೊಳ್ಳುತ್ತಿದ್ದಾನೆ !" ನಡುಗುತ್ತಲೇ ಹೇಳಿದ ಅವನು

ಅವನ ಕುತ್ತಿಗೆಯ ಹಿಂಬದಿಗೆ ಚಾಪ್ ಮಾಡಿ ಇನ್‌ಸ್ಟಂಟಾಗಿ ಮೂರ್ಛೆ ಹೋದ ಅವನನತ್ತ ಒಗೆದು ಲಾಂಗ್ ಕೋಟ್ ಭುಜದ ಮೇಲೆ ಹಾಕಿಕೊಂಡು ಮೆಟ್ಟಿಲು ಹತ್ತಿದ ಮಹೇಶ.

ಕೊನೆಯ ಮೆಟ್ಟಿಲು ದಾಟಿ ಹಾಲ್‌ನಲ್ಲಿ ಕಾಲಿಡುತ್ತಿದ್ದಂತೆಯೇ ಕಾಣಿಸಿಕೊಂಡಿದ್ದ ರೋಡಿಂಗ್.

"ವೆಲ್‌ಕಂ ಕಿಲ್‌ಮಾಸ್ಟರ್....ನೀನು ಹೇಗಾದರೂ ಇಲ್ಲಿಗೆ ಬಂದೇ ಬರುವೆಯೆಂದು ಲೆಕ್ಕ ಹಾಕಿ ನಿನಗಾಗಿ ಎಲ್ಲಾ ಏರ್ಪಾಟುಗಳನ್ನು ಮಾಡಿದ್ದೇನೆ. ಹೌ ಆರ್ ಯು ಮೈ ಓಲ್ಡ್ ಫ್ರೆಂಡ್....?" ಸಿಡುಬಿನ ಕಲೆಯ ಮಕ್ಕಳು ನೋಡಿದರೆ ಬೆದರಿ ಬೀಳುವಷ್ಟು ವಿಕೃತ ಮುಖದ ರೋಡಿಂಗ್ ಮುಗುಳ್ನಕ್ಕಾಗಲೇ ಇನ್ನಷ್ಟು ಅಸಹ್ಯವಾಗಿ ಕಂಡ ಮಹೇಶನಿಗೆ

ಗೋಲ್ಡನ್ ಗ್ಯಾಂಗ್‌ನ ಪುಕ್ಸ್‌ಕರ್ಸ್ ಹೆಡ್ ಅವನು. ಒಂದೆರಡು ಸಲ ಮುಖಾಮುಖಿಯಾಗಿ 'ಜಿಂಕೆ'ಯಿಂದ ಪಾರಾಗಿದ್ದ ರೋಡಿಂಗ್. ಈ ಸಲ ಪಾರಾಗಲೇ ಬಾರದಿವನು ಎಂದು ನಿರ್ಧರಿಸಿ ಬಿಟ್ಟಿದ್ದ 'ಬ್ಲಡ್ ಹಂಟರ್'!

ಪ್ರಶಾಂತವಾಗಿಯೇ ಸುತ್ತಲೂ ನೋಡಿದ ಮಹೇಶ. ಅತಿಗೊಳ್ಳುರಂತೆ ಆ ಹಾಲ್‌ನಲ್ಲಿ ವಲಯಾಕಾರದಲ್ಲಿ ನಿಂತಿದ್ದರು ಗ್ಯಾಂಗ್ ಮೆಂಬರ್ಸ್. ಎಲ್ಲರ ಕೈಗಳಲ್ಲೂ ಮಿಂಚುತ್ತಿರುವ ಪಿಸ್ತೂಲುಗಳು. ಅವೆಲ್ಲಾ ಮಹೇಶನೆದೆಯಿಂದ ಯಾವಾಗ ರಕ್ತ ಚಿಮ್ಮಿಸುವವೋ ಎಂದು ಆತುರದೊಡನೆ ಕಾಯುತ್ತಿದ್ದವು!

೦ ೦ ೦ ೦

"ಹೇಗಿದೆ 'ಜಿಂಕೆ' ನನ್ನ ಏರ್ಪಾಟುಗಳು!" ಸಗರ್ವ ನಗೆಯೊಡನೆ ಒಂದೆಜ್ಜೆ ಮುಂದೆ ಬಂದ ರೋಡಿಂಗ್.

"ಬಹಳ ಸಿಲ್ಲಿಯಾಗಿವೆ ರೋಡಿಂಗ್... ನಿನ್ನೊಬ್ಬನ ಪ್ರಾಣ ಇಷ್ಟೆಲ್ಲಾ ಜನರಿಂದ ರಕ್ಷಿಸಲ್ಪಡುವಷ್ಟು ಬೆಲೆ ಬಾಳುವಂತಹದ್ದಲ್ಲ ಬಿಡು....ಹೆಲ್ಗಾ ಎಲ್ಲಿ?" ಕೇಳಿದ ಮಹೇಶ ಬ್ರೀಫ್‌ಕೇಸ್ ಕೆಳಗಿಟ್ಟು.

ಕ್ಷಣ ಕೋಪದಿಂದ ಮುಖ ಕೆಂಪಾದರೂ ತಡೆದುಕೊಂಡ ರೋಡಿಂಗ್.

"ಅಯ್ಯೋ ಪಾಪ....ಆ ವಿಷಯ ಅರಿಯದೇ ಇಲ್ಲಿಗೆ ಓಡೋಡಿ ಬಂದೆಯೇನು? ಓಲ್ಡ್ ಸಿಂಗರ್ ಅತ್ತ ತಿಳಿಸೇನು ನಾನೆಲ್ಲಿರುವೆನೆಂದು?" ಕರ ಕರ ಧ್ವನಿಯಲ್ಲಿ ಕೇಳಿದ.

"ಹೌದು ರೋಡಿಂಗ್....ಸಿಂಗರ್ ಅತ್ತ ಹೇಳಿತು ನಿನ್ನ ಬಗ್ಗೆ....ನೀನು ಗ್ಯಾಂಗ್‌ನಲ್ಲಿ ಬಹಳ ಹೆಸರು ವಾಸಿಯಾದ ಬಾಸ್ಟರ್ಡ್ ಎಂದು ತಿಳಿದಿದ್ದ ಕಾರಣ ನಿನ್ನ ವಿಳಾಸ ತಿಳಿಯಲೇನೂ ಕಷ್ಟವೆನಿಸಲಿಲ್ಲ! ಹೆಲ್ಗಾಳನ್ನು ಹೊತ್ತು ತಂದು ಯಾರಿಗೊಪ್ಪಿಸಿದೆ?" ಮೃದುವಾಗಿಯೇ ಕೇಳಿದ ಮಹೇಶ.

"ನನ್ನನ್ನು ಹೆದರಿಸಬೇಡ 'ಜಿಂಕೆ',...ನಿನಗೇ ಬಾರ್‌ನಲ್ಲೇ ಸಮಾಧಿ

ಕಟ್ಟುತ್ತೇನೆ ಈ ನಿಮಿಷದಲ್ಲೇ....'

ಅವನ ಮಾತು ಮುಗಿಯುವುದರೊಳಗೇ ಮಿಂಚಿನ ಸೆಳಕಂತೆ ಮೂವ್ ಆದ ಮಹೇಶ.

ಧಡ್....ಧಡ್....ಧಡಾಧಡ್...

ಅದುರಿ ಹೋಗಿ ಎಲ್ಲರೂ ಟ್ರಿಗರ್ ಪ್ರೆಸ್ ಮಾಡಿಬಿಟ್ಟರು.

ಆದರೆ....ಡೇಗೆಯಂತೆ ಅರ್ಧ ಕ್ಷಣ ಮೊದಲು ಗಾಳಿಯಲ್ಲಿ ಹಾರಿ ಒಂದು ಪಲ್ಟಿಯೊಡೆದು ರೋಡಿಂಗ್ ಹಿಂದ ಲ್ಯಾಂಡ್ ಆಗಿ ಅವನ ಕುತ್ತಿಗೆಗೊಂದು ಕೈ ಸುತ್ತಿ ಬಿಟ್ಟಿದ್ದ !

ನಿರೀಕ್ಷಿಸಿಯೇ ಇರದ ಈ ಹಠಾತ್ಪ್ರಸಂಗಕ್ಕೆ ಕ್ಷಣ ಸ್ತಬ್ಧನಾದ ರೋಡಿಂಗ್ ಚೇತರಿಸಿಕೊಳ್ಳುವ ವೇಳೆಗೆ ಕೋಳ ಬಂಧನ ಮ್ಯಾಕ್ಸಿಮಮ್ ಪ್ರೆಷರ್‌ನೊಡಗಿತ್ತು. ಅಲ್ಲಾಡಿದರೆ ಫಟಕ್ !

"ಸ್ಟಾಪ್ ಫೈರಿಂಗ್....ಇಲ್ಲದಿದ್ದರೆ ನಿಮ್ಮ ಬಾಸ್ ಕತ್ತು ಮುರಿದು ಬಿಡುತ್ತೇನೆ...." ಗರ್ಜಿಸಿದ ಮಹೇಶ.

ಮೆಕಾನಿಸಂ ಕೆಟ್ಟ ರೋಬೋಟ್‌ಗಳಂತೆ ಇರುವ ಭಂಗಿಯಲ್ಲೇ ನಿಂತು ಬಿಟ್ಟರು ರೋಡಿಂಗ್ ಅನುಚರರು.

"ಈಗ ಹೇಳು ರೋಡಿಂಗ್....ಹೆಲ್ಗಾ ಎಲ್ಲಿದ್ದಾಳೆ ?" ಕಟು ಧ್ವನಿಯಲ್ಲಿ ಕೇಳಿದ ಮಹೇಶ.

ಉಸಿರಾಡಲೇ ಕಷ್ಟ ಪಡುತ್ತಿದ್ದ ರೋಡಿಂಗ್.

"ಬಾಸ್ಟರ್ಡ್ಸ್....'ಜಾಕ್' ಕಂಡೊಡನೆ ಶೂಟ್ ಮಾಡಿ ಎಂದು ಸುಪ್ರೀಂ ಕಮಾಂಡ್ ಆರ್ಡರ್ಸ್ ! ರೋಡಿಂಗ್‌ಗಾಗಿ ನಾವು ಆ ಆಜ್ಞೆ ಉಲ್ಲಂಘಿಸಲಾಗದು !" ಎಂದು ಒದ್ದಾಂದೆದಮ್ಮ ಕಿರುಚಿಕೊಂಡ ಒಬ್ಬ ಗ್ಯಾಂಗ್ ಗೂನ್.

ಮರುಕ್ಷಣವೇ ಪರಿಸ್ಥಿತಿಯ ಅವಗಾಹನೆ ಮಾಡಿಕೊಂಡ ಮಹೇಶ. ಇವರು ರೋಡಿಂಗ್‌ಗೆ ಸಹಾಯ ಮಾಡಲೆಂದು ಬಂದಿರುವ ಕೋಬ್ರಾ ಕಳಿಸಿರುವ ಕಿಲ್ಲರ್ಸ್. ರೋಡಿಂಗ್‌ಗೆ ನೆರವು ಹಾಕುವವರಲ್ಲ !

ಆ ಯೋಚನೆ ಹೊಳೆದೊಡನೆ ಅವನೊಡಗೊಡಿಯೇ ಪಕ್ಕಕ್ಕುರುಳಿ ಬಿಟ್ಟ !

ಧಡಾ ಧಡ್....

ಆ ಪಿಸ್ಟಲ್ ಹಾಕಿ ವಿಕೃತ ಶಬ್ದಗಳೊಡನೆ ಡಿಫ್ಲೆಕ್ಟ್ ಆದವು ಬುಲೆಟ್ಸ್ ಒಂದು ಕೈ ರೋಡಿಂಗ್ ಶಾತ್ತಿಗೆಗೆ ಹೆಬ್ಬಾವಂತೆ ಸುತ್ತಿಕೊಂಡೇ ಇತ್ತು. ಬಲಗೈ ಹೋಲ್‌ಸ್ಟರ್‌ಗೆ ಸರಿ 'ರಾಣಿ'ಯನ್ನು ಹೊರಕ್ಕೆ ತೆಗೆದ ಮಹೇಶ. ಯಾವುದಕ್ಕೂ ಒಳ್ಳೆಯದೆಂದು ಅದನ್ನು ಟ್ರ್ಯಾಕ್ಸ್‌ಯಲ್ಲಿರುವಾಗ ಬ್ರೀಫ್ ಕೇಸ್‌ನಿಂದ ಹೋಲ್‌ಸ್ಟರ್‌ಗೆ ವರ್ಗಾಯಿಸಿದ್ದ ಅವನು.

ಮಹೇಶ ನಿರಾಯುಧನೆಂಬ ಭಾವನೆಯೊಡನೆ ಮುಂದೆ ಬರುತ್ತಿದ್ದ ಅವರು ಗಮನಿಸುವುದರೊಳಗೆ ಭಯಂಕರವಾಗಿ ಗರ್ಜಿಸಿತ್ತು 'ರಾಣಿ' !

ಧನ್... ಧನ್....ಧನ್....

ಭೀಕರ ಆಕ್ರಂದನೆಗಳೊಡನೆ ಮೂವರು ಕೆಳಕ್ಕುರುಳಿ ರಕ್ತದ ಮಡು ವಲ್ಲಿ ವಿಲವಿಲ ಒದ್ದಾಡಿ ಹೆಣಗಳಾದರು. ಮಿಕ್ಕವರು ಪರಿಸ್ಥಿತಿ ಗ್ರಹಿಸಿ ಕಂಗಾಲಾಗಿ ಪಿಲ್ಲರ್‌ಗಳ ಮರೆ ಸೇರಲು ಹಿಂದಕ್ಕೆ ನೆಗೆಯತೊಡಗಿದರು.

ಆ ಕ್ಷಣಗಳ ಇಂಟರ್‌ವೆಲ್ ಯುಟಿಲೈಸ್ ಮಾಡಿಕೊಂಡ ಮಹೇಶ.

ಧನ್....ಧನ್... ಧನ್....

ಬೆಂಕಿಯುಗುಳಿತು ಲ್ಯೂಗರ್, ಇನ್ನೂ ಮೂವರು ಕೆಳಕ್ಕುರು ಳಿದರು.

ಐವರು ಮಾತ್ರ ಉಳಿದಿದ್ದರಿನ್ನು. ಒಂದೇ ಕೈನಲ್ಲೇ ಸ್ಪೇರ್‌ಕ್ಲಿಪ್ 'ರಾಣಿ'ಗೆ ಲೋಡ್ ಮಾಡಿದ ಮಹೇಶ. ಉಸಿರಾಟ ಕಟ್ ಆಗಿ ಒದ್ದಾಡಿ ಒದ್ದಾಡಿ ಮೂರ್ಛೆ ಹೋಗಿದ್ದ ರೋಡಿಂಗ್ ಆಪ್ಟೋವಿತ್ತಿಗೆ ಒಂದಷ್ಟು ಹೊತ್ತು ತನ್ನಿಂದ ಮುಂದಿನ ಸಮಸ್ಯೆಯತ್ತ ಕಾನ್ಸನ್ಟ್ರೇಟ್ ಮಾಡು ವಂತೆ ಮಾಡಿದ.

ಅತ್ತ ಕಡೆಯಿಂದ ಶತ್ರುಗಳು ಅವನ ಕದಲಿಕೆಯನ್ನು ಹದ್ದಿನ ಕಣ್ಣು ಗಳೊಡನೆ ಕಾಯುತ್ತಿದ್ದರು. ಮಹೇಶ ಅವರ ಮೂವ್‌ಮೆಂಟ್‌ಗಾಗಿ ಕಾಯುತ್ತಿದ್ದ ! ಸಡನ್ನಾಗಿ ಆ ಪ್ರದೇಶದಲ್ಲಿ ಸಂಪೂರ್ಣ ನಿಶ್ಶಬ್ಧ !

ಐದು ನಿಮಿಷ ಕಳೆಯಿತು ...ಅವರನ್ನು ಹೊರ ಕರೆಸಲು ಏನು ಮಾಡುವುದೆಂಬ ತೀವ್ರಾಲೋಚನೆಯೊಡನಿದ್ದ ಮಹೇಶ. ಬಹಳ ಹೊತ್ತು ಕಾಲಹರಣ ಮಾಡುವಂತಿಲ್ಲ !

ಮಹೇಶನ ಕಣ್ಣುಗಳು ಹಾಲ್ ಸಿಲಿಂಗ್‌ನಲ್ಲಿ ತೂಗಾಡುತ್ತಿದ್ದ ದೊಡ್ಡ ಷಾಂಡಲಿಯರ್ ಗಮನಿಸಿದವು. ಸುಂದರ ಗಾಜಿನ ಡಿಸೈನ್‌ನೊಡನೆ ತಯಾರಿಸಿದ್ದರು ಅದನ್ನು ಸಣ್ಣ ಕಬ್ಬಿಣದ ಚೈನ್ ಮೂಲಕ ತೂಗಾಡುತ್ತಿತ್ತು ಅದು.

ಆ ಚೈನ್‌ಗೆ ನೇರವಾಗಿ ಏಮ್ ಮಾಡಿದ ಮಹೇಶ.

ಧಸ್....

ಚೈನ್‌ಗೆ ಪರ್ಫೆಕ್ಟಾಗಿ ತಾಕಿತ್ತು 'ರಾಣಿ'ಯ ಬುಲೆಟ್. ಲಿಂಕ್ ಕಟ್ಟಾಗಿ ದೊಡ್ಡ ಚಕ್ರಿಯಂತೆ ಹಾಲ್ ಮಧ್ಯದಲ್ಲಿ ನೆಲಕ್ಕೆ ಬಿತ್ತು ಷಾಂಡೆಲಿಯರ್.

ಏಕ್‌ದಂ ಗುಂಡಿನ ಶಬ್ದದ ಹಿಂದೆಯೇ ಭಳ್ಳೆಂಬ ಗಾಜು ಒಡೆವ ಶಬ್ದ ಕೇಳಿ ಅದುರಿ ಹೋಗಿ ಏನಾಯಿತು ಎಂಬುದರ್ಥವಾಗದೆ ಗಾಬರಿಯಿಂದ ಮೆಟ್ಟಿಲುಗಳ ಕಡೆಗೆ ಜಂಪ್ ಮಾಡಿದರು ಶತ್ರುಗಳು. ತನ್ಮೂಲಕ 'ರಾಣಿ'ಗೆ ಸುಲಭ ಎರೆಗಳಾದರು !

ಆ ಅವಕಾಶಕ್ಕಾಗಿಯೇ ಕಾಯುತ್ತಿದ್ದ ಮಹೇಶ.

ಧಸ್....ಧನ್....ಧಸ್....

ಮೂವರು ಬುಲೆಟ್ ಹೋಲ್‌ಗಳೊಡನೆ ಹೆಣಗಳಾದರೆ ಇನ್ನಿಬ್ಬರು ಗಾಬರಿಯಲ್ಲಿ ಕಾಲುಗಳು ಜಾರಿ ಮೆಟ್ಟಿಲುಗಳ ಮೇಲಿಂದ ಕಟುರನೆ ಕಿರುಚುತ್ತಾ ಉರುಳಿಕೊಂಡು ಹೋದರು. ಅವರು ಬಿದ್ದ ಫ್ಲೋರ್‌ಗೆ ಅವರಿನ್ನು ಮೇಲೇಳಲಾರರೆಂದು ಅರ್ಥ ಮಾಡಿಕೊಂಡ ಮಹೇಶ ರೋಡಿಂಗ್ ಕಡೆಗೆ ತಿರುಗಿದ.

ಅದಾಗ ಎಚ್ಚರಗೊಳ್ಳುತ್ತಿದ್ದ ರೋಡಿಂಗ್ ಪಿಸ್ತೂಲಿನೊಡನಿದ್ದ ಮಹೇಶನನ್ನು ನೋಡಿ ಹಿಂದಕ್ಕುರುಳ ಹೋದ. ನಳಿಗೆಯನ್ನು ಅವನ ಮುಖಕ್ಕೆರಾಚಿ ಹಿಡಿಯುವ ಘಟ್ಟಿಯಾವ ಬಿಟ್ಟ ಮಹೇಶನ ಮುಖದ ಮಧ್ಯ

ಭಾಗಕ್ಕೆ. ಪಟಾಗು, ಪಟಾಖು ಏಕವಾಗಿ ಮೂರು ಹಲ್ಲುಗಳು ರಕ್ತದ ಸಮೇತ ಹೊರ ನುಗ್ಗಿ ಬಂದವು ಬಾಯಿಂದ.

ಸಾಲಿಡ್ಡಾಗಿ ಸೊಂಟಕ್ಕೆರಡು ಕಿಕ್ ಮಾಡಿ 'ರಾಣಿ'ಯನ್ನು ಸೊಂಟಕ್ಕೆ ಸೇರಿಸಿ ಬಲ ಮೊಣ ಕೈ ಟ್ವಿಸ್ಟ್ ಮಾಡುತ್ತಾ ಅವನ ಮುಂದೆ ಮೊಣ ಕಾಲೂರಿ ಕುಳಿತ ಮಹೇಶ. ಸರ್ರನೆ ಅಂಗೈಗೆ ಜಾರಿತ್ತು 'ರಾಜ' !

"ರೋಡಿಂಗ್....ಬದುಕುವಾಸೆ ನಿನಗೆ ಈಗಂತೂ ಹೆಚ್ಚಾಗಿರಬೇಕಲ್ಲವೇ" ನಿಧಾನವಾಗಿ ಕೇಳಿದ.

"ಮ....ಹೆ ಶ್....! ಪ್ಲೀಸ್ ಡೋಂಟ್ ಕಿಲ್ ಮಿ !" ಬೇಡಿಕೊಂಡ ರೋಡಿಂಗ್.

"ನೋ....ನೆವರ್.. ನಾನು ಕೊಲ್ಲುವುದಿಲ್ಲ....ನಿನ್ನಷ್ಟಕ್ಕೆ ನೀನೇ ಸಾಯುವಂತೆ ಮಾಡುತ್ತೇನೆ ! ಓ ಕೆ. ?" ಅಂದ ಮಹೇಶ.

"ಬೆ....ಬೇಡ....ನನ್ನ ಕ್ಷಮಿಸು ಜಂಕೆ'! ನಾನೊಬ್ಬ ನೀಚ....ಪರಮ ಕ್ರೂರ....ಆದರೆ....ಇದೊಂದು ಅವಕಾಶ ಕೊಡು....ಗ್ಯಾಂಗ್ ಬಿಟ್ಟು ಸಿಂಗರ್ ನಂತೆ ನಾನೂ ..."

'ರಾಜ' ಕಸಕ್ಕನಿಳಿಯಿತು. ಹಾಗೆ ಅವನ ಭುಜದಾಳದಲ್ಲಿ....ಬಂದು ರೌಂಡ್ ತಿರುಗಿಸಿ ಹೊರಕ್ಕೆಳೆದ ಮಹೇಶ. ರಕ್ತ ಫೌಂಟನ್ನಂತೆ ಚಿಮ್ಮಿ ಬಂತು. ಭೀಕರ ಆಕ್ರಂದನದೊಡನೆ ವಿಲವಿಲ ಒದ್ದಾಡಿದ ರೋಡಿಂಗ್.

"ಸಿಂಗರ್ ನಿನಗೇನು ಮಾಡಿದನೆಂದು ಅವನ ವಂಶವನ್ನೇ ನಿರ್ವಂಶ ಮಾಡಿದೆ ಸನ್ ಆಫ್ ಎ ಬಿಚ್...!" ಆವೇಶದಿಂದ ಕಂಪಿಸುತ್ತಾ ಕೇಳಿದ ಮಹೇಶ

"ಹೆಲ್ಗಾ...ಹೆಲ್ಗಾಳನ್ನು ಅಪಹರಿಸುವಾಗ ಅಡ್ಡ ಬಂದ....ಅದಕ್ಕೇ.... ಅದಕ್ಕೇ ..." ತುಟಿಗಳನ್ನು ಬಹಳ ಕಷ್ಟಪಟ್ಟು ಕದಲಿಸಿದ ರೋಡಿಂಗ್.

"ಅವನ ಹೆಂಡತಿ ಏನು ಮಾಡಿದ್ದಳು....ಆ ಮಕ್ಕಳು ನಿನಗೇನು ಮಾಡಿದರು....ರೋಡಿಂಗ್....ಅವರನ್ನು ಸಜೀವವಾಗಿ ಸುಟ್ಟು ನಿನ್ನ ಕಿರಾತಕ ತನಕ್ಕೆ ನೀನು ಹೇಗೆ ತೀರಿಸಿಕೊಳ್ಳಬೇಕೆಂದಿರುವೆ ಗೊತ್ತೇ ?" ಸಡನ್ನಾಗಿ

ಚೂರಿ ಭುಜದಿಂದ ಅಂಗೈವರೆಗೆ ಸೀಳಿಬಿಟ್ಟಿತು. ಜೊತೆಗೆ ನಾಲ್ಕು ಬೆರಳುಗಳು ಕಚಕ್ಕನೆ ಕಟ್ಟಾಗಿ ಕೆಳಗೆ ಬಿದ್ದವು.

"ಅಮ್ಮಾ....!" ಆಕಾಶಕ್ಕೆ ಕೇಳಿಸುವಂತೆ ಕೂಗು ಹಾಕಿದ ರೋಡಿಂಗ್. ಎರಡಾಗಿ ಸೀಳಿದಂತೆ ಕಾಣುತ್ತಿತ್ತು ಅವನ ಕೈ. ರಕ್ತವಂತೂ ಕಾಲುವೆಯಂತೆ ಹರಿಯುತ್ತಿತ್ತು.

ನರಕಯಾತನೆ ಅನುಭವಿಸುತ್ತಾ ನುಲಿಯುತ್ತಿದ್ದ ರೋಡಿಂಗ್. ಬೆಂಕಿಯುಂಡೆಯಂತಾಗುತ್ತಿತ್ತು ಇಡೀ ಮೈಗೆ.

"ಹೆಲ್ಗಾಳನ್ನು ಎಲ್ಲಿ ಬಂಧಿಸಿದ್ದೀರಿ ?" ಚೂರಿಯ ಮೊನೆ ಸರಿಯಾಗಿ ಅವನ ಮೂಗಿನ ಮೇಲಿರಿಸಿ ಕೇಳಿದ ಮಹೇಶ.

"ಹೇಳುತ್ತೇನೆ...ನನಗಿನ್ನೇನೂ ಮಾಡಬೇಡ...." ಅರಚಿದ ರೋಡಿಂಗ್.

ಗ್ಯಾಂಗ್‌ನ ಟಾಪ್ ಮೆಂಬರ್‌ಗಳ ಸೈಕಾಲಜಿ ಚೆನ್ನಾಗಿ ಗೊತ್ತಿದ್ದವನು ಮಹೇಶ. ಹೆರವರ ಪ್ರಾಣ ಅವರಿಗೆ ಕಾಲಕಸ! ತಮ್ಮ ಪ್ರಾಣ ಅಮೂಲ್ಯ! ಅದನ್ನುಳಿಸಿಕೊಳ್ಳಲು ಹೆತ್ತ ತಾಯಿಯ ಗಂಟಲಿಗೆ ಚಾಕು ಹಾಕಲೂ ತಯಾರ್ ಅವರು!

"ಕಮಾನ್ ರೋಡಿಂಗ್....ಸಿಂಗ್ !" ಉತ್ತೇಜಿಸಿದ ಮಹೇಶ 'ರಾಜ'ನನ್ನು ಪ್ರೆಸ್ ಮಾಡಿ.

"ಕೋಬ್ರಾ....ಕೋಬ್ರಾಗೆ ಒಪ್ಪಿಸಿದೆ ಅವಳನ್ನ !"

"ಎಲ್ಲಿದೆ ಅವನ ಸ್ಥಾವರ ?"

"ನನಗೆ....ನನಗೆ...ಸರಿಯಾಗಿ ಗೊತ್ತಿಲ್ಲ....ಕೊರಕೆಟ್ ಮೈದಾನದಲ್ಲಿರುವ ಹಳೆಯ ಸಶ್ಮಾನದಲ್ಲಿ ಹೆಲ್ಗಾಳನ್ನು ಅವನಿಗೊಪ್ಪಿಸಿದೆ. ಅಷ್ಟೇ.... ಅವನೆಲ್ಲಿದ್ದಾನೋ ನನಗೆ ಗೊತ್ತಿಲ್ಲ !"

ಹಳೆಯ ಸಶ್ಮಾನ!

ಮನಸ್ಸಲ್ಲೇ ಅಂದುಕೊಂಡ ಮಹೇಶ. ಅದನ್ನು ಹೇಳುವುದರೊಳಗೆ ಚೇಸರ್‌ನನ್ನು ಹೊಟ್ಟೆಗೆ ಹಾಕಿಕೊಂಡರು ಕೋಬ್ರಾ ಕಡೆಯವರು.

"ವೆಲ್...ಸಾಯಲು ಸಿದ್ಧನಾಗು !" ಅಂದ ಅವನಿಗೆ ಮಹೇಶ ಭೀಷಣ ನಗೆಯೊಡನೆ.

" 'ಜಿಂಕೆ'....ಪ್ಲೀಸ್....ನನ್ನ ಕೊಲ್ಲಬೇಡ....ನೀನೇನು ಹೇಳಿದರೂ ಮಾಡುತ್ತೇನೆ....ನನ್ನ ಬಿಟ್ಟು ಬಿಡು...." ಗೋಗರೆದ ರೋಡಿಂಗ್.

ಸರ್ರನೆ ಕೆಳಕ್ಕಿಳಿಯಿತು 'ರಾಜ'.

ಚಿಟ್ಟನೆ ಚೀರಿದ ರೋಡಿಂಗ್. ಅವನ ಮೂಗು ತುಂಡರಿಸಿ ಪಕ್ಕಕ್ಕೆ ಬಿತ್ತು. ವಿಲವಿಲ ಒದ್ದಾಡುತ್ತಿದ್ದ ಅವನು.

ಚೂರಿ ಇನ್ನಷ್ಟು ಕೆಳಗೆ ಜಾರಿತು, ಸೀಳಿ ಹೋದವು ರೋಡಿಂಗ್ ತುಟಿಗಳು. ಈ ಸಲ ಕೂಗಲೂ ಶಕ್ತಿಯಿರಲಿಲ್ಲ ಅವನಿಗೆ. ಕರೆಂಟ್ ಪಾಸಾದಂತೆ ಮೈ ಗಡಗಡ ಕಂಪಿಸುತ್ತಿತ್ತು.

ಅವನ ಕಣ್ರೆಪ್ಪೆಗಳನ್ನೂ ಕತ್ತರಿಸಿ ಹಾಕಿದ ಮಹೇಶ.

ರಕ್ತ....ಎತ್ತ ನೋಡಿದರೂ ರಕ್ತ....ಎಲ್ಲೆಲ್ಲೂ ಹರಿಯುತ್ತಿತ್ತು

ನೀಟಾಗಿ ಅವನೆರಡು ಪಾದಗಳನ್ನು ಸರ್ಜರಿ ಮಾಡಿದಂತೆ ದೇಹದಿಂದ ಬೇರ್ಪಡಿಸಿ ಮೇಲೆದ್ದ ಮಹೇಶ.

ಭೀಕರವಾಗಿ ನರಳುತ್ತಾ ಏನೋ ಅನ್ನ ತೊಡಗಿದ್ದ ರೋಡಿಂಗ್. ಅದೇನೆಂದು ಅರ್ಥವಾಯಿತು ಮಹೇಶನಿಗೆ.

"ಕಿಲ್ ಮಿ ಕಿಲ್‌ಮಾಸ್ಟರ್—ಕಿಲ್ ಮಿ....!" ಅರಚುತ್ತಿದ್ದ ಅವನು.

"ನೋ ರೋಡಿಂಗ್....ನೀನು ಸಾಯಬಾರದು ...ನೀ ನರಳಬೇಕೆಂದೇ ಹೋಗಿ ಮೊದಲು ಆಂಬ್ಯುಲೆನ್ಸ್‌ಗೆ ಫೋನ್ ಮಾಡುತ್ತೇನೆ ! ಇನ್ನು ಮುಂದೆ ಬದುಕಿರುವ ಪ್ರತಿಕ್ಷಣ ಸಾಯುವಾಗಿನ ಆ ಮಕ್ಕಳ ಕೂಗು ನಿನ್ನ ಕಿವಿಗೆ ಬಿದ್ದು ಜೀವಂತವಾಗಿ ದಹಿಸುತ್ತಿರು. ಇದೇ....ಇದೇ ನಾನು ನಿನಗೆ ನೀಡುವ ಶಿಕ್ಷೆ ಬಾಸ್ಟರ್ಡ್....!" ಆಕ್ರೋಶ ತಡೆಯಲಾಗದೆ ಜಾಡಿಸಿ ಒದ್ದು ಅಲ್ಲಿಂದ ಹೊರಕ್ಕೆ ನಡೆದ ಮಹೇಶ.

# 11

ಕೊರಳೆಟ್ ಮೈದಾನ ಮೆಕ್ಸಿಕನ್ ಸ್ಟ್ಯಾಂಡರ್ಡ್‌ಗೆ ಬಹಳ ಸಣ್ಣದೇ. ಯಾವುದೇ ವಿಧವಾದ ಸಾರವಿಲ್ಲದ ಭೂಮಿಯಾದ ಕಾರಣ ಸ್ಮಶಾನವಾಗಿಯೂ ಕಸ ತುಂಬುವ ಡಂಪಿಂಗ್ ಗ್ರೌಂಡಾಗಿಯೂ ಮಾಡಿಕೊಂಡಿದ್ದರು ಜನ !

ಕತ್ತಲು ನಿಧಾನವಾಗಿ ಎಲ್ಲೆಡೆ ಪಸರಿಸ ತೊಡಗಿತ್ತು. ಮೈದಾನದಲ್ಲಿ ಮುಳ್ಳು ಕಂಬಿ, ಪೊದೆಗಳು ತುಂಬಿ ಗಿಡ್ಡ ರಾಕ್ಷಸರಂತೆ ತೋರಿ ಬರುತ್ತಿದ್ದವು.

ಆ ಮೈದಾನದ ಒಂದು ಬದಿಗಿತ್ತು ಹಳೆಯ ಸೆಮಿಟರಿಯೊಂದು !

ಅದನ್ನುಪಯೋಗಿಸಿ ಬಹಳ ದಿನಗಳಾದವೆಂಬುದನ್ನು ತುಕ್ಕು ಹಿಡಿದ ಗೇಟ್, ಈಗಲೋ ಆಗಲೋ ಮುರಿದು ಬೀಳುವಂತಿರುವ ಕಾಂಪೌಂಡ್ ಮೂಲಕವೇ ಗ್ರಹಿಸಬಹುದು !

ಕಾಂಪೌಂಡ್‌ನೊಳಗೆ ಎತ್ತರವಾದ ಸಮಾಧಿಗಳು ಸಾಲಾಗಿದ್ದವು. ನಿಶ್ಶಬ್ದ ಪರಮಾವಧಿಯಲ್ಲಿತ್ತು ಅಲ್ಲಿ.

ಕಾಲ ಕೆಳಗೆ ಒಣಗಿದೆಲೆಗಳು ಗಲಗಲ ಶಬ್ದ ಮಾಡುತ್ತಿದ್ದಂತೆ ತುಕ್ಕು ಹಿಡಿದ ಗೇಟ್ ಕಡೆಗೆ ಹೆಜ್ಜೆ ಹಾಕಿದ ಮಹೇಶ.

ಗೇಟ್ ತಳ್ಳಿದೊಡನೆ ಕಿರ್ರೆಂಬ ಶಬ್ದದೊಡನೆ ತೆರೆದುಕೊಂಡಿತದು. ಸ್ಮಶಾನದೊಳಕ್ಕೆ ಕಾಲಿಟ್ಟ ಮಹೇಶ.

ಎಲ್ಲೋ ನರಿಯೊಂದು ಊಳಿಡುತ್ತಿರುವ ಶಬ್ದ. ಎರಡು ರಣಹದ್ದುಗಳು ರೆಕ್ಕೆಗಳನ್ನು ಪಟಪಟ ಬಡಿಯುತ್ತಾ ಮಹೇಶನ ತಲೆಯ ಮೇಲಿಂದ ಹಾರಿ ಹೋದವು. ಎತ್ತರವಾದ ಮರವೊಂದರ ಮೇಲಿಂದ ಗೂಬೆಯೊಂದು

ಮಹೇಶನನ್ನೇ ಗಮನಿಸುತ್ತಿತ್ತು.

ನೇರ ಸಮಾಧಿಗಳ ಮಧ್ಯಕ್ಕೆ ಹೋದ ಮಹೇಶ.

ಮರುಕ್ಷಣ ಅವನ ಸುತ್ತಲೂ ಇದ್ದ ಸಮಾಧಿಗಳ ಪಕ್ಕದಿಂದ ದೆವ್ವಗಳಂತಿದ್ದ ಹೊರಕ್ಕೆ ಬಂದರು ಅರ್ಧ ಡಜನ್ ದೃಢಕಾಯರು.

"ಡೋಂಟ್ ಮೂವ್ ಕಿಲ್‌ಮಾಸ್ಟರ್....ಮೂವ್ ಆದರೆ ನಿನ್ನ ದೇಹ ಚಿಂದಿ !" ಅವರಲ್ಲೊಬ್ಬ ಕಟು ಧ್ವನಿಯಲ್ಲೆಚ್ಚರಿಸಿದ.

ಪ್ರಶಾಂತವಾಗಿ ಅವರತ್ತ ನೋಡಿದ ಮಹೇಶ. "ಡೋಂಟ್ ವರಿ ಬಾಯ್ಸ್....ನಾನು ನಿಮಗೆ ಶರಣಾಗಲೆಂದೇ ಬಂದೆ. ನನ್ನ ಬಳಿ ಯಾವುದೇ ಆಯುಧಗಳಿಲ್ಲ...ಬರಿಗೈಗಳೊಡನೆ ನನ್ನ ಸೋಲು ಅಂಗೀಕರಿಸಿ ಕೋಬ್ರಾ ಬಳಿ ಮಾತನಾಡಲೆಂದೇ ಬಂದೆ !" ಅಂದ.

ಕ್ಷಣ ಒಬ್ಬರ ಮುಖಗಳನ್ನೊಬ್ಬರು ನೋಡಿಕೊಂಡರು ದೃಢಕಾಯರು. ಒಬ್ಬನ ಸನ್ನೆಯಂತೆ ಸ್ಟೆನ್‌ಗನ್‌ನೊಡನೆ ಮಹೇಶನನ್ನು ಸಮೀಪಿಸಿದ ಒಬ್ಬ ದೃಢಕಾಯ. ಮಹೇಶನ ಬಟ್ಟೆಗಳನ್ನು ಕೇರ್‌ಫುಲ್ಲಾಗಿ ಚೆಕ್ ಮಾಡಿ ಯಾವುದೇ ಆಯುಧಗಳಿಲ್ಲವೆಂದು ಅನೌನ್ಸ್ ಮಾಡಿದ. ಆ ಮಾತಿಂದ ಅಲ್ಲಿಯವರೆಗೆ ಟೆನ್ಷನ್‌ನಲ್ಲಿದ್ದ ದೃಢಕಾಯರುಗಳೆಲ್ಲಾ ತುಸು ರಿಲಾಕ್ಸ್ ಆದರು. ಆದರೂ ಗನ್ಸ್ ಮಹೇಶನತ್ತಲೇ ನೋಡುತ್ತಿದ್ದವು.

"ಮುಂದಕ್ಕೆ ನಡಿ 'ಜೋಕೆ' ! ಯಾವುದೇ ಟ್ರಿಕ್ಸ್ ಮಾಡಲೋಗದೆ ಹೆಜ್ಜೆ ಹಾಕು. ಮುಂದಿರುವವನ ಮುಟ್ಟಲೋದರೆ ಹಿಂದೆ ಐದು ಗನ್‌ಗಳಿವೆ ಎಂಬುದು ನೆನಪಿರಲಿ....ಮೈಂಡಿಟ್ !" ಅನ್ನುತ್ತಾ ಮಹೇಶನ ಮುಂದಕ್ಕೆ ಬಂದು ಮಿಕ್ಕವರಿಗೆ ಸನ್ನೆ ಮಾಡಿದ ಆ ದೃಢಕಾಯ. ಮಿಕ್ಕವರು ಮಹೇಶನಿಗೆ ಅರ್ಧ ಚಂದ್ರಾಕಾರದಲ್ಲಿ ಕವರ್ ಆದರು.

ಮುಂದೆ ನಡೆಯುತ್ತಿದ್ದ ದೃಢಕಾಯನನ್ನು ಫಾಲೋ ಮಾಡಿದ ಮಹೇಶ. ನೇರ ನಡೆದ ಅವನು ಎಲ್ಲಕ್ಕಿಂತಾ ದೊಡ್ಡದಾಗಿ ಕಾಣಿಸುತ್ತಿದ್ದ ಒಂದು ಸಮಾಧಿಯ ಮುಂದೆ ನಿಂತು ಅದರ ಮೇಲೆ ಕೈನಿಂದ ತಟ್ಟಿದ.... ಮನೆ ಬಾಗಿಲಂತೆ !

ನಿಮಿಷದ ನಿಶ್ಶಬ್ದ ನಂತರ ಆ ಸಮಾಧಿಯ ಮೇಲ್ಭಾಗ ಮೆಲ್ಲಗೆ ಪಕ್ಕಕ್ಕೆ ಸರಿದು ಒಳಕ್ಕಿಳಿಯಲು ಮೆಟ್ಟಿಲುಗಳು ಕಾಣಿಸಿದವು !

ಯಾವುದೋ ಅಂಡರ ಗ್ರೌಂಡ್ ಚೇಂಬರ್ ದಾಟಿ ಒಳಕ್ಕೆ ಹೋಗುತ್ತಿರುವಂತೆ ಸುರಂಗ ಮಾರ್ಗವೊಂದರಲ್ಲಿ ನಿಧಾನವಾಗಿ ಕೆಳಕ್ಕಿಳಿಯ ತೊಡಗಿದ್ದ ಅವನು. ಅಷ್ಟು ಇಕ್ಕಟ್ಟಾದ ಪ್ರದೇಶದಲ್ಲಿ ಆ ದೃಢಕಾಯರನ್ನು ಆಟವಾಡಿಸಬಹುದೆಂಬುದೇನೋ ನಿಜವೇ. ಆದರೆ ಅವರಲ್ಲೊಬ್ಬನ ಬುಲೆಟ್ ಸಾಕು ತನ್ನನ್ನು ಮೇಲ್ಗಾಡಿಗೆ ರವಾನಿಸಲು ! ಅದಲ್ಲ ತನ್ನ ಯೋಜನೆ !

ಸುಮಾರು ಎರಡು ನಿಮಿಷಗಳ ನಂತರ ಮೆಟ್ಟಿಲುಗಳು ಎಂಡಾಗಿ ನೆಲ ಸಮತಟ್ಟಾಯಿತೆಂದು ಗ್ರಹಿಸಿದ ಮಹೇಶ. ಒರಟಾಗಿರುವ ಬಂಡೆಗಲ್ಲುಗಳ ಮೇಲೆ ನಡೆಯುತ್ತಿರುವ ಫೀಲಿಂಗ್‌ನೊಡನೆ ಮುಂದಕ್ಕೆ ನಡೆದ. ಕಾರ್ಗತ್ತಲು ಮಾತ್ರ ಮೊದಲಿನಂತೆಯೇ. ಮುಂದೆ ನಡೆಯುತ್ತಿರುವ ದೃಢಕಾಯನ ಹೆಜ್ಜೆಯ ಶಬ್ದದ ವಿನಹ ಅಷ್ಟು ಸನಿಹದಲ್ಲಿದ್ದರೂ ಅವನ ಆಕಾರವೂ ಕಾಣದಷ್ಟು ಕತ್ತಲಲ್ಲಿ !

ಇನ್ನೆಷ್ಟು ನಿಮಿಷ ಎತ್ತ ಹೋಗುತ್ತಿರುವೆವೆಂದು ತಿಳಿಯದ ಆಯೋಮಯ ಸ್ಥಿತಿಯಲ್ಲಿ ನಡೆದ ಮೇಲೆ ಬೆಳಕು ಒಮ್ಮೆಂದೊಮ್ಮೆಲೇ ಅವನ ಕಣ್ಣ ಮುಂದೆ ಪ್ರತ್ಯಕ್ಷವಾಯಿತು. ತಟಕ್ಕನೆ ಕಣ್ಣು ಮುಚ್ಚಿಕೊಂಡ ಆ ತೀಕ್ಷ್ಣತೆಗೆ.

"ವೆಲ್‌ಕಂ ಮಿಸ್ಟರ್ ಮಹೇಶ್....ನಿನ್ನನ್ನು ನೋಡಬೇಕೆಂದು ನಾನು....ಬಹುಶಃ ನನ್ನ ಭೇಟಿಯಾಗಬೇಕೆಂದು ನೀನೂ ಆತುರದೊಡನೆ ಎದುರು ನೋಡುತ್ತಿದೆವೆನಿಸುತ್ತದೆ. ವೆಲ್‌ಕಂ...!" ಮಧುರವಾಗಿ ಯಾರೋ ಹೆಣ್ಣು ಮಾತಾಡುತ್ತಿರುವಂತೆ ಕೇಳಿಸಿ ಕಣ್ಣು ತೆರೆದ ಮಹೇಶ.

ಹಠಾತ್ತನೆ ತಾನೊಂದು ಅತ್ಯಾಧುನಿಕ ಬಂಗಲೆಯ ದೊಡ್ಡ ಹಾಲ್‌ನಲ್ಲಿ ನಿಂತಿರುವಂತೆ ಭಾಸವಾಯಿತು ಅವನಿಗೆ.

ಎದುರಿಗೆ ಕುಷನ್ಡ್ ಚೇರ್‌ನಲ್ಲಿ ಕುಳಿತಿದ್ದರಿಬ್ಬರು. ಅವರಲ್ಲೊಬ್ಬ ನನ್ನ ಗುರುತಿಸಿದ ಮಹೇಶ. ಗೋಲ್ಡನ್ ಗ್ಯಾಂಗ್ ಸುಪ್ರೀಂ ಕಮಾಂಡರ್‌ಗಳಲ್ಲೊಬ್ಬ ಅವನು ಕೀಟೋ ಅವನೆಸರು. ಅವನ ಪಕ್ಕದಲ್ಲಿರುವಾತ ಸುಮಾರು ಅರವತ್ತು ವರ್ಷಗಳ ಸ್ಥೂಲಕಾಯದ ವ್ಯಕ್ತಿ. ಅವನನ್ನಿದುವರೆಗೆ ಮಹೇಶ ನೋಡಿರದಿದ್ದರೂ ಅವನ ಕಣ್ಣು ನೋಡಿದೊಡನೆ ಯಾರೆಂದು ಗ್ರಹಿಸಿ ಬಿಟ್ಟ.

ಕ್ಲಿಪ್...ಅಲಿಯಾಸ್ ಕೋಬ್ರಾ!

ಮಹೇಶನ ಕಣ್ಣುಗಳು ಹಾಲ್ ಸುತ್ತಲೂ ವಿಗ್ರಹದಂತೆ ನಿಂತಿದ್ದ ಗ್ಯಾಂಗ್ ಪರ್ಸನಾಲಿಟಿಗಳನ್ನು ಚುಚ್ಚಿ ನೋಡಿದವು. ಅವನ ನೋಟ ಕೊನೆಗೆ ತನ್ನ ಮೇಲೇ ಕೀಲಿಸಿದ್ದನ್ನು ನೋಡಿ ಮುಗುಳ್ನಕ್ಕ ಕೀಟೋ.

"ವೆಲ್ ಕಿಲ್ ಮಾಸ್ಟರ್....ನೀನಿಲ್ಲಿಯವರೆಗೆ ಬಂದೇ ಬರುವೆಯೆಂದು ಗೊತ್ತಿತ್ತು ನನಗೆ ಎಲ್ಲೂ ಲಿಂಕ್ ಸಿಗದಂತೆ ಎಚ್ಚರವಹಿಸಿದರೂ ಬೇಟೆ ನಾಯಿಯಂತೆ ಇಲ್ಲಿಯವರೆಗೆ ಬಂದ ನಿನ್ನ ಅಮೋಘ ಚಾತುರ್ಯ... ಎಂದಿನಂತೆ ಗ್ರೇಟ್!" ಅಂದ.

ಅವನ ಮುಖವನ್ನೇ ತೀಕ್ಷ್ಣವಾಗಿ ನೋಡಿದ ಮಹೇಶ. "ನನ್ನ ಬಗ್ಗೆ ಬಹಳಷ್ಟು ಗೊತ್ತಿರಬೇಕು ನಿನಗೆ ಕೀಟೋ ...ಇಲ್ಲಿಯವರೆಗೆ ನಾನು ಬಂದಿರುವುದು ಏಕೆಂದೂ ನಿನಗೆ ಗೊತ್ತಿರಲೇ ಬೇಕು!" ಅಂದ

"ಆಫ್ ಕೋರ್ಸ್ ...ಚೆನ್ನಾಗಿ ಗೊತ್ತು! ಸಾವರ್ಣನನ್ನ ನಿನ್ನೊಡನೆ ಕರೆದೊಯ್ಯುವ ಹುಚ್ಚು ಭ್ರಮೆಯೊಡನೆ ಬಂದೆ. ಪ್ಚ್....ನಿನ್ನ ಆ ಭ್ರಮೆ ನಿಜವಾಗದೆಂದು ತಿಳಿಸಲು ಬಹಳ ಫೀಲಾಗುತ್ತಿದೆ ಫ್ರೆಂಡ್! ಇದು ಕೀಟೋ ಸ್ಥಾವರ....ಜೇಡರ ಬಲೆಯಲ್ಲಿ ಸಿಕ್ಕ ಹುಳುವಾದರೂ ಎಸ್ಕೇಪ್ ಆದ್ರೀತೇನೋ! ಆದರಲ್ಲಿ ಕಾಲಿಟ್ಟವರ್‍ಯಾರೂ ಇದುವರೆಗೆ ಸೂರ್ಯನ ಬೆಳಕು ಕಂಡಿಲ್ಲ!" ಅಂದ ಕೀಟೋ.

"ವೆಲ್....ಹಾಗಾದರೆ ಆ ರೆಕಾರ್ಡ್ ಬ್ರೇಕ್ ಮಾಡುವ ಮೊದಲ ವ್ಯಕ್ತಿ ನಾನೇ ಹಾಗೆಂದರೆ!" ಮುಗುಳ್ನಗೆಯೊಡನೆ ಹೇಳಿದ ಮಹೇಶ

ವ್ಯಂಗ್ಯ ನಗೆ ನಕ್ಕ ಕೀಟೋ "ತಪ್ಪಿಸಿಕೋ ನೋಡೋಣ....

ಒಂದೆಷ್ಟು ಮುಂಬಿಟ್ಟರೂ ನಿನಗೆ ಗೋಲ್ಡ್‌ಗ್ಯಾಂಗ್ ಏನು ಪ್ರೆಸೆಂಟ್ ಮಾಡುವುದೋ ಗೊತ್ತೇ ? ಬುಲೆಟ್........ಒಂದೇ ಒಂದು ಬುಲೆಟ್ ! ಅದು ನಿನ್ನ ಹಿಸ್ಟರಿ ಮುಗಿಸಿ ನಿನ್ನನ್ನು ಹಿಸ್ಟರಿಗೆ ಸೇರಿಸಿ ಬಿಡುತ್ತದೆ !"

"ಕೀಟೋ........ಇವನೊಡನೆ ಮಾತು ವೃಥಾ ಕಾಲಹರಣ ! ನಮಗಿರುವ ಸಮಯವೇ ಬಹಳ ಕಡಿಮೆ. ಆ ಬ್ಲಡಿ ಸಾಮರ್ಸ್ ಅವನ ಮಗಳನ್ನು ಕೊಲ್ಲುತ್ತೇವೆಂದು ಬೆದರಿಸಿದ ಮೇಲೆಯೇ ಇಂಟರ್‌ಸೆಪ್ಟರ್ ಫಾರ್ಮುಲಾ ಟ್ರಾನ್ಸ್‌ಫರ್ ಮಾಡಲು ಒಪ್ಪಿದ್ದು...ನಾವು ಮತ್ತೆ ಸಾಮರ್ಸ್‌ನನ್ನು ನೋಡಲು ಹೋಗಬೇಕು. ಫಾರ್ಮುಲಾ ಕೈಗೆ ಬಂದೊಡನೆ ನಾವಂದುಕೊಂಡಂತೆ ಅವನನ್ನು ಹೈನಾಸ್‌ಗೆ ಕೊಡಬೇಕು. ಡೀಲ್ ವಿತ್ ಹಿಮ್ ಕ್ವಿಕ್ಲಿ !" ಅಸಹನೆಯೊಡನೆಂದ ಕೋಬ್ರಾ.

"ಷ್ಯೂರ್ ಪ್ರೊಫೆಸರ್ !" ಅನ್ನುತ್ತ ತನ್ನ ಅನುಚರರ ಕಡೆಗೆ ತಿರುಗಿ ಏನೋ ಆಜ್ಞೆ ಕೊಡುವುದರಲ್ಲಿದ್ದ ಕೀಟೋ.

ಮಹೇಶನ ಮೈ ನರಗಳೆಲ್ಲಾ ಬಿಗಿದವು. ಕೊನೆಯ ಕ್ಷಣ ಬಂದು ಬಿಟ್ಟಿತು. ತಾನು ಮಾಡಿಕೊಂಡಿರುವ ಏರ್ಪಾಟುಗಳ ಮೇಲೆ ಈ ಕ್ಷಣ ಆಧಾರಿತ. ಸಾಮರ್ಸ್‌ನನ್ನು ಬಿಡಿಸುವ ಏಕೈಕ ಅವಕಾಶ... ....ನೌ ಆರ್ ನೆವರ್ !

ಮಹೇಶ ಭುಜದ ಮೇಲೆ ತೂಗಾಡುತ್ತಿದ್ದ ಲಾಂಗ್ ಕೋಟ್ ಲೈನ್ಸ್ ಸುತ್ತಲೂ ಇದ್ದ ಬಿಳಿಯ ಸಿಲ್ಕ್ ದಾರದ ಕೊನೆಯನ್ನು ಬೆರಳುಗಳ ನಡುವೆ ಇರುಕಿಸಿಕೊಂಡು ಕೋಟ್ ಏಕ್‌ದಂ ಮೇಲಕ್ಕೆಸೆದು ಬಿಟ್ಟ.

ಸಿಲ್ಕ್ ಥ್ರೆಡ್ ಕಳಚಿದೊಡನೆ ಕೋಟ್‌ಲೈನ್ಸ್ ಒಳಗೆ ಸಾಲಾಗಿ ಕಂಪ್ರೆಸ್ ಮಾಡಿ ಅಳವಡಿಸಿರುವ ಪ್ಲಾಸ್ಟಿಕ್ ಕವರ್ಸ್ ಹೊರ ಬಿದ್ದು ಒಡೆದು ಹೋದವು.

ಮರುಕ್ಷಣ ಬುಸ್ಸನೆ ಬಿಳಿಯ ಹೊಗೆ ಇಡೀ ಹಾಲ್ ಆವರಿಸ ತೊಡಗಿತು !

"ಫೈರ್ !" ಕಂಗಾಲಾಗಿ ಕೂಡಿಕೊಂಡ ಕೀಟೋ.

ಆ ವೇಳೆಗೆಲ್ಲಾ ತನ್ನ ಮೊದಲ ನಡೆ ಕಂಪ್ಲೀಟ್ ಆದೊಡನೆ ಥಂಗನೆ

ಎಗರಿ ಡ್ರೈವ್ ಮಾಡಿಬಿಟ್ಟಿದ್ದ ಮಹೇಶ. ಮರುಕ್ಷಣ ವಿಕೃತ ಶಬ್ದಗಳೊಡನೆ ಅವನಿದ್ದ ಪ್ರದೇಶವನ್ನರಸುತ್ತ ಬಂದವು ಬುಲೆಟ್ಸ್. ಅದಷ್ಟರಲ್ಲಿ ಬಿಳಿಯ ಹೊಗೆ ಅಂಡರ್ ಗ್ರೌಂಡ್ ಹಾಲನ್ನಾವರಿಸಿ ಬಿಟ್ಟಿತ್ತು!

ಬೆಲ್ಟ್ ಬದಿಯಿಂದ ರಬ್ಬರ್ ಮಾಸ್ಕೊಂದನ್ನು ತೆಗೆದು ಮೂಗಿಗಳವಡಿಸಿಕೊಂಡು ಕೇಟೋ ಕಡೆಗೆ ಓಡಿದ ಮಹೇಶ.

ಹೊಗೆ ಆವರಿಸಿದೊಡನೆ ಏನು ಮಾಡುವುದೆಂದು ತೋಚದ ಗ್ಯಾಂಗ್ ಮೆಂಬರ್ಸ್ ಸ್ಪೀಡಾಗಿ ಮುಂದಕ್ಕೆ ನುಗ್ಗಿ ಹೊಗೆಯನ್ನು ಒಳಕ್ಕೆಳೆದುಕೊಂಡು ಕಕ್ಕಾಬಿಕ್ಕಿಯಾಗಿ ಕೆಳಕ್ಕುರುಳುತ್ತಿದ್ದರು. ಅವರು ಮಾಡಿದ್ದೇ ಅವರ ಮೇಲೆ ಪ್ರಯೋಗಿಸಿದ್ದ ಮಹೇಶ!

ಮುಂದೆ ಮಹೇಶನ ಕಣ್ಣಿಗೆ ಬಿದ್ದ ಕೇಟೋ. ಉಸಿರು ಬಿಗಿ ಹಿಡಿದು ಹಾಲ್‌ನ ಒಂದು ಪಕ್ಕಕ್ಕಿದ್ದ ಬಾಗಿಲ ಕಡೆಗೆ ಓಡುತ್ತಿದ್ದ ಅವನು.

ಒಂದೆಜ್ಜೆ ಮುಂದಿಟ್ಟು ಛಂಗನೆ ಗಾಳಿಯಲ್ಲಿ ಹಾರಿದ ಮಹೇಶ. ರಣಘೋರ ಕುಂಗ್‌ಫೂ ಚಾಲೆಂಜ್ ಷೌಟ್ ಆ ಇಡೀ ಹಾಲ್ ಗದಗುಟ್ಟಿಸತೊಡಗಿದಂತೆ ಎರಡೂ ಕಾಲುಗಳನ್ನು ಒಟ್ಟುಗೂಡಿಸಿ ಕೇಟೋ ಬೆನ್ನಿಗೆ ಹಿಟ್ ಮಾಡಿದ.

ಕಿಟಾರನೆ ಕಿರುಚಿ ಮುಂದಕ್ಕೆ ಬಿದ್ದ ಅವನ ಮೇಲೆಯೇ ಲ್ಯಾಂಡಾದ ಮಹೇಶ. ಕತ್ತಿಗೆಯನ್ನು ಎರಡೂ ಕೈಗಳಲ್ಲಿಡಿದು ಒಂದು ಜರ್ಕ್ ಕೊಟ್ಟ.

ಲೊಟಕ್!

ಮುರಿದ ಕತ್ತಿಗೆಯ ಮೂಳೆಯ ಹಿಂದೆಯೇ ಬಿಸಿ ರಕ್ತ ನುಗ್ಗಿ ಬಂತು!

ಮೇಲೆದ್ದು ಅವನು ಹೋಗಬೇಕೆಂದುಕೊಂಡಿದ್ದ ದಾರಿಯಲ್ಲಿ ಓಟ ಕಿತ್ತ ಮಹೇಶ. ಅವನ ಅನುಮಾನ ದೃಢಪಡಿಸುವಂತೆ ಸಂದಿಯಂತಿದ್ದ ಆ ದಾರಿ ಅವರನ್ನು ಇನ್ನೊಂದು ಸಣ್ಣ ಹಾಲ್‌ನೊಳಕ್ಕೆ ಕರೆದೊಯ್ದಿತು,

ಅದೇ ವೇಳೆಗೇ ಹಾಲ್‌ಗೆ ಒಂದು ಪಕ್ಕದಲ್ಲಿದ್ದ ಕೊಠಡಿಯಿಂದ ಕೈಗಳನ್ನು ಹಿಂದಕ್ಕೆ ತಿರುಗಿಸಿ ಕಟ್ಟಿರುವ ಸಾಮರ್ಸ್, ಅವನ ಹಿಂದಿರುವ ಹೆಲ್ಗಾಳೊಡನೆ ಕೋಬ್ರಾ ಹೊರಕ್ಕಡಿಯಿಡುವುದರಲ್ಲಿದ್ದ.

ಮಿಂಚಿನಂತೆ ಹಾಲ್‌ನಲ್ಲಿ ಪ್ರತ್ಯಕ್ಷವಾದ ಮಹೇಶನನ್ನು ನೋಡಿ ಕ್ಷಣ ಕಂಗಾಲಾದರೂ ಸಾರ್ಜೆಂಟ್ ಕೆನ್ನಿಗೆ ಒತ್ತಿ ಹಿಡಿದಿದ್ದ ಪಿಸ್ತೂಲ ನಳಿಗೆಯನ್ನು ಮಹೇಶನ ಕಡೆಗೆ ತಿರುಗಿಸಿದ ಕೋಬ್ರಾ.

"ನನಗೆ ಅಡ್ಡ ಬಿಲ್ಲಬೇಡ ಕಿಲ್‌ಮಾಸ್ಟರ್........ಏಂತರೆ ಸಾಯುವೆಯಷ್ಟೇ !" ಸಿಡಿಲಿನಂತೆ ಗರ್ಜಿಸಿದ.

ಹೆಲ್ನಾ ಮಹೇಶನತ್ತ ಆಸೆಯೊಡನೆ ನೋಡುತ್ತಿದ್ದಳು. ಸಾರ್ಜೆಂಟ್ ವಿಲ್ಸನ್‌ನತ್ತ ನೋಟ ಬೀರುತ್ತಾ ನಿಂತಿದ್ದ. ಕೋಬ್ರಾನ ತೋರು ಬೆರಳಂತೂ ಟ್ರಿಗರ್ ಮೇಲೆ ಬಿಗಿಯತೊಡಗಿತ್ತು.

642420

ಮುಂದಕ್ಕೆ ಹೆಜ್ಜೆ ಎತ್ತಿಟ್ಟ ಮಹೇಶ.

"ಬೇಡ... ಬೇ....ಬೇಡ ಅನಾವಶ್ಯಕವಾಗಿ ಪ್ರಾಣ ಕಳೆದುಕೊಳ್ಳಬೇಡ !" ಅರಚಿದ ಕೋಬ್ರಾ.

"ಕೋಬ್ರಾ....ನಿನ್ನಂತಹ ದ್ರೋಹಿಗೆ ಪಿಸ್ತೂಲು ಫೈರ್ ಮಾಡುವ ಗುಂಡಿಗೆಯೇ ಇರಲಾರದು ! ವೆಲ್... ಹಾಗೂ ಫೈರ್ ಮಾಡಿದರೆ ಸರಿಯಾಗಿ ಗುರಿ ಹಿಡಿಯುವ ಸಾಧ್ಯತೆಯೇ ಇಲ್ಲ .. ಬುಲೆಟ್ ನನ್ನಿಂದ ಗಾವುದ ದೂರವಿರುತ್ತದೆ! ಕಮಾನ್....ಟ್ರೈ ಮಾಡು ನೋಡೋಣ....ಶೂಟ್ ಮಿ! ಶೂಟ್...." ಅನ್ನುತ್ತಾ ಇನ್ನೆರಡು ಹೆಜ್ಜೆ ಮುಂದೆ ಬಂದ ಮಹೇಶ

"ಬೇಡ ಡೋಂಟ್ ಕಮ್....ಬಂದಿತೋ ಶೂಟ್ ಮಾಡುತ್ತೇನೆ...."

"ಹಾಗಿದ್ದಲ್ಲಿ ಇನ್ನೂ ಏಕೆ ಹೆಸಿಟೇಷನ್ ? ನನ್ನ ಶರೀರ ಗಟ್ಟಿಯೋ ನಿನ್ನ ಬುಲೆಟ್ ಗಟ್ಟಿಯೋ ನೋಡೇಬಿಡೋಣ, ಶೂಟ್...." ಟಾಂಟ್ ಮಾಡಿದ ಮಹೇಶ.

ಮೇಲ್ತುಟಿಯನ್ನು ಹಲ್ಲಿನಿಂದ ಕಚ್ಚಿ ಹಿಡಿದ ಕೋಬ್ರಾ. ಟ್ರಿಗರ್ ಮೇಲೆ ಅವನ ತೋರು ಬೆರಳು ಬಿಗಿಯಿತು. ಆದರೆ ಕೈ ಮಾತ್ರ ಕಂಪಿಸತೊಡಗಿತ್ತು ! ಕೇವಲ ಹತ್ತೇ ಅಡಿಗಳ ದೂರದಲ್ಲಿದ್ದ ಮಹೇಶ ಅವನಿಗೆ

ಬೆಳುಚಿಕೊಂಡಂತೆ ಕಾಣಿಸುತ್ತಿದ್ದ....ನನಗೇನೋ ಮಾಡುತ್ತಾನೆ ಎಂದು ಗಡಗಡಿಸುತ್ತಿದ್ದ....ತಾನವನನ್ನು ಕೊಲ್ಲದ ವಿನಹ ಸಾಮರ್ಸ್ ಜೊತೆಗೆ ಇಲ್ಲಿಂದ ಪರಾರಿಯಾಗಲಾಗದು !

ಪಿಸ್ತೂಲೂ ಕಂಪಿಸುತ್ತಿತ್ತು ಟ್ರಿಗರ್‌ನಲ್ಲಿ ಚಲನೆ ಏರ್ಪಟ್ಟ ಕಾರಣ ಹ್ಯಾಮರ್ ಹಿಂದಕ್ಕೆ ಬರತೊಡಗಿತ್ತು. ಸೆಕೆಂಡ್‌ಗಳಲ್ಲ್ಯವಧಿ...ಹಿಂದಕ್ಕೆ ಪೂರ್ತಿಯಾಗಿ ಬಂದ ಹ್ಯಾಮರ್ ಬಿರುಸಾಗಿ ರಿಯಾಕ್ಟ್ ಆಯಿತು

ಧನ್....

ಎಗರಿಬಿದ್ದ ಮಹೇಶ ನೆಲದ ಮೇಲೆ ನಿಶ್ಚಲನಾಗಿ ಬಿದ್ದ ಅವನನ್ನು ನೋಡಿ ಉಸಿರೆಳೆದುಕೊಂಡ ಕೋಬ್ರಾ.

ಹೆಲ್ಗಾಗಂತೂ ಹುಚ್ಚು ಹಿಡಿದಂತಾಯಿತು. ಮಹೇಶ ತನ್ನನ್ನು ರಕ್ಷಿಸುತ್ತಾನೆಂದು ಕೊಂಡಿದ್ದಳವಳು ...ಹೀಗೆ ಬಲಿಯಾಗುತ್ತಾನೆಂದುಕೊಂಡಿರಲಿಲ್ಲ !

"ಕಮಾನ್ ಸಾಮರ್ಸ್...." ಸಾಮರ್ಸ್‌ನ ಭುಜ ಹಿಡಿದು ಮುಂದಕ್ಕೆ ತಳ್ಳಿ ಹೊರಟ ಕೋಬ್ರಾ

ಆಗಲೇ ಏನಂಚಿನ್ ಬಳ್ಳಿಯೊಂದು ತನ್ನ ಕಡೆಗೆ ಬರುತ್ತಿರುವ ಅನುಭೂತಿಯುಂಟಾಗಿ ಗಿರ್ರನೆ ತಿರುಗಿದ ಕೋಬ್ರಾ.

ಆ ಬೆಳಕಿನ ವೇಗದೊಡನೆಯೇ 'ಝೂಂ....ಮ್' ಎಂಬ ಶಬ್ದದೊಡನೆ ಹತ್ತಿರವಾದ ಆ ವಸ್ತು ಅವನ ಗಂಟಲಿಗೆ ಚುಂಬನ ನೀಡಿತು

ಮೃತ್ಯು ಚುಂಬನ !

ಮುಲುಗಲೂ ಸಾಧ್ಯವಾಗದೆ ನೆಲಕ್ಕೆ ಬಿದ್ದು ಬಿಟ್ಟ ಕೋಬ್ರಾ. ಅವನ ಕುತ್ತಿಗೆಯಲ್ಲಿಳಿದಿದ್ದ 'ಬಾಣ'ದ ಚೂಪಂಚು ಹಿಂದಿನಿಂದ ಹೊರ ಬಂದು ವಿಕೃತವಾಗಿ ಇಣುಕುತ್ತಿತ್ತು ! ಕೊನೆಯ ಕ್ಷಣದ ನರಕಯಾತನೆ ಅನುಭವಿಸತೊಡಗಿದ್ದ ಕೋಬ್ರಾ !

ಸ್ಥಾನದಲ್ಲಿ ಚಿಕಿಂಗ್ ಮಾಡುವಾಗ ಕೈಗಳನ್ನು ಜೋಡಿಸಿ ಹಾಂಗ್ಕೆ ಬೆಲ್ಟಿನ 'ಬಾಣ'ವನ್ನು ಎಸ್ಕೇಪ್ ಮಾಡಿದ್ದ ಮಹೇಶ. ಅದೇ ಕೋಬ್ರಾನ ಡೆತ್ ವಾರೆಂಟ್ ಆಗಿತ್ತು !

"ಮಹೇಶ್ ..!" ಆನಂದದೊಡನೆ ಕೂಗಿಕೊಂಡಳು ಹೆಲ್ಗಾ.

ಸತ್ತಂತೆ ಬಿದ್ದಿದ್ದ ಮಹೇಶ ಮೇಲೆದ್ದು ಅವರ ಬಳಿಗೆ ಬಂದ!

"ನಿನಗೇನೂ ಆಗಲಿಲ್ಲ ತಾನೇ?" ಕನ್‌ಫರ್ಮ್ ಮಾಡಿಕೊಳ್ಳಲು ಕೇಳಿದಳು ಹೆಲ್ಗಾ.

ಮುಗುಳ್ನಕ್ಕ ಮಹೇಶ, "ಏನೂ ಆಗಲಿಲ್ಲ ಬೇಬಿ....ಐಯಾಮ್ ಓ ಕೆ.!" ಅಂದ.

ಆರ್ಡಿನರಿ ಕೋಟ್‌ನಂತಿರುವ ಈ ಬುಲೆಟ್ ಪ್ರೂಫ್ ಕೋಟ್ ಯಾವುದಕ್ಕೂ ಇರಲಿ ಎಂದು ಸ್ಪೆಷಲ್ ಎಫೆಕ್ಟ್ಸ್ ವಿಂಗ್‌ನವರು ಬ್ರೀಫ್ ಕೇಸ್‌ನಲ್ಲಿ ಹಾಕಿ ಕಳಿಸಿದ್ದನ್ನು ಪ್ರಿಕಾಶನ್‌ಗಾಗಿ ಈ ದಿನ ಧರಿಸಿ ಬಂದಿದ್ದ ಅವನು. ಆ ಧೈರ್ಯದಿಂದಲೇ ಕೋಬ್ರಾನನ್ನು ಯಾಮಾರಿಸಿ, ಸತ್ತಂತೆ ಬಿದ್ದು ಅವನ ಕಣ್ಣುಗಳು ಡೈವರ್ಟ್ ಆದೊಡನೆ ತನ್ನ ಕೈ ಚಳಕ ತೋರಿದ್ದ!


ಎಲ್ಲಿಂದಲೋ ಹೆಜ್ಜೆಯ ಶಬ್ದಗಳು ಕೇಳಿ ಬರತೊಡಗಿದವು.

"ಕಮಾನ್... ಮೊದಲಿಲ್ಲಿಂದ ಹೊರ ಬಿದ್ದರೆ ಒಳ್ಳೆಯದು! ಆಮೇಲೆ ಮಿಕ್ಕ ವಿಷಯಗಳನ್ನು ಮಾತಾಡಿಕೊಳ್ಳಬಹುದು" ಅನ್ನುತ್ತ ಅವರ ಬಂಧನಗಳನ್ನು ಕಳಚಿ ಮುಂದಕ್ಕೆಳೆದೊಯ್ದ ಮಹೇಶ ಅಂಡರ್ ಗ್ರೌಂಡ್‌ನಿಂದ ಮೇಲಕ್ಕೆ ಕರೆದೊಯ್ಯುವ ದಾರಿಯೊಂದನ್ನರಸುತ್ತಾ.

ತಂಪೆ ಸ್ವಲ್ಪ ಮುಂದೆ ಹೋದೊಡನೆಯೇ ಮಹೇಶನ ಕೈ ಹಿಡಿದು ಲೈಟಾಗಿ ಅಮುಕಿದಳು ಹೆಲ್ಗಾ.

'ನಿನ್ನ ಹೆಲ್ಪ್‌ಗೆ ಕೃತಜ್ಞತೆ ತೋರಿಸುವ ಸಮಯ ಮುಂದಿದೆ' ಎಂದು ಸೂಚ್ಯವಾಗಿ ಅವಳು ಹೇಳಿದ ರೀತಿ ಅದು!

—: ಮುಗಿಯಿತು :—



# ಸಪ್ತಗಿರಿ ಪ್ರಕಾಶನ

[illegible] [illegible] ಗಲ್ಲಿ, ಬೆಂಗಳೂರು-560053.